ಶ್ರೀ. ಎಸ್. ಎಸ್. ಪಾಟೀಲ್: ಹಾಗಾದರೆ ಅದನ್ನು ತೆಗೆದುಕೊಂಡರೆ ಇದನ್ನೂ ತೆಗೆದುಕೊಳ್ಳಿ. ಒಟ್ಟಿನಲ್ಲಿ ಇದನ್ನು ಮುಂದಕ್ಕೆ ಹಾಕಬೇಡಿ.

ಉಪಾಧ್ಯಕ್ಷರು: ಈಗ ಎರಡೂ ಮಾಡೋಣ.

ಶ್ರೀ. ಎಸ್. ಎಸ್. ಪಾಟೀಲ್: ನಾನು ಅದಕ್ಕೆ ಒಪ್ಪಿಕೊಳ್ಳುತ್ತೇನೆ. ಒಟ್ಟಿನಲ್ಲಿ ಧೂಮಪಾನ ವಿಧೇಯಕವನ್ನು ದಯವಿಟ್ಟು ಮುಂದಕ್ಕೆ ಹಾಕಬೇಡಿ. ಇದು ಬಹಳ ಮಹತ್ವದ ವಿಧೇಯಕವಾಗಿದೆ. ಹೋದ ಅಧಿವೇಶನದಿಂದ ಮುಂದಕ್ಕೆ ಹೋಗುತ್ತಿದೆ.

ಉಪಾಧ್ಯಕ್ಷರು: ಈಗ ಜಲ ಸಂಪನ್ಮೂಲ ಸಚಿವರು ಇಲ್ಲ. ಅವರನ್ನು ಕರೆಸೋಣ. ಅಲ್ಲಿಯವರೆಗೆ ಇದೊಂದು ಬಿಲ್ ತೆಗೆದುಕೊಳ್ಳೋಣ. ಆರೋಗ್ಯ ಸಚಿವರು ತಾವು ವಿಧೇಯಕವನ್ನು ಮೂವ್ ಮಾಡಿ.

## 15. ಶಾಸನ ರಚನೆ

## ಕರ್ನಾಟಕ ಧೂಮಪಾನ ನಿಷೇಧ ಮತ್ತು ದೂಮಪಾನ ಮಾಡದವರ ಆರೋಗ್ಯ ರಕ್ಷಣೆ ವಿದೇಯಕ 2001 ಪರ್ಯಾಲೋಚನಾ ಪ್ರಸ್ತಾವ

+ಶ್ರೀ. ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು): ಮಾನ್ಯ ಉಪಾಧ್ಯಕ್ಷರೆ, "ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 2001ನೇ ಸಾಲಿನ ಕರ್ನಾಟಕ ಧೂಮಪಾನ ನಿಷೇದ ಮತ್ತು ಧೂಮಪಾನ ಮಾಡದವರ ಆರೋಗ್ಯ ರಕ್ಷಣೆ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ".

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ. ಕಾಗೋಡು ತಿಮ್ಮಪ್ಪ: ಮಾನ್ಯ ಉಪಾಧ್ಯಕ್ಷರೆ, ಜನರ ಆರೋಗ್ಯವನ್ನು ಇಂದು ಧೂಮಪಾನದಿಂದ ರಕ್ಷಣೆ ಮಾಡಬೇಕಾದ ಅಗತ್ಯವಿದೆ ಈ ದಿಸೆಯಲ್ಲಿ ಈ ಮಸೂದೆಯನ್ನು ತರಲಾಗಿದೆ. ಈಲಾಗಲೇ ರಾಜ್ಯದಲ್ಲಿ ಎರಡು ಕಾನೂನುಗಳು ಜಾರಿಯಲ್ಲಿ ಇದ್ದರೂ ಕೂಡ ಅದು ಪರಿಣಾಮಕಾರಿಯಾಗಿ ಇವೊತ್ತು ಜನರ ಮೇಲೆ ಬೀರಿಲ್ಲ. ಆದುದರಿಂದ ಇಂತಹ ಒಂದು ಹೊಸ ಕಾನೂನು ತರಬೇಕಾದಂಥ ಅಗತ್ಯವಿದೆ. ಇದರ ಜೊತೆಗೆ ಇತ್ತೀಚೆಗೆ ಸುಪ್ರೀಂಕೋರ್ಟ್‌ನವರೂ ಕೂಡ ಒಂದು ಆಜ್ಞೆಯನ್ನು ಹೊರಡಿಸಿ ಸರ್ಕಾರಗಳು ಈ ದಿಸೆಯಲ್ಲಿ ತೀವ್ರತರವಾದ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು, ಇದರ ಜೊತೆಯಲ್ಲಿ ಆಡಿಟೋರಿಯಮ್ಸ್, ಹಾಸ್ಪಿಟಲ್ಸ್, ಹೆಲ್ತ್ ಇನ್ಸ್‌ಟ್ಯೂಶನ್ಸ್, ಎಜುಕೇಶನ್ ಇನ್ಸ್‌ಟ್ಯೂಶನ್ಸ್, ಲೈಬ್ರರಿ, ಕೋರ್ಟ್ ಬಿಲ್ಡಿಂಗ್ಸ್, ಪಬ್ಲಿಕ್ ಆಫೀಸ್, public conveyance including Railways ವಾಹನ ಮತ್ತು ಕಟ್ಟಡಗಳಲ್ಲಿ ಈ ಬೀಡಿ ಸೇದುವುದನ್ನು ನಿಷೇಧಿಸತಕ್ಕಂಥದ್ದು. ಜೊತೆಗೆ ಜಾಹಿರಾತನ್ನು ಕೂಡ ನಿಷೇಧಿಸತಕ್ಕ ಉದ್ದೇಶ ಇದರಲ್ಲಿ ಇದೆ. ಹಾಗೆಯೇ 18 ವರ್ಷಕ್ಕಿಂತ ಕೆಳಗಿನ ವಯಸ್ಸಿನ ಯುವಕರಿಗೆ ಈ ಧೂಮಪಾನ ಮಾಡತಕ್ಕಂಥ ವಸ್ತುಗಳನ್ನು ಮಾರಾಟ ಮಾಡುವುದನ್ನು ಕೂಡ ಇದರಿಂದ ಪ್ರತಿಬಂಧ ಮಾಡತಕ್ಕಂಥ ಉದ್ದೇಶ ಈ ಮಸೂದೆಯಲ್ಲಿ ಅಡಕವಾಗಿದೆ. ಆದಕಾರಣ ಇದನ್ನು ಸಾರ್ವಜನಿಕ ಹಿತದೃಷ್ಟಿಯಿಂದ ಮಂಜೂರಾತಿ ನೀಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ. ಎಸ್. ಸುರೇಶ್‌ಕುಮಾರ್: ಮಾನ್ಯ ಸಚಿವರು ಈಗಾಗಲೇ ಎರಡು ಕಾನೂನುಗಳು ಜಾರಿಯಲ್ಲಿ ಇವೆ, ಆದರೆ ಅವು ಎಫೆಕ್ಟಿವ್ ಆಗಿಲ್ಲ ಎಂದು ಹೇಳಿದಿರಲ್ಲಾ. ಯಾವುದು ಆ ಎರಡು ಕಾನೂನು? ಸ್ವಲ್ಪ ಹೇಳ್ತೀರಾ

**SRI KAGODUTHIMMAPPA:-** Prohibition of smoking in show Houses and Public Places Act, 1963 and karnataka Police Act, 1963.

ಶ್ರೀ. ವಿಶ್ವೇಶ್ವರ ಹೆಗಡೆ ಕಾಗೇರಿ(ಅಂಕೋಲ): ಮಾನ್ಯ ಉಪಾಧ್ಯಕ್ಷರೆ, ಒಂದ್ನಿಮಿಷ ಮಾತನಾಡ್ತೇನೆ. ಇದು ಬಹಳ ಒಳ್ಳೆಯ ಮಸೂದೆ ಇದೆ. ನಾವು ಈ ಮಸೂದೆಯನ್ನು ಸ್ವಾಗತ ಮಾಡ್ತಾ ಇದ್ದೇವೆ. ಆದರೆ ವ್ಯಾವಹಾರಿಕವಾಗಿ ಸರ್ಕಾರ ಎಷ್ಟು ಗಂಭೀರವಾಗಿ ಈ ವಿಷಯದ ಬಗ್ಗೆ ಚಿಂತನೆ ಮಾಡಿದೆ ಎನ್ನುವುದರ ಬಗ್ಗೆ ಮಾನ್ಯ ಸಚಿವರು ಇನ್ನಷ್ಟು ವಿವರಗಳನ್ನು ಕೊಡಬೇಕು. ಈಗಿರುವಂಥ ನಮ್ಮ ಪೋಲಿಸ್ ವ್ಯವಸ್ಥೆಯಲ್ಲಿ ಕಳುಹಿಸಲಿಕ್ಕೆ ಆಗುವುದಿಲ್ಲ.

ಶ್ರೀ. ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು): 'ಹಿಡಿದಿಲ್ವಾ, ಹಿಡಿದಿಲ್ವಾ'

ಶ್ರೀ. ವಿಶ್ವೇಶ್ವರ ಹೆಗಡೆ ಕಾಗೇರಿ: ಎಲ್ಲೋ ಆಕಸ್ಮಿಕವಾಗಿ ಸಿಕ್ಕಿದವರು ಸಿಕ್ಕಿದ್ದಾರೆ.

ಶ್ರೀ. ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು): ಏನ್ಮಾತಾಡ್ತಾ ಇದ್ದೀರಿ ನೀವು?

ಶ್ರೀ. ವಿಶ್ವೇಶ್ವರ ಹೆಗಡೆ ಕಾಗೇರಿ: ಉಪಾಧ್ಯಕ್ಷರೆ, ನನಗೆ ಮಾತಾಡ್ಲಿಕ್ಕೆ ಬಿಟ್‌ಬಿಡಿ ಸಾರ್. ಮಧ್ಯ ಇಲ್ಲಿ ಮಾತನಾಡಿದರೆ ನನಗೆ ತೊಂದರೆಯಾಗುತ್ತದೆ.

ಶ್ರೀ. ಬಿ.ಆರ್. ಯಾವಗಲ್: ಅವರು ಮಾತನಾಡೋದು ನೋಡಿ?

**SRI. A. KRISHNAPPA:-** He can't say like that.

ಶ್ರೀ. ವಿಶ್ವೇಶ್ವರ ಹೆಗಡೆ ಕಾಗೇರಿ: ಉಪಾಧ್ಯಕ್ಷರೆ, ವೈಯಕ್ತಿಕವಾಗಿ ಯಾರ ಬಗ್ಗೆಯೂ ನನ್ನ ಆರೋಪ ಇಲ್ಲ.

ಶ್ರೀ. ವೈ.ಕೆ. ರಾಮಯ್ಯ: ನಾಲಿಗೆ ಹಿಡಿತದಲ್ಲಿರಲಿ. ಈಗ ಹಿಡಿತ ಇಲ್ಲ. ಆರೋಪ ಇರಲಿ. ಮೊದಲು ನಿನ್ನ ನಾಲಿಗೆ ಮೇಲೆ ನಿನ್ನ ಹಿಡಿತವಿಲ್ಲ. ಮಾನ್ಯ ಉಪಾಧ್ಯಕ್ಷರೆ ಅವರ ನಾಲಿಗೆ ಮೇಲೆ ಹಿಡಿತ ಇಟ್ಟುಕೊಳ್ಳಬೇಕೆಂದು ತಾವು ಅವರಿಗೆ ಹೇಳಬೇಕು. abstrack ....................................ದೊಡ್ಡ ಮನುಷ್ಯ ಆಗುವುದು.

ಶ್ರೀ. ವಿಶ್ವೇಶ್ವರ ಹೆಗಡೆ ಕಾಗೇರಿ: ಸಾರ್, ತಪ್ಪಿಸಿಕೊಂಡವರು ತಪ್ಪಿಸಿಕೊಂಡು ಹೋಗ್ತಾ ಇದ್ದಾರೆ. ಅವರಿಗೆ ಹಿಡೀಲಿಕ್ಕೆ ಆಗಲಿಲ್ಲ. ಇದು ಸತ್ಯ ಇದೆ. ಇದು ಎಲ್ಲರಿಗೂ ಗೊತ್ತಿರುವಂಥ ಸತ್ಯ. ನಾನು ಹೇಳ್ತಾ ಇರೋದು, ಸರ್ಕಾರ ಎಷ್ಟು ಗಂಭೀರವಾಗಿ ಯೋಚನೆ ಮಾಡಿದೆ ಎನ್ನುವುದರ ಬಗ್ಗೆ ಸರ್ಕಾರ ಹೇಳಬೇಕು. ನಾನು ಏನು ಹೇಳಿದೆ, ಇವೊತ್ತಿನ ನಮ್ಮ ಪೋಲಿಸ್ ವ್ಯವಸ್ಥೆಯಲ್ಲಿ ಇರುವಂಥ ವ್ಯವಸ್ಥೆಯಲ್ಲಿ ಮರ್ಡ್‌ರ್ ಮಾಡಿದವರನ್ನು ಸಹ ಹಿಡೀಲಿಕ್ಕೆ ಕೆಲವೊಮ್ಮ ಆಗುವುದಿಲ್ಲ. ತಪ್ಪಿಸಿಕೊಂಡು ಹೋದವರು ತಪ್ಪಿಸಿಕೊಂಡು ಹೋಗ್ತಾ ಇದ್ದಾರೆ.

ಶ್ರೀ. ಕಾಗೋಡು ತಿಮ್ಮಪ್ಪ: ಗುಜರಾತ್‌ನಲ್ಲಿಯೆ?

ಶ್ರೀ. ವಿಶ್ವೇಶ್ವರ ಹೆಗಡೆ ಕಾಗೇರಿ: ನೋಡ್ರಿ ಮತ್ತೆ ಗುಜರಾತ್‌ನ ಹಾಗೋ, ನೀವು ಕರ್ನಾಟಕದ ಹಾಗೋ Karimlalaನಗೋ ಎಂದು ಕೇಳಿದರೆ ಮತ್ತೆ ಬೇರೆ ಆಗತ್ತೆ. ಈಗ ವಿಷಯ ಇಷ್ಟೆ. ಮೊದಲು ಬಿಲ್‌ನ್ನು ನಾನು ಸ್ವಾಗತ ಮಾಡಿದ್ದೇನೆ. ಇದನ್ನು ಮೊದಲೇ ಹೇಳಿದ್ದೇನೆ.

ಶ್ರೀ. ವೈ.ಕೆ. ರಾಮಯ್ಯ: ಮಾನ್ಯ ಉಪಾಧ್ಯಕರೆ, ಮಾನ್ಯ ಸದಸ್ಯರಿಗೆ ದಯಮಾಡಿ ನಾಲಿಗೆ ಮೇಲೆ ಹಿಡಿತ ಇಟ್ಟುಕೊಳ್ಳುವುದಕ್ಕೆ ನೀವು ಹೇಳಬೇಕು. ತಮ್ಮಲ್ಲಿ ಪ್ರಾರ್ಥನೆ ಮಾಡುತ್ತಿದ್ದೇನೆ.

ಅವರಿಗೆ ಉದ್ದೇಶ ಇಲ್ಲದೇ ಇರಬಹುದು. ಆದರೆ ನಾಲಿಗೆ ಮೇಲೆ ಹಿಡಿತ ಇಲ್ಲ ಅವರಿಗೆ ಸ್ವಲ್ಪ ಅನೇಕ ಸಂದರ್ಭಗಳಲ್ಲಿ ಈ ರೀತಿ ಆಗಿದೆ. ಅದುದರಿಂದ ಹಿಡಿತ ಇಟ್ಟುಕೊಳ್ಳುವುದಕ್ಕೆ ಹೇಳಿ.

ಉಪಾಧ್ಯಕ್ಷರು: - ಆಯಿತು. ತಾವು ದಯವಿಟ್ಟು ಕುಳಿತುಕೊಳ್ಳಿ.

**SRI Y.K RAMAIAH**:- Please ask him to restrain himself. Otherwise he will face dire consequences he will face serious consequences. He is not the embodiment of all the virtures here.

(ಗೊಂದಲ)

ಶ್ರೀ. ಎಸ್. ಸುರೇಶ್‌ಕುಮಾರ್: ಅದಕ್ಕೇ ಹೇಳೋದು. ಬೆಂಕಿ ಇಲ್ಲದೇ ಹೊಗೆ ಆಡೋಲ್ಲ ಎಂದು . smoking....

ಶ್ರೀ. ವೈ.ಕೆ. ರಾಮಯ್ಯ: ಅವರು ಕ್ಷಮೆ ಕೇಳಬೇಕು.

(ಗೊಂದಲ)

ಶ್ರೀ. ಸಿ.ಚೆನ್ನಿಗಪ್ಪ: ಮಾನ್ಯ ಉಪಾಧ್ಯಕ್ಷರೆ, ಪೆಟ್ರೋಲ್ ಪಂಪ್ ವಿಚಾರ ಇದೆ. ಮಾನ್ಯ ಉಪಾಧ್ಯಕ್ಷರೆ, ಪೆಟ್ರೋಲ್ ಪಂಪ್ ವಿಚಾರದಲ್ಲಿ ಎಲ್ಲಾ ಪಕ್ಷದವರನ್ನು ಎಂದರೆ ಕಾಂಗ್ರೆಸ್, ಬಿಜೆಪಿ............ ಇದು ಚರ್ಚೆಯಾಗುವ ಅವಶ್ಯಕತೆ ಇಲ್ಲ. ಈ ಸದನದ ಸಮಯವನ್ನು ಕಳೆಯುವಂತಹ ಅವಶ್ಯಕತೆ ಇಲ್ಲ. ದಯಮಾಡಿ ಇದನ್ನು ಕೊನೆಗಾಣಿಸಿ, ರಾಜ್ಯದ ಬರಗಾಲ ಪರಿಸ್ಥಿತಿ ಏನಿದೆ ಅದರ ಬಗ್ಗೆ ಚರ್ಚೆಗೆ ತೆಗೆದುಕೊಳ್ಳೋಣ.

ಶ್ರೀ. ಹೆಚ್.ಸಿ.ಶ್ರೀಕಂಠಯ್ಯ (ಕಂದಾಯ ಸಚಿವರು): ಮಾನ್ಯ ಉಪಾಧ್ಯಕ್ಷರೆ, ಪೆಟ್ರೋಲ್ ಬಂಕ್‌ಗಳ ವಿಚಾರವನ್ನು ಮಾನ್ಯ ಚೆನ್ನಿಗಪ್ಪನವರು ಹೇಳುತ್ತಿದ್ದಾರೆ. ಪೆಟ್ರೋಲ್ ಬಂಕ್‌ಕ್ಯಾನ್ಸಲ್ ಮಾಡಿರುವುದು 2002 ರಿಚೆಗೆ ಮೊದಲಿದ್ದು ಅಲ್ಲಿ

ಉಪಾಧ್ಯಕ್ಷರು: ಒಬ್ಬೊಬ್ಬರು ಮಾತನಾಡಿ.

ಶ್ರೀ. ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಉಪಾಧ್ಯಕ್ಷರೆ, ನಾನು ಹೇಳಿದ್ದು, ನಾವು ಒಂದು ಪಕ್ಷದ ನಾಯಕರಾಗಿ, ಸಂಸತ್ತಿನಲ್ಲಿ, ಶಾಸನಸಭೆಯಲ್ಲಿ, ಮೇಲ್ಮನೆಯಲ್ಲ ಮತ್ತು ಕೆಳ ಮನೆಯಲ್ಲೆ ಕೆಲಸ ಮಾಡಿ ಗಂಭೀರವಾಗಿ ಕುಳಿತಿದ್ದೇವೆ. ನಾವಾದರೂ ಪ್ರಾಮಾಣಿಕವಾಗಿ ಇದ್ದೇವೆಂದು ಜನರಿಗೆ ಗೊತ್ತಾಗುವುದು ಬೇಡವೆ? ಮತ್ತೆ ಚರ್ಚೆ ಆಗಬೇಕಾಗಿರುವುದು ಆಗದೆ ಇದ್ದರೆ ಜನಕ್ಕೆ ಹೇಗೆ ಗೊತ್ತಾಗುತ್ತದೆ?

ಮಾನ್ಯ ಸದಸ್ಯರು: ಮಾನ್ಯ ಉಪಾಧ್ಯಕ್ಷರೆ, ಕಡತವನ್ನು ತರಿಸಿ ನೋಡಿ. ಆ ಕಡತದಲ್ಲಿ ಏನು ಹೇಳಿದ್ದಾರೆ ಎಂದು.

ಶ್ರೀ. ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಉಪಾಧ್ಯಕ್ಷರೆ, ಈ ಬಿಲ್ಲನ್ನು ಮುಕ್ತ ಮನಸ್ಸಿನಿಂದ ಸ್ವಾಗತಿಸುತ್ತಿದ್ದೇನೆ. ನಮಗೆ..

(ಗೊಂದಲ)

ಶ್ರೀ. ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು): ಮಾನ್ಯ ಉಪಾಧ್ಯಕ್ಷರೆ, ಏನು ನಡೆಯುತ್ತಿದೆ? ಸದಸ್ಯರು ಮಾತನಾಡುವುದು ಬೇಡವೆ ಹೇಳಿ. ಈ ಬಿಲ್ ಪಾಸ್ ಆಗಬೇಕೊ.....

ಶ್ರೀ. ಎ. ಕೃಷ್ಣಪ್ಪ: ಮಾನ್ಯ ಉಪಾಧ್ಯಕ್ಷರೆ, ಈಗ ಸದಸ್ಯರು ಮಾತನಾಡುತ್ತಾ ಕೆಲವು ಪದಗಳನ್ನು ಉಪಯೋಗಿಸಿದ್ದಾರೆ.

(ಗೊಂದಲ)

ಶ್ರೀ. ಎ. ಕೃಷ್ಣಪ್ಪ: ಮಾನ್ಯ ಉಪಾಧ್ಯಕ್ಷರೆ, ಅದು ಕಡತದಿಂದ ಹೋಗಬೇಕು. ಯಾರು ಇವರು ಹೀಗೆ ಮಾತನಾಡುವುದಕ್ಕೆ? ಯಾರು ಇವರಿಗೆ ಈ ಅಧಿಕಾರ ಕೊಟ್ಟಿದ್ದು?

(ಗೊಂದಲ)

ಶ್ರೀ. ಜಗದೀಶ್ ಶೆಟ್ಟರ್ : ಮಾನ್ಯ ಉಪಾಧ್ಯಕ್ಷರೆ, ಜವಾಬ್ದಾರಿ ಮಂತ್ರಿಯಾಗಿ ಏನು ಹೇಳುತ್ತಿರುವುದು .......... ಸಿ.ಎಂ.ಸಿ ಯಲ್ಲಿ ಏನು ನಡೆದಿದೆ ಎಂಬುದು ಗೊತ್ತಿದೆ.
ಶ್ರೀ. ಎ. ಕೃಷ್ಣಪ್ಪ: ಶವದ ಪೆಟ್ಟಿಗೆಗಳ್ನು ಮಾರಿಕೊಂಡವರು. ನಿಮಗೆ ನಾಚಿಗೆ ಆಗುವುದಿಲ್ಲವೆ? ಮಾರ್ಯದೆಯಿಂದ ಇರಿ.

(ಗೊಂದಲ)

ಉಪಾಧ್ಯಕ್ಷರು: ಆ ಪದವನ್ನು ಕಡತದಿಂದ ತೆಗೆದು ಹಾಕಿ. ಇನ್ನು ವಿಶ್ವೇಶ್ವರ ಹೆಗಡೆಯವರು ಏನು ಮಾತನಾಡಿದ್ದಾರೆ ಎನ್ನುವುದನ್ನು ನಾವು ಕಡತವನ್ನು ನೋಡಿ ಆಮೇಲೆ ಹೇಳುತ್ತೇವೆ.

ಶ್ರೀ. ವೈ.ಕೆ. ರಾಮಯ್ಯ: ಅದನ್ನು ಈಗ ತರಿಸಿ ಬಾಯಿಗೆ ಬಂದ ಹಾಗೆ ಮಾತನಾಡುತ್ತಾರೆ. ದಿನಾ ಮಾತನಾಡುವುದಾ? ನಾವು ಕೇಳಿಕೊಂಡಿರುವುದಾ? ಏನು ತಮಾಷೆನಾ?

ಉಪಾಧ್ಯಕ್ಷರು: ನೀವು ಕುಳಿತುಕೊಳ್ಳುವುದು ಕಲಿಯಿರಿ, ನಾನು ತರಿಸುತ್ತೇನೆ.

ಶ್ರೀ. ವೈ.ಕೆ. ರಾಮಯ್ಯ: ಸ್ವಾಮಿ, ನಾವು ನಿಮಗೆ ಗೌರವ ಕೊಡುತ್ತೇವೆ. ಇಲ್ಲಿ ಕುಳಿತುಕೊಂಡು ಅನ್ನುವರಕೈಯಲ್ಲಿ ಅನಿಸಿಕೊಳ್ಳುವುದಕ್ಕೆ ನಾವು ಸಿದ್ದರಿಲ್ಲ. ದಯಮಾಡಿ ಅದೇನಿದೆ, ಅದನ್ನು ನೋಡಿ ಎಕ್ಸ್‌ಚೆಂಜ್ ಮಾಡಿ...

ಉಪಾಧ್ಯಕ್ಷರು: ಆಯಿತು.

ಶ್ರೀ. ಎ. ಕೃಷ್ಣಪ್ಪ: ನಾವೂ ಇವರ ಹತ್ತಿರ ಹೇಳಿದ ಮಾತೆಲ್ಲಾ ಕೇಳುವುದಕ್ಕೆ ಅಲ್ಲ ಈ ಮನೆಗೆ ಬಂದಿರುವುದು. By respected voters, we have been elected. Don't have lose talk. Have some control.

ಶ್ರೀ. ಎಸ್.ಸುರೇಶ್‌ಕುಮಾರ್: ಮಾನ್ಯ ಉಪಾಧ್ಯಕರೆ, ನನಗೆ ಅನಿಸುತ್ತದೆ, ನಾನು ಕೇಳಿದ ಹಾಗೆ ಇದು ಟೋಟಲ್ ಕನ್‌ಫ್ಯೂಷನ್. ಅವರು ಹೇಳಿದ್ದು ಧೂಮಪಾನ ಮಾಡುವವರು ತಪ್ಪಿಸಿಕೊಂಡು ಹೋಗುತ್ತಾರೆ ಎಂದಿದ್ದು.

(ಗೊಂದಲ)

ಶ್ರೀ. ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಉಪಾಧ್ಯಕ್ಷರೆ, ನಾನು ಅವರ ಹೆಸರನ್ನು ಹೇಳಲಿಲ್ಲ. ಅವರ ಹೆಸರು ಹೇಳಿದ್ದರೆ ದಯವಿಟ್ಟು ಅದನ್ನು ಕಡತದಿಂದ ತೆಗೆದು ಹಾಕಿ. ನನ್ನದೇನೂ ಅಭ್ಯಂತರವಿಲ್ಲ.

(ಗೊಂದಲ)

ಶ್ರೀ. ಡಿ.ಕೆ. ಶಿವಕುಮಾರ್ (ನಗರಾಭಿವೃದ್ಧಿ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ವಿಶ್ವೇಶ್ವರ ಹೆಗಡೆಯವರು ಈ ಬಿಲ್‌ಗೆ ಬೆಂಬಲ ಕೊಡುತ್ತೇನೆ, ಸ್ವಾಗತ ಮಾಡುತ್ತೇನೆ ಎಂದಿದ್ದು ಸರಿ, ಆದರೆ ಅಲ್ಲಿ ಏನು ವಿಚಾರ ಬಂತು ಎಂದರೆ ಶ್ರೀ. ಎ . ಕೃಷ್ಣಪ್ಪ ಹೆಸರು ಬಂದಿದೆ..

ಶ್ರೀ. ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಉಪಾಧ್ಯಕ್ಷರೆ, ವೈಯುಕ್ತಿಕವಾಗಿ ನಾನು ಹೆಸರು ಹಿಡಿದು ಹೇಳಲಿಲ್ಲ.

ಶ್ರೀ. ಎ. ಕೃಷ್ಣಪ್ಪ: ಮಾನ್ಯ ಉಪಾಧ್ಯಕ್ಷರೆ, ಬೆಳಗ್ಗೆ ಮಧ್ಯಾಹ್ನ ಈ ಬಿಲ್‌ಗಳು ಶುರುವಾದಗಿನಿಂದಲೂ ನಾನು ಸದನದಲ್ಲಿ ಕುಳಿತಿದ್ದೇನೆ. ಇದರ ಬಗ್ಗೆ ಮಾನ್ಯ ಸಿಂಧ್ಯರವರು ಮಾತನಾಡಿದರು. ಹಲವಾರು ಲೀಡರ್ಸ್ ಮಾತನಾಡಿದರು. ನಾವು ಯಾವುದಕ್ಕೂ ಒಂದು ಬಾರಿ ಕೂಡ ಒಂದು ನಿಮಿಷ ಸಹಿತ ಇಂಟರ್‌ವೆಷನ್ ಮಾಡಲಿಲ್ಲ. ನಾವು ಅವರು ಮಾತನಾಡುವುದನ್ನು ನಿಲ್ಲಿಸಲಿಲ್ಲ. ಈಗ ಇವರು ಮಾತನಾಡುವಾಗ ಈ ರೀತಿಯಾಗಿ ಬೇಜವಾಬ್ದಾರಿಯಾದ ಮಾತುಗಳನ್ನು ಅಡಿದಾಗ ನಾವು ಅದನ್ನುಳಿಸಿ ಕೇಳಿಕೊಂಡು ಹೋಗುವುದಕ್ಕೆ ತಯಾರಾಗಿಲ್ಲ. ಅದನ್ನು ಕಡತದಿಂದ ತೆಗೆಸಿ ಹಾಕಿ.

ಉಪಾಧ್ಯಕ್ಷರು: ಆಯಿತು.

ಶ್ರೀ. ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಉಪಾಧ್ಯಕ್ಷರೆ, ಈಗ ಪ್ರಶ್ನೆ ಇರುವುದು ಇಷ್ಟೆ. ಈಗ ನಮಗೆ ಪೋಲೀಸ್ ವ್ಯವಸ್ಥೆಯಲ್ಲಿ ಇರುವಂತಹ ಕಾನೂನು ಬಾಹಿರವಾದಂತಹ ಚಟುವಟಿಕೆಗಳನ್ನು ನಿಲ್ಲಿಸುವುದಕ್ಕೆ ಪೊಲೀಸ್ ವ್ಯವಸ್ಥೆಗೆ ಸಾಧ್ಯವಾಗುತ್ತಾ ಇಲ್ಲ. ಈ ಕಾನೂನುಬಾಹಿರ ಚಟುವಟಿಕೆಗಳು ಈ ಸಮಾಜದಲ್ಲಿ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಇದನ್ನು ನಿಯಂತ್ರಿಸುವುದಕ್ಕೆ ನಮಗೆ ಪೋಲೀಸ್ ವ್ಯವಸ್ಥೆಯಲ್ಲಿ ಸಾಧ್ಯವಾಗುವುದಿಲ್ಲ. ಈಗ ನಾವು ಹೊಸ ಕಾನೂನುಗಳನ್ನು ತರುತ್ತಿದ್ದೇವೆ. ಸಾರ್ವಜನಿಕ ಸ್ಥಳಗಳಲ್ಲಿ ಎಲ್ಲೂ ಕೂಡ ನಾವು ಧೂಮಪಾನ ಮಾಡಬಾರದು. ಇದು ನಿಜವಾಗಿ ನಮ್ಮ ರಾಜ್ಯದಲ್ಲಿ ಈ ಒಂದು ಕಾನೂನು ಪಾಸ್ ಆಯಿತು ಎನ್ನುವ ಹೆಗ್ಗಳಿಕೆ ತೆಗೆದುಕೊಳ್ಳುವುದಕ್ಕೆ ಮಾತ್ರ ಹೇಳುತ್ತಿದ್ದೇವೋ ಅಥವಾ ನಿಜವಾಗಿ ಸೀರಿಯಸ್ ಆಗಿ ಇದ್ದೇವೋ? ಸೀರಿಯಸ್ ಆಗಿ ಇದ್ದೇವೆ ಎಂದಾದರೆ ಸರ್ಕಾರ ಹೇಳಬೇಕಾಗುತ್ತದೆ. ತಾವು ಈ ರೀತಿ ಸಾರ್ವಜನಿಕ ಸ್ಥಳದಲ್ಲಿ ಧೂಮಪಾನ ಮಾಡದೆ ಇರುವಂತೆ ಇಂತಿಂತಹ ಹೊಸ ನೇಮಕಗಳನ್ನು ಮಾಡುತ್ತೇವೆಂದು, ಈಗ ಇರುವಂತಹ ವಾಲಂಟರಿ ಆರ್ಗನೈಸೇಷನ್‌ಗಳಿಗೆ ಬೇರೆ ಬೇರೆ ಸರ್ವೀಸ್ ಕೊಡುವುದಕ್ಕೆ ಸಿದ್ಧರಿದ್ದೇವೆ. ಈ ರೀತಿ ಅವರ ಸೇವೆಯನ್ನು ತೆಗೆದುಕೊಳ್ಳುತ್ತೇವೆಂದು ಸ್ಪಷ್ಟವಾದಂತಹ ನಿಶ್ಚಿತವಾದಂತಹ ಈ ಧೋರಣೆ ಬಗ್ಗೆ ಬಿಗುವಿನ ನಿಲುವನ್ನು ಹೇಗೆ ತೆಗೆದುಕೊಳ್ಳುತ್ತದೆಂದು ಸ್ಪಷ್ಟಮಾಡಿಸಬೇಕಾಗುತ್ತದೆ. ಏಕೆಂದರೆ ಕಾನೂನುಗಳು ಅನೇಕ ಇವೆ. ಇವತ್ತು ಲಂಚ ತೆಗೆದುಕೊಳ್ಳಬಾರದು ಎಂದು ಇಲ್ಲವೆ? ಆದರೂ ಲಂಚ ತೆಗೆದುಕೊಳ್ಳುತ್ತಿದ್ದಾರೆ. ಇದು ಸತ್ಯಸಂಗತಿ ಅಲ್ಲವೆ? ಹಾಗೂ ಎಲ್ಲರಿಗೂ ಗೊತ್ತಿರುವ ಸಂಗತಿ. ವರದಕ್ಷಿಣೆ ತೆಗೆದುಕೊಳ್ಳಬಾರದೆಂದು ಕಾನೂನು ಇಲ್ಲವೆ? ಆದರೆ ವರದಕ್ಷಿಣೆ ತೆಗೆದುಕೊಳ್ಳುತ್ತಿದ್ದಾರೆ.

(ಗೊಂದಲ)

ಮಾನ್ಯ ಸದಸ್ಯರು : ಅವರಿಗೆ ಏನಾಗಿದೆ ಕೇಳಿ.

ಶ್ರೀ. ವಿಶ್ವೇಶ್ವರ ಹೆಗಡೆ ಕಾಗೇರಿ: ಇವರೆಲ್ಲಾ ಪೂರ್ವಗ್ರಹ ಪೀಡಿತರಾಗಿದ್ದಾರೆ. ನಾನೇನೂ ಮಾಡುವುದಕ್ಕೆ ಬರುವುದಿಲ್ಲ. ನಾನು ಮಾತನಾಡುವಾಗ ಸ್ಪಷ್ಟವಾಗಿ ಮಾತನಾಡುತ್ತಿದ್ದೇನೆ. ನನಗೆ ಏನು ಕನ್‌ವಿನ್ಸ್ ಆಗಿದೆ ಅದನ್ನು ನಾನು ಮಾತನಾಡುತ್ತಿದ್ದೇನೆ. ಈಗ ನನ್ನ ವಿನಂತಿ ಇಷ್ಟೆ ನಾವು ಕಾನೂನನ್ನು ಪಾಸ್ ಮಾಡಿಕೊಂಡಿದ್ದೇವೆ ಎನ್ನುವಂತಹ ಹೆಗ್ಗಳಿರೆಗೆ ಮಾತ್ರ ಈ ಕಾನೂನು

ಪಾಸಾಗಬಾರದು. ಈಗ ಭ್ರಷ್ಟಾಚಾರ ನಿರ್ಮೂಲನಾ ಕಾನೂನು ಇದೆ. ವರದಕ್ಷಿಣೆ ನಿರ್ಮೂಲನ ಕಾನೂನು ಇದೆ. ಅಸ್ಪೃಶ್ಯತೆ ಅಥವಾ ಜಾತೀಯತೆ ಆಚರಣೆ ಮಾಡಬಾರದೆಂದು ಕಾನೂನು ಇದೆ. ಆದರೆ ಅದೆಲ್ಲಾ ಕಾನೂನು ಇದ್ದರೂ ಕೂಡ ವ್ಯಕ್ತಿಗಳು ತಮ್ಮ ತಮ್ಮ ದೌರ್ಬಲ್ಯದ ಕಾರಣದಿಂದ ಈ ಕಾನೂನನ್ನು ಮೀರಿ ಅಪರಾಧವನ್ನು ಮಾಡುತ್ತಿದ್ದಾರೆ. ಹಾಗಾಗಿ ಈ ಸರ್ಕಾರ ವ್ಯಕ್ತಿಗಳಲ್ಲಿ ಆ ರೀತಿ ಒಂದು ಪರಿವರ್ತನೆ ತರುವುದರ ಬಗ್ಗೆ ಎಷ್ಟು ಗಂಭೀರವಾಗಿ ಯೋಜನೆ ಮಾಡಿದೆ ಎಂಬುದನ್ನು ಹೇಳಬೇಕು. ಏಕೆಂದರೆ ಕಾನೂನು ಪಾಸಾದರೆ ಎಲ್ಲವೂ ಜಾರಿಯಾಗಿ ನಾಳೆ ಅನುಷ್ಠಾನವಾಗುವುದಿಲ್ಲ. ವ್ಯಕ್ತಿಗಳನ್ನು ಪರಿವರ್ತನೆ ಮಾಡಿ ಇದರ ಬಗ್ಗೆ ಜಾಗೃತಿ ತರಬೇಕು.

6.10 ಪಿಎಂ

ಧೂಮಪಾನ ಸಾರ್ವಜನಿಕ ಸ್ಥಳಗಳಲ್ಲಿ ಮಾಡುವುದರಿಂದ ಹಾನಿಯನ್ನು ಏನು ಆಗುತ್ತದೆ. ಎಂಬುದನ್ನು ಈಗ ಪ್ರಚಾರ ಮಾಡುವುದರ ಜೊತೆಯಲ್ಲಿ ಇನ್ನಷ್ಟು ಹೆಚ್ಚು ವ್ಯಾಪಕವಾದಂಥ ರೀತಿಯಲ್ಲಿ ಪ್ರಚಾರ ಪಡಿಸಬೇಕಾಗುತ್ತದೆ, ಏಕೆಂದರೆ ಆ ರೀತಿ ಸ್ವಯಂ ಜಾಗೃತಿ ಬರದಿದ್ದರೆ.

(ಗೊಂದಲ)

ಶ್ರೀ. ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಉಪಾಧ್ಯಕ್ಷರೆ, ನಾನು ವಿನಂತಿಸಿಕೊಳ್ಳುವುದು ಏನೆಂದರೆ ಅಪರಾಧ ಮಾಡಿದಂತಹವರು ಕಾನೂನಿನಿಂದ ತಪ್ಪಿಸಿಕೊಂಡು ಹೋಗಬಾರದು.

ಶ್ರೀ. ಎಸ್. ಸುರೇಶ್‌ಕುಮಾರ್: ಮಾನ್ಯ ಉಪಾಧ್ಯಕರೆ, ಸಿಗರೇಟ್ ಸೇದಿ ತುಂಬಾ ಹೊತ್ತು ಆಗಿರಬೇಕು. ದಯವಿಟ್ಟು ಕಳುಹಿಸಿ ಆ ಊ ಓ ಎಂದು ಏನು ಕೂಗಿಕೊಳ್ಳುವುದು ಹೇಳಿ ಸ್ವಾಮೀ ಏನಾದರೂ ತಪ್ಪು ಮಾತನಾಡುತ್ತಿದ್ದಾರಾ? ಅವರು ಬಿಲ್ ಬಗ್ಗೆ ಮಾತನಾಡುತ್ತಿದ್ದಾರೆ. ಓ, ಈ ಉ ಅಂದರೆ ಏನು?

(ಗೊಂದಲ)

ಉಪಾಧ್ಯಕ್ಷರು: ಕಡತವನ್ನು ತರಿಸಲಿಕ್ಕೆ ನಾನು ಹೇಳಿದ್ದೇನೆ. ಆ ಕಡತ ಬರುವವರೆಗೂ ಸ್ವಲ್ಪ ಶಾಂತತೆಯನ್ನುಕಾಪಾಡಿಕೊಳ್ಳಿ. ಮಾನ್ಯ ಸದಸ್ಯರುಗಳಿಗೆ ಈ ಮುಖಾಂತರ ನಾನು ಮನವಿ ಮಾಡಿ ಕೊಳ್ಳುತ್ತೇನೆ.

(ಗೊಂದಲ)

ಶ್ರೀ. ವಿಶ್ವೇಶ್ವರ ಹೆಗಡೆ ಕಾಗೇರಿ: ಈ ರೀತಿ ವ್ಯಕ್ತಿಗಳಲ್ಲಿ ಪರಿವರ್ತನೆ ತರುವುದಕ್ಕೆ ಸರ್ಕಾರ ಎಷ್ಟು ಗಂಭೀರವಾಗಿ ಚಿಂತನೆ ಮಾಡಿದೆ ಎನ್ನುವುದನ್ನು ಈ ಸದನಕ್ಕೆ ಹೇಳಬೇಕು ಎಂದು ನಾನು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ. ಆರಗ ಜ್ಞಾನೇಂದ್ರ: ನಾನು ಒಂದೇ ಒಂದು ನಿಮಿಷ ಮಾತನಾಡುತ್ತೇನೆ. ಒಂದು ಕ್ಲಾರಿಫಿಕೇಶನ್ ಕೇಳುತ್ತೇನೆ.

ಉಪಾಧ್ಯಕ್ಷರು: ಮಾನ್ಯ ಎಸ್.ಎಸ್.ಪಾಟೀಲ್ ಅವರು ಮಾತನಾಡಲಿ.

ಶ್ರೀ. ಆರಗ ಜ್ಞಾನೇಂದ್ರ: ಅವರು ಜಾಸ್ತಿ ಮಾತನಾಡುತ್ತಾರೆ.

ಉಪಾಧ್ಯಕ್ಷರು: ಇಲ್ಲ, ಅವರು ಜಾಸ್ತಿ ಮಾತನಾಡುವುದಿಲ್ಲ.

ಶ್ರೀ. ಆರಗ ಜ್ಞಾನೇಂದ್ರ: ಅವರಿಗೆ ಹೆಚ್ಚು ಸಮಯ ಕೊಡೋಣ ಎಂದು ಹೇಳುತ್ತಿದ್ದೇನೆ.

ಶ್ರೀ. ಸಿ.ಆರ್. ಸಗೀರ್ ಅಹಮದ್: ಮಾನ್ಯ ಉಪಾಧ್ಯಕ್ಷರೆ, ನೀವು ಅವರಿಗೆ ಮಾತನಾಡಲು ಹೇಳಿದ್ದೀರಿ. ಇವರು ಅವರಿಗೆ ಹೇಳುತ್ತಾರೆ. ಜಾಸ್ತಿ ಮಾತನಾಡುತ್ತಾರೆ ಎಂದು ಹೇಳಿದರೆ ಯಾರು ಈ ಸದನ ನಡೆಸಬೇಕು? ಇವರಿಗೇ ಬಿಟ್ಟು ಬಿಡಿ. ಯಾರು ಜಾಸ್ತಿ ಮಾತನಾಡುತ್ತಾರೆ, ಯಾರು ಕಡಿಮೆ ಮಾತನಾಡುತ್ತಾರೆ? ಯಾರು ಸಿಗರೇಟ್ ಸೇದಿಲ್ಲ, ಯಾರು ಬೀಡಿ ಸೇದಿಲ್ಲ ಎಲ್ಲಾ ಇವರೇ ಆಡುವವರು. ಇವರು ಆಡಿದ ಹಾಗೆ ಸದನ ನಡೆಯಬೇಕಾ?

+ಶ್ರೀ. ಎಸ್.ಎಸ್.ಪಾಟೀಲ್ (ಮುಂಡರಗಿ): ಸನ್ಮಾನ್ಯ ಉಪಾಧ್ಯಕ್ಷರೆ, ಬಹುಶಃ ಈ ಧೂಮಪಾನ ನಿಷೇಧ ಈ ವಿಧೇಯಕವನ್ನು ನಾನು ಬಹಳ ಗೌರವದಿಂದ ಸ್ವಾಗತಿಸುತ್ತೇನೆ. ಹಿಂದಿನ ಅಧಿವೇಶನದಲ್ಲಿ ಇದು ಬಂತು, ಆದರೆ ಇದು ವಿಷಯ ಚರ್ಚೆಗೆ ಬರುವ ಹೊತ್ತಿಗೆ ಮುಂದೆ ಹೋಗಿದೆ. ಆ ಸಲವೂ ಹಾಗೆಯೇ ಆಗಿತ್ತು. ಹೋದ ಸಲವು ಹೀಗೆಯೇ ಆಗಿತ್ತು. ಆದ್ದರಿಂದ ನಾನು ನಮ್ಮ ಮಿತ್ರರಿಗೆ ವಿನಂತಿ ಮಾಡಿಕೊಂಡೆ, ಮತ್ತೆ ಇದು ಮುಂದೆ ಹೋಗಬಾರದು, ಇದು ಬಹಳ ಮಹತ್ವದ ವಿಧೇಯಕ, ಇದು ಅವಶ್ಯ ಇದೆ ಎನ್ನುವ ದೃಷ್ಟಿಯಿಂದ ನಾನು ಇದನ್ನು ಸ್ವಾಗತ ಮಾಡುತ್ತೇನೆ. ಇದರಲ್ಲಿ ಕೆಲವು ಸಲಹೆಗಳನ್ನು ಮಾಡಲು ನಾನು ಪ್ರಯತ್ನ ಮಾಡುತ್ತೇನೆ. ಎಲ್ಲಾ ಹೊಸ ಕಾಯಿದೆ ತರುವಾಗ ಒಂದು ವಿಚಾರ ಹಾಕುತ್ತಾರೆ. ನಮ್ಮ ಕಾಲಕ್ಕೂ ಹಾಕುತ್ತಿದ್ದೆವು, ನೀವೂ ವಿಚಾರ ಹಾಕುತ್ತೀರಿ. ಏಕೆ ಅಧಿಕಾರಿಗಳು ಬರೆದುಕೊಂಡು ಬರುತ್ತಾರೋ ನನಗೆ ತಿಳಿಯುವುದಿಲ್ಲ. ಆಗ ಶ್ರೀ. ಮುದ್ದಹನುಮೇಗೌಡರು ಆಗಿನ ವಿಧೇಯಕದಲ್ಲಿ ಮಾತನಾಡುವಾಗ ಹೇಳಿದರು. ಇದು ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಗೊತ್ತುಪಡಿಸಿದ ದಿನಾಂಕದಿಂದ ಜಾರಿಗೆ ಬರತಕ್ಕದ್ದು ಮತ್ತು ಈ ಅಧಿನಿಯಮದ ಬೇರೆ ಬೇರೆ ಉಪಬಂಧಗಳಿಗಾಗಿ ಬೇರೆ ಬೇರೆ ದಿನಾಂಕಗಳನ್ನು ಗೊತ್ತುಪಡಿಸಬಹುದು. ಇದು ಏಕೆ ಬೇಕಾಗುತ್ತದೆ? ಇದನ್ನು ತೆಗೆಯಬೇಕು. ಇದನ್ನು ಜನರಲ್ ಆಗಿ ಬರೆದುಕೊಂಡು ಬರುತ್ತಾರೆ. ನಮ್ಮ ಕಾಲಕ್ಕೂ ಬರೆಯುತ್ತಿದ್ದರು. ನಾನು ಆಗ ಹೊಸಬ ಇದ್ದೆ, ನನಗೆ ಅಷ್ಟು ಅನುಭವ ಇದ್ದಿಲ್ಲ. ಇದ್ದದ್ದು ನಾನು ಹೇಳುತ್ತೇನೆ. ನಿಜವಾಗಿ ಆಗೇನಾದರೂ ಬಂದಿದ್ದರೆ ನಾನು ಹಾಕಿಕೊಡುತ್ತಿರಲಿಲ್ಲ. ಇದೆಲ್ಲಾ ಸುಮ್ಮನೇ. ಇಲ್ಲಿ ಯಾವಾಗ ಎರಡೂ ಸದನದಲ್ಲಿ ಪಾಸ್ ಆಗುತ್ತದೆ. ರಾಜ್ಯಪಾಲರ ಸಹಿ ಆಗಿ ಬರುತ್ತದೆ, ಅದು ಜಾರಿಗೆ ಬರಬೇಕು. ಮತ್ತೆ ಏಕೆ ಸರ್ಕಾರ ಅದಕ್ಕೆ ಆರು ತಿಂಗಳು, ವರ್ಷ ಅಥವಾ ಇಷ್ಟು ಸಮಯ ಹೇಳುವುದಕ್ಕೆ ಬರುವುದಿಲ್ಲ. ರೂಲ್ಸ್ ಮಾಡಿಲ್ಲ, ಅದನ್ನು ಮಾಡಿಲ್ಲ, ಇದನ್ನು ಮಾಡಿಲ್ಲ ಎಂದು ಹೇಳಿ ಕೊಳ್ಳುತ್ತಾ ಮುಂದೆ ಹೋಗುತ್ತಾರೆ. ದಯವಿಟ್ಟು ಅದನ್ನು ತಾವು ತೆಗೆಯಬೇಕು. ಇದು ತಮ್ಮಲ್ಲಿ ನನ್ನ ವಿನಂತಿ. ಮತ್ತೆ ಇದು ಜಾರಿಗೆ ಬರುವುದಕ್ಕೆ ಆರು ತಿಂಗಳು ಹೋಗುತ್ತದೆ. ಇದು ಅವಶ್ಯಕತೆ ಇಲ್ಲ ಈ ರೀತಿ ಹಾಕುವುದನ್ನು ಎಲ್ಲವನ್ನು ಇದರೊಳಗೆ ತಂದು ಬಿಡುತ್ತಾರೆ. ಆದರೆ ಬರೆದುಕೊಂಡು ಬರುವುದನ್ನು ಸಾಮಾನ್ಯ ನಿಯಮನೇ ಮಾಡಿ ಬಿಟ್ಟಿದ್ದಾರೆ. ಅದರ ಅವಶ್ಯಕತೆ ಇಲ್ಲ. ರೂಲ್ಸ್ ಮಾಡುತ್ತಿದ್ದರೆ ಈ ರೂಲ್ಸನ್ನು, ವಿಧೇಯಕ ತರುವ ಮುಂದೆ ರೂಲ್ಸ್ ಮಾಡಿ ತರಬೇಕು. ಅದು ಏಕೆ ಬೇಕಾಗುತ್ತದೆ, ಅವಶ್ಯಕತೆ ಇಲ್ಲ, ನನ್ನನ್ನು ಕೇಳಿದರೆ ಈ ವಾಕ್ಯವನ್ನು ತೆಗೆಯಬೇಕು. ಇನ್ನೊಂದು ವಿಚಾರ ಹೇಳಿದ್ದೀರಿ "ಸಾರ್ವಜನಿಕ ಕೆಲಸದ ಅಥವಾ ಬಳಕೆಯ ಸ್ಥಳ ಎಂದರೆ ಸಾರ್ವಜನಿಕರು ಭೇಟಿ ಕೊಡುವ ಒಂದು ಸ್ಥಳ ಮತ್ತು ಅದು ಸಭಾಂಗಣ, ಆಸ್ಪತ್ರೆ ಕಟ್ಟಡಗಳು, ಆರೋಗ್ಯ ಸಂಸ್ಥೆಗಳು, ಮನೋರಂಜನಾ ಕೇಂದ್ರಗಳು, ಉಪಹಾರ ಮಂದಿರಗಳು, ಸರ್ಕಾರಿ ಕಛೇರಿಗಳು, ನ್ಯಾಯಾಲಯ ಕಟ್ಟಡಗಳು, ಶಿಕ್ಷಣ ಸಂಸ್ಥೆಗಳು, ಗ್ರಂಥಾಲಯಗಳು,

ಆರಾಧನಾ ಸ್ಥಳಗಳು ಮತ್ತು ಸಾರ್ವಜನಿಕ ಕೆಲಸದ ಅಥವಾ ಬಳಕೆಯ ಸ್ಥಳ ವೆಂಬುದಾಗಿ ರಾಜ್ಯ ಸರ್ಕಾರವು ಅಧಿಸೂಚಿಸಿರುವ ಅಂಥ ಇತರೆ ಸ್ಥಳಗಳನ್ನು ಒಳಗೊಳ್ಳುತ್ತದೆ ಎಂದು ಹೇಳಿದ್ದೀರಿ. ನೀವು ಸ್ಥಳ ಎಂದು ಹೇಳಿ ಬಿಡುತ್ತೀರಿ. ಶಿಕ್ಷಣ ಸಂಸ್ಥೆಯ ಸ್ಥಳ ಎಂದುಹೇಳಿ ಬಿಡುತ್ತೀರಿ. ಅದನ್ನು ಬಿಟ್ಟು ಅದರ ಕಾಂಪೌಂಡಿಗೆ ಹಚ್ಚಿರುತ್ತಾರೆ. ಕಾಂಪೌಂಡಿಗೆ ಹಚ್ಚುವುದರಿಂದ ಉದ್ದೇಶ ಸಫಲ ಆಗುವುದಿಲ್ಲ. ಅದಕ್ಕೆ ಇಷ್ಟು ಅಂತರ ಎಂದು ಇಡಿ. ಶಿಕ್ಷಣ ಸಂಸ್ಥೆಗಳು ಎಂದರೆ ಅದರ ಕಾಂಪೌಂಡ್‌ಗೆ ಹಚ್ಚಿ ಇಡುತ್ತಾರೆ. ಒಳಗೆ ಇಡಬೇಡಿ ಎಂದರೆ ಹೊರಗೆ ಇಡುತ್ತಾರೆ. ಅದಕ್ಕೆ ಇಷ್ಟು ಅಂತರ ಎಂದು ಹಾಕಿ. ಶಿಕ್ಷಣ ಸಂಸ್ಥೆಗಳಿಗೂ ಕೂಡ ಇಷ್ಟು ಅಂತರದಲ್ಲಿ ಸಿಗರೇಟ್ ಮಾರಾಟ ಮಾಡಬಾರದು, ಧೂಮಪಾನ ಮಾಡಬಾರದು ಎಂದು ತಾವು ಶಿಕ್ಷಣ ಸಂಸ್ಥೆ ಮುಂದೆ ಹಾಕಿ ಕೊಡಬೇಕು. ಇದರಲ್ಲಿ ಎಲ್ಲಾ ಕಡೆಯದು ಹೇಳುತ್ತಾರೆ. ಆದರೆ ಶಾಸಕರ ಭವನಕ್ಕೂ ಈ ನಿರ್ಭಂಧ ಹಾಕಬೇಕು. ಇದರಲ್ಲಿ ಶಾಸಕರ ಭವನ ಎಂದು ಸೇರಿಸಿಲ್ಲ. ಶಾಸಕರ ಭವನ ಎಂದೇಕೆ ಸೇರಿಸಬಾರದು? ಇದರಲ್ಲಿ ಆ ಶಬ್ದ ಹಾಕಿಲ್ಲ. ಇದರಲ್ಲಿ ಶಾಸಕರ ಭವನ ಸಹ ಸೇರಿಸಿ. ಶಾಸಕರ ಭವನ ಇರಬೇಕು, ವಿಧಾನಸಭೆ ಇರಬೇಕು, ಮೊಗಸಾಲೆ ಇರಬೇಕು. ಎಲ್ಲವನ್ನು ಶಬ್ದ ಸೇರಿಸಿ ಬಿಡಿ. ದಯವಿಟ್ಟು ಸೇರಿಸಬೇಕು. ಈ ಶಬ್ದ ಇಲ್ಲ ಎಂದರೆ ಅದು ಬರುತ್ತದೆ. ನಾನು ಉದಾಹರಿಸುವ ಎಲ್ಲ ಶಬ್ದ ಹಾಕಿ.

ಶ್ರೀ. ಹಂಪನಗೌಡ ಬಾದರ್ಲಿ: ಶಾಸಕರು ಸೇದುತ್ತಿದ್ದರೆ ಅವರಿಗೆ ಮೊದಲು ಶಿಕ್ಷೆ ಕೊಟ್ಟು ನಂತರ ಬೇರೆಯವರಿಗೆ ಕೊಡಿ, ಶಾಸಕರ ಭವನದಲ್ಲೂ ನಿಷೇಧ ಹಾಕಿ ಏಂದೇಕೆ ಹೇಳುತ್ತೀರಿ? ಶಿಕ್ಷೆಗೆ ಗುರಿಪಡಿಸಲಿ.

ಶ್ರೀ. ಎಸ್.ಎಸ್. ಪಾಟೀಲ್: ಶಿಕ್ಷೆಗೆ ಗುರಿ ಪಡಿಸುವುದು ಬೇಡ. ನಾವು ನಮ್ಮೊಳಗೆ ಆತ್ಮಾವಲೋಕನ ಮಾಡಿಕೊಳ್ಳೋಣ. ದಯವಿಟ್ಟು ತಾವು ಸೇರಿಸಬೇಕು. ಸರ್ಕಾರಿ ಕಛೇರಿಗಳು ಎಂದಿದ್ದೀರಿ, ಖರೆ ಇದೆ. ಆದರೂ ಕೂಡ ವಿಧಾನ ಸೌಧ ಮತ್ತು ಶಾಸಕರ ಭವನ ಎಂದು ದಯವಿಟ್ಟು ಸೇರಿಸಬೇಕು. ಅನಂತರ ಮಾನ್ಯ ಮಂತ್ರಿಗಳು ವಿನಂತಿ ಮಾಡಿದರು. ಧೂಮಪಾನ ಎಂದರೆ ತಂಬಾಕಿನ ಯಾವುದೇ ಬಗೆಯಲ್ಲಿರುವ ಸಿಗರೇಟು, ಸಿಗಾರ್, ಬೀಡಿಗಳ ರೂಪದಲ್ಲಾಗಲಿ ಅಥವಾ ಪೈಪ್, ರ್‍ಯಾಪರ್ ಅಥವಾ ಯಾವುದೇ ಇತರೆ ಉಪಕರಣದ ಮೂಲಕ ಇತರ ರೀತಿಯಲ್ಲಾಗಲಿ, ಮಾಡುವ ಧೂಮಪಾನ ಎಂದಿದ್ದಾರೆ. ಎಲ್ಲಿ ಅಡಿಕೆಯೊಳಗೂ ತಂಬಾಕು ಹಾಕುತ್ತಾರೆ. ಅದಂತೂ ಬಹಳ ಕೆಟ್ಟದ್ದು. ಶಾಸಕರ ಭವನದಲ್ಲಿ ಹೋಗಿ ನೋಡಿ. ಆಮೇಲೆ ಜನರ ಮೈಮೇಲೆ ಉಗುಳುತ್ತಾರೆ. ದಯವಿಟ್ಟು ಅದನ್ನು ಸಹ ಸಾರ್ವಜನಿಕ ಸ್ಥಳಗಳಲ್ಲಿ ಉಗುಳುವುದಾಗಲೀ ಇಂಥವನ್ನು ಮಾಡಬಾರದು. ಎಲೆ ಅಡಿಕೆ ಸೇರಿಸಿ ತಂಬಾಕಿನಲ್ಲಿ ಹಾಕಿಕೊಳ್ಳುತ್ತಾರೆ. ಇದನ್ನೂ ಸೇರಿಸಬೇಕು. ಇದು ಬಹಳ ನಾಜೂಕಿದೆ. 'ಏಕೆಂದರೆ ಇದರಿಂದ ಕ್ಯಾನ್ಸರ್ ಹೆಚ್ಚಾಗುವುದು. ತಂಬಾಕು ಸೇವನೆಯಿಂದ ಕ್ಯಾನ್ಸರ್ ಬರುತ್ತದೆ. ಜನರು ಅದನ್ನು ಬಿಟ್ಟರೆ ತಪ್ಪಲ್ಲ. ತಾವೆಲ್ಲಾ ತಿಳಿದುಕೊಳ್ಳಿ. ಇದು ಎಲ್ಲರಿಗೂ ಬೇಕಾಗತಕ್ಕದ್ದು. ತಾಯಂದಿರಂತೂ ಇದನ್ನು ಕೇಳಬೇಕು. ಅದು ಬಹಳ ಕಷ್ಟ. ಅವರ ಹಕೀಕತೆ ಅವರಿಗೇ ಗೊತ್ತು. ಸಿಗರೇಟ್ ಸೇದುವವರು ರಾತ್ರಿ ಬಂದು ಸೇದಿ, ಉಗುಳಿ, ಪಾಪ ಇಲ್ಲದ ಪಿಂಡಕ್ಕೆ ಕ್ಯಾನ್ಸರ್ ಬರುತ್ತದೆ. ಇದನ್ನು ಕೂಡ ಸಾರ್ವಜನಿಕ ಸ್ಥಳದಲ್ಲಿ ನಿಷೇಧ ಮಾಡುವ ಶಬ್ದ ಸೇರಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಇನ್ನು ಹದಿನೆಂಟು ವರ್ಷಕ್ಕಿಂತ ಕಡಿಮೆ ವಯಸ್ಸಿನ ಯಾವೊಬ್ಬ ವ್ಯಕ್ತಿಗೆ,

ಸಿಗರೇಟುಗಳು, ಬೀಡಿಗಳು ಅಥವಾ ಇತರೆ ಯಾವುದೇ ಧೂಮಪಾನ ವಸ್ತುವನ್ನು ಮಾರಾಟ ಮಾಡತಕ್ಕದ್ದಲ್ಲ ಎಂದು ಹೇಳಿದ್ದೀರಿ. ಅದರ ಜೊತೆಗೆ ವಿಧ್ಯಾರ್ಥಿಗಳಿಗೆ ಎಂದು ಹಾಕಿ ಬಿಡಿ. ಯಾರೇ ವಿದ್ಯಾರ್ಥಿ ಆಗಿರಲಿ, ಕೆಎಎಸ್ ನವರು ಇದ್ದರೂ ಅವರೂ ವಿದ್ಯಾರ್ಥಿ. ಕಾಲೇಜು ಸ್ಟೂಡೆಂಟ್ ಇರಲಿ. ದಯವಿಟ್ಟು ವಿಧ್ಯಾರ್ಥಿಗಳಿಗೆ ಮಾರಾಟ ಮಾಡತಕ್ಕದ್ದಲ್ಲ ಎಂದು ಹಾಕಿ. ನಮಗೆ ವೋಟು ಬೇಡ. ಎಲ್ಲಿ ನಮಗೆ ವೋಟು ಬೀಳುವುದು ಬೇಡ. ನಾವು ಸೋತು ಹೋದರೂ ಪರವಾಗಿಲ್ಲ, ನಮ್ಮ ರಾಜ್ಯ ನಮ್ಮ ದೇಶ ಉಳಿದರೆ ಸಾಕು. ಆಮೇಲೆ ಇನ್ನೊಂದು ವಿಚಾರ ಇದೆ. ಸ್ವತಃ ತಾನೇ ಆಗಲೀ ಅಥವಾ ತನ್ನ ಪರವಾಗಿ ಯಾವೊಬ್ಬ ವ್ಯಕ್ತಿಯ ಮೂಲಕವಾಗಲೀ ಯಾವುದೇ ಆಸ್ಪತ್ರೆಯ, ಆರೋಗ್ಯ ಸಂಸ್ಥೆಯ, ಸಾರ್ವಜನಿಕ ಕಛೇರಿಯ, ನ್ಯಾಯಾಲಯದ, ಗ್ರಂಥಾಲಯದ, ಕಾಲೇಜಿನ, ಶಾಲೆಯ ಅಥವಾ ಇತರ ಶಿಕ್ಷಣ ಸಂಸ್ಥೆಯ ಮತ್ತು ಆರಾಧನಾ ಸ್ಥಳದ ಆವರಣಗಳಲ್ಲಿ ಸಿಗರೇಟು ಅಥವಾ ಬೀಡಿಗಳು ಅಥವಾ ಇತರ ಯಾವುದೇ ಧೂಮಪಾನ ವಸ್ತುವನ್ನು ದಾಸ್ತಾನು, ಮಾರಾಟ ಅಥವಾ ವಿತರಣೆ ಮಾಡತಕ್ಕದ್ದಲ್ಲ ಇರಲಿ, ಆ ವಿಚಾರವನ್ನು ಮೊದಲೇ ಹೇಳಿದ್ದೇನೆ. ಕಾಂಪೌಂಡ್‌ನಲ್ಲಿ ಹಾಕಿ ಬಿಡುತ್ತಾರೆ, ಅದನ್ನು ಮೊದಲು ಹೇಳಿದ್ದೇನೆ, ದಯವಿಟ್ಟು ಇಲ್ಲಿ ಬರುತ್ತದೆ, ಅದನ್ನು ಇಷ್ಟು ಅಂತರ ಎಂದು ಸೇರಿಸಿಬಿಡಿ. ಇಲ್ಲದೇ ಇದ್ದರೆ ಆ ಶಾಲೆ ಕಾಂಪೌಂಡಿಗೆ ಹಚ್ಚಿ ಅವನ್ನೆಲ್ಲಾ ಇಟ್ಟು ಬಿಡುತ್ತಾರೆ. ಆದಕ್ಕೆ ಅದನ್ನೆಲ್ಲಾ ತಾವು ಸೇರಿಸಬೇಕು. ಇದರ ಬಗ್ಗೆ ಒಂದು ವಿವರಣೆಯಾಗಿ ಹೇಳಬೇಕು ಎಂದರೆ ಬಹುಶಃ ಉಳಿದಿದ್ದೆಲ್ಲಾ ಸಾಮಾನ್ಯವಾಗಿ ಚೆನ್ನಾಗಿ ಮಾಡಿದರು. ಆ ಮೇಲೆ ಇಲ್ಲಿ ಪ್ರಚಾರದೊಳಗೆ, ಉಳಿದ ಎಲ್ಲಾ ವಿಚಾರ ಹಾಕಿದ್ದೀರಿ, ಬಹಳ ಡೇಂಜರ್ ಇದೆ. ಅದು ಯಾವುದು ಎಂದರೆ ಟಿ.ವಿ ಅದನ್ನು ನೋಡಬೇಕು. ವಿದ್ಯಾರ್ಥಿಗಳು ಸಿಗರೇಟ್ ಸೇದುವುದನ್ನು ತೋರಿಸುತ್ತಾರೆ. ವಿದ್ಯಾರ್ಥಿಗಳು ಸಿಗರೇಟ್ ಸೇದಿಕೊಂಡು ಗುದ್ದಾಡುವುದನ್ನು ತೋರಿಸುತ್ತಾರೆ. ಹೆಣ್ಣು ಮಕ್ಕಳು ಸಿಗರೇಟ್ ಸೇದುವುದನ್ನು ತೋರಿಸುತ್ತಾರೆ, ಇದೆಲ್ಲಾ ನಿಲ್ಲಬೇಕು. ಇವೆಲ್ಲಾ ಆಗಬಾರದು, ಖಂಡಿತ ನಿಲ್ಲಬೇಕು. ಖಂಡಿತವಾಗಿ ಟಿ.ವಿ.ಯಲ್ಲಿ ಸಹ ನೀವು ಜಾಹಿರಾತು ಕೊಡತಕ್ಕಂಥಹ ವ್ಯವಸ್ಥೆಯನ್ನು ನಿಲ್ಲಿಸುತ್ತೇವೆಂದು ನೇರವಾಗಿ ಹೇಳಬೇಕಾಗುತ್ತದೆ. ಅಪರಾಧಗಳ ರಾಜಿ ಎಂದು ಹೇಳಿ ಒಂದು ಸೆಕ್ಷನ್ ಇಟ್ಟಿದ್ದಾರೆ. ಇದೇನೂ ನನಗೆ ಅರ್ಥ ಆಗುವುದಿಲ್ಲ. ಅಪರಾಧಗಳ ರಾಜಿ ಬಗ್ಗೆ ತಾವು ಓದಿ. ರಾಜ್ಯ ಸರ್ಕಾರ ಅಥವಾ ಸಾಮಾನ್ಯ ವಿಶೇಷ ಆದೇಶದ ಮೂಲಕ ಈ ಸಂಬಂಧದಲ್ಲಿ ರಾಜ್ಯ ಸರ್ಕಾರವು ಪ್ರಾಧಿಕರಿಸಿದ ಯಾವೊಬ್ಬ ವ್ಯಕ್ತಿಯು, ವ್ಯವಹರಣೆಗಳನ್ನು ಪ್ರಾರಂಭಿಸುವ ಮೊದಲು ಅಥವಾ ನಂತರ ಈ ಅಧಿನಿಯಮದ ಅಡಿಯಲ್ಲಿ ದಂಡನೀಯವಾದ ಯಾವುದೇ ಅಪರಾಧಗಳ ಪೈಕಿ ಯಾವುದೇ ಅಪರಾಧಗಳ ಬಗ್ಗೆ ರಾಜಿ ಮಾಡಿಕೊಳ್ಳಬಹುದು. ಇದೇನು ನನಗೆ ಅರ್ಥವಾಗುವುದಿಲ್ಲ. ದಯವಿಟ್ಟು ಇದರ ಬಗ್ಗೆ ನನಗೆ ವಿವರಣೆ ಹೇಳಬೇಕು. ಯಾವುದು ರಾಜಿ ಏನು ಎನ್ನುವ ಬಗ್ಗೆ ವಿವರಣೆ ಕೊಡಬೇಕು. (1)ನೇ ಉಪ ಪ್ರಕರಣದ ಅಡಿಯಲ್ಲಿ ಒಂದು ಅಪರಾಧದ ಬಗ್ಗೆ ರಾಜಿ ಮಾಡಿ ಕೊಂಡಾಗ ಅಪರಾಧಿಯು ಅಭಿರಕ್ಷೆಯಲ್ಲಿದ್ದರೆ ಬಿಡುಗಡೆ ಗೊಳಿಸತಕ್ಕದ್ದು ಮತ್ತು ರಾಜಿಯಾದ ಅಪರಾಧದ ಸಂಬಂಧದಲ್ಲಿ ಆತನ ವಿರುದ್ಧ ಯಾವುದೇ ವ್ಯವಹರಣೆಯನ್ನು ಮುಂದುವರೆಸತಕ್ಕದ್ದಲ್ಲ. ಇವೆರಡರ ಬಗ್ಗೆ ನನಗೆ ಸಂಶಯ ಬರುತ್ತದೆ. ಇವು ಏನು? ಏಕೆ ಇದನ್ನುಇಟ್ಟಿರಿ, ಇದರ ಉದ್ದೇಶ ಏನು? ದಯವಿಟ್ಟು ತಾವು ಇದನ್ನು ನೋಡಬೇಕು. ನೋಡಿ ನಮಗೆ ವಿವರಣೆ ಕೊಡಬೇಕಾಗುತ್ತದೆ. ಸನ್ಮಾನ್ಯ ಅಧ್ಯಕ್ಷರೇ, ಇದು ಎಷ್ಟು ಕೆಟ್ಟದಾಗಿ ಇರುತ್ತದೆ ಅಂದರೆ ಈ ಕಾಯ್ದೆ ಬಂದಿದ್ದು ನನಗಂತೂ ಬಹಳ

ಸಂತೋಷವಾಗಿದೆ. ಹೆಣ್ಣು ಮಕ್ಕಳಿಗಂತೂ ಬಹಳ ಸಂತೋಷವಾಗಿದೆ. ಬಹಳ ಸಂತೋಷವಾಗಿದೆ ಅವರಿಗೆ. ಒಂದು ಮಾತು ಹೇಳಿದರೆ ತಪ್ಪಾದೀತು. ನಮ್ಮ ಕೆ. ಎಂ. ಎಫ್‌ನ ಮ್ಯಾನೇಜಿಂಗ್ ಡೈರೆಕ್ಟರ್ ಒಬ್ಬರು ಸಿಗರೇಟ್ ಸೇದಿಕೊಂಡೇ ಮೀಟಿಂಗ್ ಮಾಡುತ್ತಾರೆ. ಬೋರ್ಡ್ ಸದಸ್ಯರುಗಳ ಎದುರಿಗೆ. ಅತ ಒಬ್ಬ ಐ.ಎ.ಎಸ್ ಆಫೀಸರ್. ಇದೆಲ್ಲಾ ನಡೆಯತಕ್ಕಂಥ ವ್ಯವಹಾರ. ಇದರಿಂದ ಇದೆಲ್ಲಾ ನಿಲ್ಲುತ್ತದೆ. ನಮಗೆ ಅಂಜಿಗೆ ಏನೂ ಇಲ್ಲ. ಇದು ನಿಲ್ಲಬೇಕು. ಮುಂದೆ ಕೆಲವರು ಮಾಡುವವರೂ ಇದ್ದಾರೆ. ನಾನು ನಿಮಗೆ ಹೇಳುತ್ತೇನೆ. ಆಮೇಲೆ ಮಾನ್ಯ ಅಧ್ಯಕ್ಷರೇ, ಎಷ್ಟೇಷ್ಟು ಅನಾಹುತಗಳು ಆಗಿವೆ ಎನ್ನುವ ಬಗ್ಗೆ ನಾನು ಹೇಳುತ್ತೇನೆ. ಈ ಎರಡಕ್ಕೆ ದಯವಿಟ್ಟು ವಿವರಣೆ ಕೊಡಬೇಕು. ನಾನು ಹೇಳಿದ್ದು ಕೆಲವನ್ನು ಸೇರಿಸಿಕೊಳ್ಳಬೇಕು. ತಾವು ಇನ್ನೊಂದು ಕಾಯ್ದೆ ತರಬೇಕು.

ಶ್ರೀ. ಪಾಟೀಲ್ ಶಿವಾನಂದ ಸಿದ್ದರಾಮೆಗೌಡ : ತಾವು ಐದು ನಿಮಿಷ ಎಂದು ಹೇಳಿದಿರಿ, ಭೀಮಾನದಿ ಇದೆ.

ಶ್ರೀ. ಎಸ್.ಎಸ್. ಪಾಟೀಲ್: ಮಾನ್ಯ ಅಧ್ಯಕ್ಷರೇ, ಮುಗಿಸುತ್ತಿದ್ದೇನೆ. ನಾನು ಐದು ನಿಮಿಷ ಎಂದು ಹೇಳಲಿಲ್ಲ. ತಮಗೆ ದಯವಿಟ್ಟು ಕೇಳಿ. ನಾನು ನಿಮ್ಮದು ಕೇಳುತ್ತೇವೆ. ಅವರು ನಿನ್ನೆ ಹಗಲೆಲ್ಲಾ ಕಳೆದಿದ್ದಾರೆ. ಅವರು ಹೇಳಿದರೂ ನಾನು ಕೇಳುವುದಿಲ್ಲ. ಹೀಗೆ ಹಗಲೆಲ್ಲಾ ವೇಸ್ಟ್‌ಆಗಿ ಹೋಗಿದೆ ನಮ್ಮದು. ಗುದ್ದಾಟ ಆಗಿ. ಇಲ್ಲಿದಂತಾದ್ದು ಮಾತನಾಡುವುದಕ್ಕೂ ಟೈಮ್ ಇಲ್ಲ. ಮುಗಿಸಿಬಿಡಿ ಎದ್ದು ಹೋಗೋಣ. ನಾನು ಇದನ್ನು ಕೇಳುವುದಿಲ್ಲ. ನಾನು ಅದಕ್ಕೆ ಅಧ್ಯಕ್ಷರಿಗೆ ಹೇಳಿದೆ. ಆ ಪೀಠದ ಮರ್ಯಾದೆ ಹೋಗಿದೆ ಎಂದು ನನಗೆ ವಿವರಣೆಬೇಕು, ವಿವರಣೆ ಕೊಡುವವರೆಗೂ ನಾನುಸತ್ಯಾಗ್ರಹ ಕೂರುತ್ತೇನೆ. ಇಲ್ಲದಿದ್ದರೆ ನಾನು ಈ ಅಸೆಂಬ್ಲಿಗೆ ಬರುವುದನ್ನು ಬಿಡುತ್ತೇನೆ. ಮುಂದಿನ ಸಲ ಅಧ್ಯಕ್ಷರು ಕರೆದರೆ ನಾನು ಬರುವುದಿಲ್ಲ. ಅದಕ್ಕೆ ಅಧ್ಯಕ್ಷರೆ, ಈಗ ಏಕೆ ನನಗೆ ಅವಸರಮಾಡುತ್ತೀರಿ? ನಾನೇನು ತಪ್ಪು ಮಾತನಾಡುವುದಕ್ಕೆ ಹೊರಟಿದ್ದೇನೆಯೇ? ಅದಕ್ಕೆ ನಾನು ನಮ್ಮ ಗೆಳೆಯರಿಗೆ ವಿನಂತಿ ಮಾಡಿಕೊಂಡೆ. ದಯವಿಟ್ಟು ಇದನ್ನು ತನ್ನಿ ಎಂದು ನಾನು ಹೋದ ಅಧಿವೇಶನದಿಂದ ಹೇಳುತ್ತಿದ್ದೇನೆ ತಪ್ಪೇನೂ ಅಲ್ಲ. ಏನಾದರೂ ವಿಚಾರಗಳು ಮಾತನಾಡಬೇಕೆಂದರೆ ಈ ರೀತಿ ಆಗುತ್ತವೆ.

ಉಪಾಧ್ಯಕ್ಷರು: ತಾವು ಮಾತನಾಡಿದ್ದೀರಿ. ನಿಮ್ಮ ವಿಚಾರ ಹೋಗುವುದಿಲ್ಲ.

ಶ್ರೀ. ಎಸ್.ಎಸ್. ಪಾಟೀಲ್: ಇದರ ಜೊತೆಗೆ ಇನ್ನೊಂದು ಕಾಯ್ದೆ ತರಬೇಕು. ಜೊತೆಗೆ ಘಾನನೀಷೇಧ ಸಹ ಮಾಡಬೇಕು. ಸಾರ್ವಜನಿಕ ಸ್ಥಳಗಳಲ್ಲಿ ಕುಡಿಯಬಾರದು ಎಂದು ಇದರಲ್ಲಿ ಹಾಕಿ ಮತ್ತೊಂದು ಕಾಯ್ದೆ ತನ್ನಿ ಎಂದು ಹೇಳುತ್ತಿದ್ದೇನೆ. ಇದು ಎಲ್ಲಿಗೆ ಹೋಗಿದೆ ಅಂದರೆ 24 ಗಂಟೆ ಕುಡಿದು ಬರುವ ಅಧಿಕಾರಿಗಳು ಇದ್ದಾರೆ. ನಾನೇ ಮೊನ್ನೆ ಮುಂಡರಗಿಯಲ್ಲಿ ಕುಡಿಯುವ ಡ್ರೈವರ್‌ನ್ನು ಹಿಡಿದು ಸಸ್ಪೆಂಡ್ ಮಾಡಿದ್ದೇನೆ. ಅದಕ್ಕೆ ದಯವಿಟ್ಟು ನಾನು ತಮಗೆ ಹೇಳುತ್ತೇನೆ. ಸಾರ್ವಜನಿಕ ಸ್ಥಳಗಳಲ್ಲಿ ಕುಡಿದು ದಾಂಧಲೆ ಮಾಡುವುದುತಪ್ಪಿಸುವ ಕಾಯ್ದೆಯನ್ನೂ ಸಹ ತಾವು ಮುಂದೆ ತರಬೇಕೆಂದು ಹೇಳಿ ನಾನು ಇದನ್ನು ಸ್ವಾಗತಿಸಿ ದಯವಿಟ್ಟು ನಾನು ಎನು ಕೆಲವು ವಿಚಾರಗಳನ್ನು ಹೇಳಿದ್ದೇನೆ ಅವುಗಳನ್ನು ಈ ಕಾಯಿದೆಗೆ ಸೇರಿಸಬೇಕು. ಈ ಕಾಯ್ದೆಯಲ್ಲಿ ನನಗೆ ಎನು ಸಂಶಯ ಬಂದಿದೆ. ಆ ಬಗ್ಗೆ ವಿವರಣೆಯನ್ನು ಹೇಳಬೇಕೆಂದು ಹೇಳಿ ನಾನು ಈ ವಿಧೇಯಕವನ್ನು ಸ್ವಾಗತಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು: ಈಗ ಮಾನ್ಯ ವಿಶ್ವೇಶ್ವರ ಹೆಗಡೆಯವರು ಮಾತನಾಡಿದ ವಿಷಯವನ್ನು ಇಲ್ಲಿ ಹೇಳುತ್ತಿದ್ದೇನೆ. "ಈಗ ಇರುವ ಪೋಲಿಸ್ ವ್ಯವಸ್ಥೆಯಲ್ಲಿ ನಾವು ಮರ್ಡರ್ ಮಾಡಿದವರನ್ನೇ ಹಿಡಿಯಲು ಆಗುತ್ತಿಲ್ಲ. ಪೋಲಿಸರನ್ನು ಕಳುಹಿಸುವುದಕ್ಕೆ ಆಗುತ್ತಿಲ್ಲ. ಎಲ್ಲೂ ಆಕಸ್ಮಿತವಾಗಿ ಸಿಕ್ಕಿದವರು ಸಿಕ್ಕಿ ಹಾಕಿಕೊಳ್ಳುತ್ತಾರೆ".

(ಗೊಂದಲ)

ಶ್ರೀ. ಎ. ಕೃಷ್ಣಪ್ಪ ಮಾನ್ಯ ಅಧ್ಯಕ್ಷರೇ, ಅವರು ಮಾತನಾಡುವಾಗ ಮರ್ಡರ್ ಆಗಿರುವವರನ್ನು ಹಿಡಿಯಲಿಕ್ಕೆ ಆಗಲಿಲ್ಲ ಅಂದಾಗ ನಾನು ಇಂಟರ್‌ವಿನ್ ಆದದ್ದು. ನಾನು ಇಂಟರ್‌ವಿನ್ ಆಗಿ ಕೂತ ಮರು ಕ್ಷಣವೇ ಈ ಮಾತು ಅವರ ಬಾಯಿಂದ ಬಂದಿದೆ. This is the inference that I am drawing. ಅವರು ಇಲ್ಲ ಎಂದು ಹೇಳಲಿ.

(ಗೊಂದಲ)

ಶ್ರೀ. ವಿಶ್ವೇಶ್ವರ ಹೆಗಡೆ ಕಾಗೇರಿ: ನಾನು ಯಾರ ಹೆಸರೂ ಹೇಳಲಿಲ್ಲ.

(ಗೊಂದಲ)

ಶ್ರೀ. ಎಸ್ ಎಸ್ ಪಾಟೀಲ್: ನಾವು ಸಹ ಆ ರೀತಿ ಮಾತನಾಡಬಾರದು ಅದು ಸರಿಯಲ್ಲ. ನಾನು ಒಪ್ಪುವುದಿಲ್ಲ. ಅದನ್ನು ಕಡತದಿಂದ ತೆಗೆಸಿ.

(ಗೊಂದಲ)

ಶ್ರೀ. ಸಿ. ಚನ್ನಿಗಪ್ಪ: ಶಾಸನಸಭೆಯಲ್ಲಿ ಆ ರೀತಿ ಹೇಳಬಾರದು ತಪ್ಪು ಅದು.

(ಗೊಂದಲ)

ಶ್ರೀ. ವೈ. ಕೆ. ರಾಮಯ್ಯ: ಛೀಮಾರಿ ಹಾಕಬೇಕು. ಕ್ಷಮೆ ಕೇಳಬೇಕು. ಇಲ್ಲಾ ಛೀಮಾರಿ ಹಾಕಬೇಕು ಇಲ್ಲಾ ಎಕ್ಸ್‌ಪೆಲ್ ಮಾಡಬೇಕು.

(ಗೊಂದಲ)

ಉಪಾಧ್ಯಕ್ಷರು: ಕೃಷ್ಣಪ್ಪನವರೇ ಸ್ವಲ್ಪ ಸಮಾಧಾನದಿಂದ ಇರಿ.

(ಗೊಂದಲ)

ಶ್ರೀ. ಸಿ. ಎಂ. ಲಿಂಗಪ್ಪ: ಮಾನ್ಯ ಅಧ್ಯಕ್ಷರೇ, ಇದೆ ಮೊದಲನೇ ಸಲ ಅಲ್ಲ. ಈ ರೀತಿ ಬಹಳಷ್ಟು ಸಲ ನಡೆದಿದೆ. ನೀವು ಅವರ ವಿರುದ್ಧ ಸರಿಯಾದ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಬಹಳ ಸಲ ಈ ತರಹದ ಮಾತುಗಳು ಬಂದಿವೆ.

ಶ್ರೀ. ಉಪಾಧ್ಯಕ್ಷರು: ತಾವುಸ್ವಲ್ಪ ಇರಿ ಲಿಂಗಪ್ಪನವರೇ. ಆ ವಿಚಾರದ ಬಗ್ಗೆ ಮಾತನಾಡುತ್ತಿದ್ದಾರೆ.

ಶ್ರೀ. ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು): ಮಾನ್ಯ ಅಧ್ಯಕ್ಷರೇ, ನಿಮಂತಹವರು ತಪ್ಪಿಸಿ ಕೊಳ್ಳುತ್ತಾರೆ ಎಂದು ಹೇಳಿದರಲ್ಲಾ ಆ ಮಾತಿನ ಸಂದರ್ಭ ಏನು ಬಂತು ಅಂದರೆ ಪೋಲಿಸಿನವರು ಕೊಲೆ ಮಾಡಿದವರನ್ನು ಹಿಡಿಯಲಿಕ್ಕೆ ಆಗಲಿಲ್ಲವೆಂದು ಹೇಳಿದಾಗ ಎಲ್ಲಿ ಆ ರೀತಿ ನಡೆದಿದೆ ಎಂದು ಮಾನ್ಯ ಕೃಷ್ಣಪ್ಪನವರು ಕೇಳಿದಾಗ ಈ ಘಟನೆ ನಡೆಯಿತು. ಅದ್ದರಿಂದ ಅದು ನೇರವಾಗಿ ಅವರ ಬಗ್ಗೆ ಮಾಡಿದ ಅಪಾದನೆಯಾಗುತ್ತದೆ. ಆದ್ದರಿಂದ ಮಾನ್ಯ ವಿಶ್ವೇಶ್ವರ ಹೆಗಡೆಯವರು ಆ ಮಾತನ್ನು ವಾಪಸ್ಸು ತೆಗೆದುಕೊಳ್ಳಬೇಕು ಮತ್ತು ಕ್ಷಮೆ ಕೇಳಬೇಕು.

(ಗೊಂದಲ)

ಶ್ರೀ. ವೈ ಕೆ ರಾಮಯ್ಯ: ಛೀಮಾರಿ ಹಾಕಬೇಕು.

ಶ್ರೀ. ಸಿ.ಆರ್ ಸಗೀರ್ ಅಹಮದ್(ವಸತಿ ಸಚಿವರು): ಮಾನ್ಯ ಅಧ್ಯಕ್ಷರೇ ಈ ಬಗ್ಗೆ ತೀರ್ಮಾನ ಮಾಡುವಂಥಾದ್ದು ತಮ್ಮ ಕೈಯಲ್ಲಿದೆ. ಅವರು ಹೇಳಿರುವಂಥದ್ದು, ತಪ್ಪಿಸಿಕೊಂಡಿರುವವರು ಎಂದು ಹೇಳುವಾಗ ಅದು ನಿಮಗೂ ಹೇಳುವಂತಹ ಸಾಧ್ಯತೆ ಆಗುತ್ತದೆ. ದಯಮಾಡಿ ತಾವು ಕೇಳಬೇಕು. ಈಗ ನಾನು ತಮ್ಮನ್ನು ಉದ್ದೇಶಿಸಿ ಮಾತನಾಡಬೇಕೇ ವಿನಹ: ನಾನು ಬೇರೆ ಯಾರನ್ನೋ ಉದ್ದೇಶಿಸಿ ಈ ಸಂದರ್ಭದಲ್ಲಿ ಮಾತನಾಡುವುದಕ್ಕೆ ಈ ಸಂದರ್ಭದಲ್ಲಿ ಆಗುವುದಿಲ್ಲ.

(ಗೊಂದಲ)

ಶ್ರೀ. ಡಿ. ಕೆ. ಶಿವಕುಮಾರ್: ಅವರು ಕ್ಷಮೆ ಕೇಳಬೇಕು. ತಾವು ಛೀಮಾರಿ ಹಾಕಬೇಕು.

(ಗೊಂದಲ)

ಶ್ರೀ. ಬಿ.ಎಚ್ ಬನ್ನಿಕೋಡ್: ಮಾನ್ಯ ಅಧ್ಯಕ್ಷರೇ, ತಾವು ದಯವಿಟ್ಟು ಗಮನಿಸಬೇಕು.

(ಗೊಂದಲ)

ಶ್ರೀ. ಬಿ.ಎಚ್ ಬನ್ನಿಕೋಡ್: ಮಾನ್ಯ ಅಧ್ಯಕ್ಷರೇ, ಇಡೀ ಸದನದ ಸದಸ್ಯರು ಈ ಸದನದ ಸಂಪ್ರದಾಯವನ್ನು ಗೌರವವನ್ನು ಎತ್ತಿ ಹಿಡಿದು ಕಾನೂನು ರೀತಿ ಚರ್ಚೆಯನ್ನು ಎಲ್ಲರೂ ಮಾಡುತ್ತಿದ್ದಾರೆ. ಆದರೆ ಇವತ್ತು ಒಂದೇ ದಿವಸ ಇವತ್ತು ಮಾತನಾಡಿದಂತಹ ಶಾಸಕ ಸ್ನೇಹಿತರು ಇದು ಒಂದೇ ಸಂದರ್ಭ ಅಲ್ಲ ತಾವು ಕಡತಗಳನ್ನು ತೆಗೆದು ನೋಡಿ ವೈಯಕ್ತಿಕವಾಗಿ ಒಬ್ಬ ವ್ಯಕ್ತಿಯ ಮಾನ ಹರಣ ಮಾಡತಕ್ಕಂಥ ಮಾತುಗಳು ಎಷ್ಟು ಸಲ ಮಾತನಾಡಿದ್ದಾರೆಂದು ಕಡತತೆಗೆದು ನೋಡಿ ಒಬ್ಬರಿಗಲ್ಲ, ಇಬ್ಬರಿಗಲ್ಲ. ಇದು ಸರಿಯಲ್ಲ. ವ್ಯಕ್ತಿಯ ಚಾರಿತ್ರ್ಯವನ್ನು ಹಾಳು ಮಾಡತಕ್ಕಂಥ ಮಾತುಗಳನ್ನು ಆಡಬಾರದೆಂದು ಇಲ್ಲಿರತಕ್ಕಂಥ ನಿಯಮ. ಯಾವುದಾದರೂ ವ್ಯಕ್ತಿಯ ಮೇಲೆ ಆರೋಪ ಮಾಡಬೇಕಾದರೆ ನೇರವಾಗಿ ತಮಗೆ ನೋಟೀಸ್ ಕೊಟ್ಟು, ಆ ವ್ಯಕ್ತಿಗೆ ನೋಟೀಸ್ ಕೊಟ್ಟು ಅಂಥ ವ್ಯಕ್ತಿಗಳ ಮೇಲೆ ಆಪಾದನೆ ಮಾಡಬೇಕಾಗುತ್ತದೆ. ಇದು ಪ್ರತ್ಯಕ್ಷವಾಗಿ ಇರಬಹುದು, ಅಪ್ರತ್ಯಕ್ಷವಾಗಿ ಇರಬಹುದು ಆದರೆ ಯಾರಿಗೂ ಶೋಭೆ ತರತಕ್ಕಂಥದ್ದು ಇದು ಅಲ್ಲ. ಒಬ್ಬ ವ್ಯಕ್ತಿಯ ವ್ಯಕ್ತಿತ್ವವನ್ನು ಹರಣ ಮಾಡುವುದಕ್ಕೆ ಹೋದರೆ, ಯಾರು ಹರಣ ಮಾಡಲಿಕ್ಕೆ ಹೋಗುತ್ತಾರೆ ಆ ವ್ಯಕ್ತಿಯ ವ್ಯಕ್ತಿತ್ವ ದೊಡ್ಡದು ಆಗುವುದಿಲ್ಲ. ದಯವಿಟ್ಟು ಅವರು ಹೇಳಿದಂಥ ಪದಗಳನ್ನು ಎಲ್ಲವನ್ನೂ ಕಡತದಿಂದ ತೆಗೆಸಿರಿ. ಅವರು ಏನು ಹೇಳಿದ್ದಾರೆ ಎಂಬುದಕ್ಕೆ ಕಡತಗಳೆಲ್ಲವನ್ನು ತೆಗೆಸಿರಿ. ಮೇಲಿಂದ ಮೇಲೆ ಈ ರೀತಿ ಆಗುತ್ತಾ ಇರುವುದರಿಂದ ಅವರು ಕ್ಷಮೆ ಕೇಳಬೇಕು, ಇಲ್ಲವೇ, ತಾವು ಛೀಮಾರಿ ಹಾಕ ಬೇಕು.

(ಗೊಂದಲ)

ಉಪಾಧ್ಯಕ್ಷರು: ಈಗ ಇಲ್ಲಿ ಗಮನಿಸಿ ಎನ್ನುವಂಥ ಮಾತನ್ನು ಕಡತದಿಂದ ತೆಗೆದುಹಾಕಬೇಕು. 'ನಿಮ್ಮಂಥವರು' ಎಂದು ಯಾರನ್ನು ಉದ್ದೇಶಿಸಿ ಶ್ರೀ ಹೆಗಡೆಯವರು ಮಾತನಾಡಿದರೋ ಅದಕ್ಕೆ ಅವರು ಭೇಷರತ್ ಆಗಿ ಆ ಮಾತನ್ನು ವಾಪಸ್ಸು ತೆಗೆದುಕೊಳ್ಳಬೇಕು.

(ಗೊಂದಲ)

ಶ್ರೀ. ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಉಪಾಧ್ಯಕ್ಷರೆ, ನಾನು ಯಾರನ್ನೂ ವೈಯಕ್ತಿಕವಾಗಿ ಉದ್ದೇಶಿಸಿ ಹೇಳಿಲ್ಲ. ಒಂದೊಮ್ಮೆ ಅದು ಯಾರಿಗಾದರೂ ವೈಯಕ್ತಿಕವಾಗಿ...

(ಗೊಂದಲ)

ಉಪಾಧ್ಯಕ್ಷರು: ಶ್ರೀ ಹೆಗಡೆಯವರೇ, ಸ್ಪಷ್ಟವಾಗಿ ಹೇಳಬೇಕೆನ್ನುವುದಾದರೆ, ಶ್ರೀ. ಕೃಷ್ಣಪ್ಪನವರು ಮಾತನಾಡಿದಂಥ ಸಂದರ್ಭದಲ್ಲಿ ತಾವು ಮಾತನಾಡಿದ್ದು. ಅವರನ್ನು ಉದ್ದೇಶಿಸಿ ತಾವು ಮಾತನಾಡಿದ್ದೀರೆನ್ನುವುದು ಸ್ಪಷ್ಟವಾಗಿದೆ. ಅದರಲ್ಲಿ ಏನೂ ಅನುಮಾನ ಇಲ್ಲ. ಆದ್ದರಿಂದ ನೀವು ಬೇಷರತ್ ಆಗಿ ಆ ಮಾತನ್ನು ವಾಪಾಸ್ಸು ತೆಗೆದುಕೊಂಡು ವಿಷಾದ ವ್ಯಕ್ತಪಡಿಸಲೇ ಬೇಕು.

(ಗೊಂದಲ)

ಶ್ರೀ. ವಿಶ್ವೇಶ್ವರ ಹೆಗಡೆ ಕಾಗೇರಿ: ಒಂದು ಮಾತನ್ನು ನಾನು ಸ್ಪಷ್ಟಪಡಿಸುವುದಕ್ಕೆ ಹೇಳುತ್ತೇನೆ....

(ಗೊಂದಲ)

ಉಪಾಧ್ಯಕ್ಷರು: ಅವರಿಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೇನೆ. ದಯಮಾಡಿ ಗಲಾಟೆ ಮಾಡದೆ ಎಲ್ಲರೂ ಕುಳಿತುಕೊಳ್ಳಿ.

ಶ್ರೀ. ವಿಶ್ವೇಶ್ವರ ಹೆಗಡೆ ಕಾಗೇರಿ: ನಾನು ಬಹಳ ಸ್ಪಷ್ಟವಾಗಿ ಈ ಸಂದರ್ಭದಲ್ಲಿ ಮತ್ತೆ ಪುನರ್‌ರುಚ್ಚರಿಸುವುದಕ್ಕೆ ಬಯಸುವುದೇನೆಂದರೆ, ಇದನ್ನು ಯಾರು ವೈಯಕ್ತಿಕವಾಗಿ ಯಾರ ಉದ್ದೇಶಿಸಿಯೂ ಹೇಳಿದ್ದು ಅಲ್ಲ. ಒಮ್ಮೊಮ್ಮೆ ಆಕಸ್ಮಿಕವಾಗಿ ಅದು ಕೃಷ್ಣಪ್ಪನವರಿಗೆ ಅನ್ವಯಿಸುತ್ತದೆ. ಎಂದಾದರೆ ನಾನು ಅವರಿಗೆ ಅನ್ವಯಿಸಬೇಕೆಂದು ಹೇಳಿದ್ದಲ್ಲ. ಒಮ್ಮೆ ಆ ರೀತಿ ಏನಾದರೂ ಆಗಿದ್ದರೆ ಅದಕ್ಕೆ ನಾನು ವಿಷಾದ ವ್ಯಕ್ತಪಡಿಸುತ್ತೇನೆ. ಇನ್ನು ಎರಡನೇ ಭಾಗ, ನಾನು ಬಹಳ ಸ್ಪಷ್ಟವಾಗಿ ಇನ್ನೊಂದು ಹೇಳುವುದೇನೆಂದರೆ, ನಾನು ಮಾತನಾಡುತ್ತಿರುವಂಥ ಸಂದರ್ಭದಲ್ಲಿ ಉಳಿದಂಥವರು ಮಧ್ಯೆ ಇಂಟರ್‌ವಿನ್ ಆಗುವುದರಿಂದ ಈ ರೀತಿ ಕೆಲವು ಗೊಂದಲಗಳು ಆಗುವಂಥ ಸಾಧ್ಯತೆಗಳು ಇವೆ. ಸಾದ್ಯತೆಗಳು ಆಗಿವೆ...

(ಗೊಂದಲ)

ಉಪಾಧ್ಯಕ್ಷರು: ಅವರು ಏನು ಒಂದು ವಾಕ್ಯ ಹೇಳಿದ್ದರು ಅದನ್ನು ಕಡತದಿಂದ ತೆಗೆದುಹಾಕಲಾಗಿದೆ ಮತ್ತು ಈಗ 'ಏನು ಅವರು' ಯಾರ ಉದ್ದೇಶಿಸಿ ಮಾತನಾಡಿದ್ದಲ್ಲ, ಎಂದು ವಿಷಾದ ವ್ಯಕ್ತಪಡಿಸಿ ತಮ್ಮ ಮಾತನ್ನು ವಾಪಾಸ್ಸು ತೆಗೆದುಕೊಂಡಿದ್ದಾರೆ, ಅದಕ್ಕಾಗಿ ಈ ವಿಷಯವನ್ನು ಇಲ್ಲಿಗೆ ಮುಗಿಸೋಣ.

ಶ್ರೀ. ಅರಗ ಜ್ಞಾನೇಂದ್ರ: ದಯವಿಟ್ಟು ಮಾನ್ಯ ಸಚಿವರು ಬಹಳ ಹಿರಿಯರು ಇದ್ದಾರೆ. ಕರ್ನಾಟಕ ರಾಜ್ಯದ ಸಚಿವರಾಗಿದ್ದಾರೆ. ಅವರು ಹೇಳಿದ ಕೆಲವು ಪದವನ್ನು ಕಡತದಿಂದ ತೆಗೆದುಹಾಕಬೇಕು ಮತ್ತು ಅವರೂ ಕೂಡ ವಿಷಾದ ವ್ಯಕ್ತಪಡಿಸಬೇಕು.

(ಗೊಂದಲ)

ಉಪಾಧ್ಯಕ್ಷರು: ಪದವನ್ನು ಸಹ ಕಡತದಿಂದ ತೆಗೆದುಹಾಕಲಾಗಿದೆ.

(ಗೊಂದಲ)

ಉಪಾಧ್ಯಕ್ಷರು: ಇಲ್ಲಿ ಶ್ರೀ ಹೆಗಡೆಯವರು ಸಚಿವರನ್ನು ಉದ್ದೇಶಿಸಿ ಹೇಳಿದ್ದಕ್ಕೆ ತಕ್ಷಣ ಅವರು ಮಾತನಾಡಿದ್ದಾರೆಯೇ ಹೊರತು ಅದಕ್ಕಿಂತ ಮೊದಲು ಹೇಳಲಿಲ್ಲ. ಈ ಕಡತದಿಂದ ನೋಡಿದರೂ ಹಾಗೆಯೇ ಇದೆ.

(ಗೊಂದಲ)

ಶ್ರೀ. ಅರಗ ಜ್ಞಾನೇಂದ್ರ: ಸಚಿವರು ಹೇಳಿರುವುದನ್ನೂ ಸಹ ಕಡತದಿಂದ ತೆಗೆದುಹಾಕಬೇಕು.

ಉಪಾಧ್ಯಕ್ಷರು: ಅದನ್ನು ಕಡತದಿಂದ ತೆಗೆದುಹಾಕಲಾಗಿದೆ.

ಶ್ರೀ. ಅರಗ ಜ್ಞಾನೇಂದ್ರ: ತಮ್ಮ ಸೀಟ್ ನಿಂದ ತಾರತಮ್ಯ ಆಗಬಾರದು.

ಉಪಾಧ್ಯಕ್ಷರು:ತಾರತಮ್ಯ ಇಲ್ಲ. ತೆಗೆದುಹಾಕಲಾಗಿದೆ.

ಶ್ರೀ. ಅರಗ ಜ್ಞಾನೇಂದ್ರ: ತಾವು ಏನು ಶ್ರೀ ವಿಶ್ವೇಶ್ವರ ಹೆಗಡೆಯವರಿಗೆ ಹೇಳಿದ್ದೀರಿ, ಅದೇ ಆದೇಶವನ್ನು ದಯಮಾಡಿ ಅವರು ಹಿರಿಯ ಸಚಿವರು ಇದ್ದಾರೆ. ಅವರಿಗೂ ಕೂಡ ತಾವು ಹೇಳಬೇಕು.

(ಗೊಂದಲ)

ಶ್ರೀ. ಸಿ.ಆರ್. ಸಗೀರ್ ಅಹಮ್ಮದ್: ಮಾನ್ಯ ಉಪಾಧ್ಯಕ್ಷರೇ, ವಿಶ್ವೇಶ್ವರ ಹೆಗಡೆಯವರ ಹೆಸರು ತೆಗೆದುಕೊಂಡು ಸಚಿವರನೇನನೂ ಹೇಳಲಿಲ್ಲ. ಅವರು ಅವರಿಗೆನೂ ಎಂದು ಏನೂ ಹೇಳಲಿಲ್ಲ. ಅದಕ್ಕೆ ಏಕೆ ವಿಷಾದ ವ್ಯಕ್ತಪಡಿಸಬೇಕು?

ಶ್ರೀ. ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು): ವಿಷಾದ ವ್ಯಕ್ತಪಡಿಸಿ ಎಂದು ಹೇಳಿದರೆ ಅದಕ್ಕೆ ಸಚಿವರು ವಿಷಾದ ವ್ಯಕ್ತಪಡಿಸುತ್ತಿಲ್ಲ. ಇವರು ಅವರ ಬಗ್ಗೆ ಮಾತನಾಡಿದರೆ ಅವರಿಗೆ ಇವರು ವಿಷಾದ ವ್ಯಕ್ತ ಪಡಿಸಬೇಕು. ಅವರು ವಿಷಾದ ವ್ಯಕ್ತಪಡುವಂಥದ್ದು ಇಲ್ಲ ಎಂದರೆ ಇದು ಯಾವ ನ್ಯಾಯ? ಈ ರೀತಿ ಆಗಬಾರದು.

(ಗೊಂದಲ)

ಉಪಾಧ್ಯಕ್ಷರು: ಮಾತನಾಡುವ ರೀತಿ ನೀತಿಯಲ್ಲಿ ವ್ಯತ್ಯಾಸಗಳು ಇವೆ. ಈಗ ಎರಡನ್ನೂ ಕಡತದಿಂದ ತೆಗೆದುಹಾಕಲಾಗಿದೆ.

(ಗೊಂದಲ)

ಶ್ರೀ. ಅರಗ ಜ್ಞಾನೇಂದ್ರ: ಮಾನ್ಯ ಉಪಾಧ್ಯಕ್ಷರೆ, ದಯವಿಟ್ಟು ಇಲ್ಲಿ ಕೇಳಿ. ಕಡತವನ್ನು ತೆಗೆದು ನೋಡಿ. ಇವರು ಹೇಳಿದ್ದಕ್ಕೆ ನಿಮ್ಮ ರಕ್ಷಣೆ ಅವರಿಗೆ ಇತ್ತು. ನೀವು ಹೇಳುತ್ತೀರೆಂದು ಅವರಿಗೆ ಗೊತ್ತಿತ್ತು. ಆದರೆ ಅವರೇ ವೈಯಕ್ತಿಕವಾಗಿ ಆ ರೀತಿ ಮಾತನಾಡಲಿಕ್ಕೆ ಅವಕಾಶ ಇದೆಯೇ? ಆದರಿಂದಾಗಿ ಅವರು ಹೇಳಿರತಕ್ಕಂಥ ಮಾತು ಒಬ್ಬ ಸಚಿವರಾಗಿದ್ದಂಥವರ ಬಾಯಿಯಿಂದ ಬರತಕ್ಕಂಥ ಮಾತು ಇದಲ್ಲ. ದಯವಿಟ್ಟು ಆ ಶಬ್ಧವನ್ನು ತೆಗೆದುಹಾಕುವುದರ ಜೊತೆಗೆ ಅವರೂ ಕೂಡ ಈ ಸದನದಲ್ಲಿ ವಿಷಾದವನ್ನು ವ್ಯಕ್ತಪಡಿಸುವಂಥ ಮಾತನ್ನು ಹೇಳಬೇಕು. ಅವರು ನೇರವಾಗಿ ಶ್ರೀ ಹೆಗಡೆಯರಿಗೆ ಹೇಳಿದ್ದಾರೆ.

ಉಪಾಧ್ಯಕ್ಷರು: ತಾವು ಹೇಳುತ್ತಿದ್ದಂತೆಯೇ ಆ ಪದಗಳನ್ನು ಕಡತದಿಂದ ತೆಗೆದು ಹಾಕಲಾಗಿದೆ.

(ಗೊಂದಲ)

ಶ್ರೀ. ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು): ಅವರು ಇವರಿಗೆ ನೇರವಾಗಿ ಹೇಳಿದ್ದಾರೆ. ಆ ಪದವನ್ನು ಮಂತ್ರಿಯಾದವರೊಬ್ಬರು ಉಪಯೋಗಿಸಬಹುದೇ?

(ಗೊಂದಲ)

ಉಪಾಧ್ಯಕ್ಷರು: ಶ್ರೀ ಕೃಷ್ಣಪ್ಪನವರೇ, ತಾವೂ ಕೂಡ ಇನ್ನು ಮೇಲೆ ಯಾವುದೇ ಹಂತದಲ್ಲಿ ಈ ರೀತಿಯ ಶಬ್ಧಗಳನ್ನು ದಯವಿಟ್ಟು ಸದನದಲ್ಲಿ ಬಳಸಬಾರದು. ಇನ್ನು ಮುಂದೆ ಬಳಸುವುದಿಲ್ಲ ಎಂದು ನೀವು ಹೇಳಿಬಿಡಿ.

(ಗೊಂದಲ)

ಉಪಾಧ್ಯಕ್ಷರು: ರೆಕಾರ್ಡ್‌ನಿಂದ ತೆಗೆದುಹಾಕಿದ್ದೇನೆ. ನೀವೂ ಕೂಡ ಜವಾಬ್ದಾರಿಯುತ ಸಚಿವರಾಗಿ ಈ ತರಹ ಮಾತನಾಡುವುದು ಅಲ್ಲ. ಮಾತನಾಡಬಾರದು.

(ಗೊಂದಲ)

ಶ್ರೀ ಎ. ಕೃಷ್ಣಪ್ಪ: ಮಾನ್ಯ ಉಪಾಧ್ಯಕ್ಷರೆ, ದಿನಾ ಹೇಳುತ್ತಾ ಇರಲಿ ಅವರು, ಕೇಳಿಕೊಂಡು ಹೋಗೋಣ.

(ಗೊಂದಲ)

ಶ್ರೀ. ಎಸ್.ಸಿ.ಮುದ್ದಹನುಮೇಗೌಡ: ಮಾನ್ಯ ಉಪಾಧ್ಯಕ್ಷರೆ, ಇಲ್ಲಿ ಏನು ನಡೆಯುತ್ತಿದೆ ಅದರಲ್ಲಿ ನಾವು ಎಲ್ಲರೂ ಕೂಡ ಭಾಗಿಯಾಗಿದ್ದೇವೆ. ಈಗ ಮಾನ್ಯ ಕೃಷ್ಣಪ್ಪನವರು ಉಪಯೋಗಿಸಿರುವಂಥ ಪದಕ್ಕೆ ಅವರು ವಿಷಾದ ವ್ಯಕ್ತಪಡಿಸಬೇಕಾಗಿಲ್ಲ. ಕಾರಣ ಇಷ್ಟೇನೇ, ಏಕೆಂದರೆ, ಪ್ರೋವೋಕೇಷನ್ ಮಾಡಿರುವುದು ಅವರು ಇವತ್ತು ಶ್ರೀ ವೈ.ಕೆ.ರಾಮಯ್ಯನವರು ಆಗಲೀ, ಮಾನ್ಯ ಕೃಷ್ಣಪ್ಪನವರು ಆಗಲೀ ಯಾವುದಾದರೂ ಪದವನ್ನು ಉಪಯೋಗಿಸಿದರೆ ಅದಕ್ಕೆ ಮೂಲ ಕಾರಣ ಪ್ರೋವೋಕೇಷನ್. ಆದ್ದರಿಂದ ಪ್ರೊವೋಕೇಷನ್ ಮಾಡಿರತಕ್ಕಂಥದ್ದು ಸರಿಯಿಲ್ಲ....

(ಗೊಂದಲ)

ಶ್ರೀ. ಅರಗ ಜ್ಞಾನೇಂದ್ರ: ಮೊದಲು ಪ್ರೊವೋಕ್ ಮಾಡಿದವರು ಅವರೇ. ಅದನ್ನೂ ಇಲ್ಲಿ ಚರ್ಚೆ ಮಾಡಬಹುದಾಗಿತ್ತಲ್ಲ.

(ಗೊಂದಲ)

ಉಪಾದ್ಯಕ್ಷರು: ತಾವು ಕುಳಿತು ಕೊಳ್ಳಿ ಇದನ್ನು ಇಲ್ಲಿಗೆ ಮುಕ್ತಾಯ ಮಾಡೋಣ ನಾನು ಈಗಾಗಲೇ ವಾರ್ನಿಂಗ್ ಕೊಟ್ಟಿದ್ದೇನೆ...

ಶ್ರೀ. ಎಸ್.ಸಿ.ಮುದ್ದಹನುಮೇಗೌಡ: ಮಾನ್ಯ ಉಪಾಧ್ಯಕ್ಷರೇ, ಅದು ತಮ್ಮ ವಿವೇಚನೆಗೆ ಬಿಡುತ್ತೇನೆ. ಆದರೆ ಒಂದು ವಿಷಯವನ್ನು ನಾನು ಹೇಳಲಿಕ್ಕೆ ಇಷ್ಟಪಡುತ್ತೇನೆ. ಇದು ತೀರ್ಮಾನ ಅಂತಿಮವಾಗಿ ತಮ್ಮ ವಿವೇಚನೆಗೆ ಬಿಟ್ಟದ್ದು. ಆದರೆ, ಒಂದು ಸ್ಪಷ್ಟ ಮಾಡಲಿಕ್ಕೆ ಇಷ್ಟಪಡುತ್ತೇನೆ. ಅದೇನೆಂದರೆ, ವಿಷಾದ ವ್ಯಕ್ತಪಡಿಸತಕ್ಕಂಥದ್ದಕ್ಕೂ, ಕ್ಷಮೆ ಕೇಳತಕ್ಕಂಥದ್ದಕ್ಕೂ ವ್ಯತ್ಯಾಸ ಇದೆ. In between, there are lot of differences. ಈಗ ಇಂಥ ಪರಿಸ್ಥಿತಿಯಲ್ಲಿ. ಬರೀ ವಿಷಾದ ವ್ಯಕ್ತಪಡಿಸುತ್ತೇನೆ ಎಂದು ಹೇಳತಕ್ಕಂಥದ್ದು ಅದು ಸಮಂಜಸವಾದತಕ್ಕಂಥದ್ದಲ್ಲ. ಇಂಥ ಪರಿಸ್ಥಿತಿಗೆ ಸರಿಯಾದ ಉತ್ತರ, ಸರಿಯಾದುದನ್ನು ಕೇಳುವುದಿದ್ದರೆ ಕ್ಷಮೆ ಕೇಳತಕ್ಕಂಥದ್ದು ಆಗಬೇಕು. ನಾನು ಕ್ಷಮೆ ಕೇಳುತ್ತೇನೆಂದು ಹೇಳಬೇಕು. ಮೊನ್ನೆಯ ದಿವಸ ಸದನದಲ್ಲಿ ಇಂಥದೇ ಒಂದು ಪರಿಸ್ಥಿತಿ ಬಂದಾಗ ಮಾನ್ಯ ಹಿರಿಯ ಸದಸ್ಯರಿಗೆ ನೋವಾದಂಥ ಸಂದರ್ಭದಲ್ಲಿ ಶ್ರೀ ಅಭಯ ಚಂದ್ರ ಅವರಿಗೆ ಇವರು ಏನು ಸಲಹೆ ಕೊಟ್ಟರು?

ಶ್ರೀ. ಕೆ.ಶ್ರೀನಿವಾಸಗೌಡ ಗುದುವನಹಳ್ಳಿ: ಮಾನ್ಯ ಉಪಾಧ್ಯಕ್ಷರೇ, ತಾವು ಆ ವಿಷಯದ ಮೇಲೆ ಮಾತನಾಡಿದ ಮೇಲೆ ಮತ್ತೆ ಬೇರೆಯವರಿಗೆ ಏಕೆ ಅವಕಾಶ ಕೊಡುತ್ತೀರಿ. ಈಗ ಬಿಲ್ ಬಗ್ಗೆ ಮಾತನಾಡೋಣ.

(ಗೊಂದಲ)

ಶ್ರೀ. ಜಗದೀಶ್ ಶೆಟ್ಟರ್: ಮಾನ್ಯ ಉಪಾಧ್ಯಕ್ಷರೆ ತಾವು ಈಗ ಶ್ರೀ ವಿಶ್ವೇಶ್ವರ ಹೆಗಡೆ ಅವರಿಗೆ ತಾವು ಏನೋ ಹೇಳಿದಿರಿ ಅದರ ಪ್ರಕಾರ ಅವರು ವಿಷಾದ ವ್ಯಕ್ತಪಡಿಸಿದರು.

ಮಾನ್ಯ ಸಚಿವರಾದ ಶ್ರೀ ಕೃಷ್ಣಪ್ಪನವರಿಗೆ ಆ ರೀತಿ ಶಬ್ಧ ಪ್ರಯೋಗ ಮಾಡಬಾರದು ಅವರಿಗೆ ತಾವು ಏನೋ ಹೇಳಿದಿರಿ ಅದರ ಪ್ರಕಾರ ಅವರು ವಿಷಾದ ವ್ಯಕ್ತಪಡಿಸಿದರು.

ಮಾನ್ಯ ಸಚಿವರಾದ ಶ್ರೀ. ಕೃಷ್ಣಪ್ಪನವರಿಗೆ ಆ ರೀತಿ ಶಬ್ದ ಪ್ರಯೋಗ ಮಾಡಬಾರದ "ಎನ್ನುವ ಎಚ್ಚರಿಕೆಯನ್ನು ಕೊಟ್ಟಿದ್ದೀರಿ, ಆಯಿತು, ಇಲ್ಲಿಗೆ ಈ ಅಧ್ಯಾಯವನ್ನು ಮುಗಿಸೋಣ. ಮುಂದಿನ ಚರ್ಚೆಯನ್ನು ಮಾಡೋಣ."

ಉಪಾದ್ಯಕ್ಷರು: ಇಲ್ಲಿಗೆ ಈ ವಿಷಯವನ್ನು ಮುಗಿಸಿ ಈಗ ಬಿಲ್ ಬಗ್ಗೆ ಚರ್ಚೆಯನ್ನು ಮುಂದುವರಿಸೋಣ;

6.40 ಪಿ.ಎಂ

+ ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ): ಮಾನ್ಯ ಉಪಾಧ್ಯಕ್ಷರೆ, ಕರ್ನಾಟಕ ಧೂಮಪಾನ ನಿಷೇಧ ಮತ್ತು ದೂಮಪಾನ ಮಾಡದವರ ಆರೋಗ್ಯ ರಕ್ಷಣೆ ವಿಧೇಯಕದ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಅದಕ್ಕೆ ಮುಂಚೆ, ಈ ಒಂದು ವಿಧೇಯಕವನ್ನು ಸರ್ಕಾರದವರು ಯೋಚಿಸಿ, ಒಳ್ಳೆಯ ಉದ್ದೇಶದಿಂದ ತಂದಿರುವುದನ್ನು ನಾನು ಭಾಗಶಃ ಸ್ವಾಗತಿಸುತ್ತೇನೆ. 1983ನೇ ಇಸವಿಯಲ್ಲಿ ನಾನು ಆರೋಗ್ಯ ಇಲಾಖೆಯ ಮಂತ್ರಿಯಾಗಿದ್ದೆ, ಆ ಸಂದರ್ಭದಲ್ಲಿ ಹೆಲ್ತ್ ಬೈ 2000 ಫಾರ್ ಆಲ್ ಎಂದು ಹೇಳಿದ್ದರು. 2000ನೇ ವರ್ಷಕ್ಕೆ ಎಲ್ಲರಿಗೂ ಆರೋಗ್ಯವನ್ನು ಕೊಡುತ್ತೇವೆಂದು ಘೋಷಣೆಯನ್ನು ನಾವೆಲ್ಲ ಹಾಕಿಕೊಂಡಿದ್ದೆವು. "Health for all by 2000 A.D" for which India is also a party. But, unfortunately, ಆದಾಗಲಿಲ್ಲ Health for all, ನಾವು ಮಾಡುವುದಕ್ಕಾಗಲಿಲ್ಲ... ಏಕೆಂದರೆ, ಇದು ಎವಲ್ಯೂಷನ್ ಆಗಬೇಕು. ಸೊಸೈಟಿಯಲ್ಲಿ ಇಂಥವೆಲ್ಲಾ ಎವಲ್ಯೂಷನ್ ಆಗಬೇಕಾಗುತ್ತದೆ. ಏಕೆಂದರೆ, ಇದನ್ನು ಕಾನೂನಿನ ಮೂಲಕ, ವಿಧೇಯಕ ಮೂಲಕವೇ ಮಾಡುತ್ತೇವೆ ಎಂದು ನನಗನ್ನಿಸುವುದಿಲ್ಲ. ಏಕಂದರೆ, ನಾವು ಸಾರಾಯಿಯನ್ನು ಕುಡಿಯಬಾರದೆಂದು ಹೇಳುತ್ತೇವೆ. ಸಾರಾಯಿಯನ್ನು ನಾವು ಕುಡಿಯದೇ ಹೋದರೆ, ಕಬ್ಬು ಬೆಳೆಗಾರರೆಲ್ಲಾ ನಮಗೆ ಬೆಲೆ ಸಾಕಾಗುವುದಿಲ್ಲವೆಂದು ಒಂದು ಕಡೆ ಹೇಳುತ್ತಾರೆ, ಎಷ್ಟು ಕಷ್ಟವಿದೆ ಎನ್ನುವುದನ್ನು ನಾವೆಲ್ಲ ಚಿಂತನೆ ಮಾಡುವ ವಿಚಾರವಿದು. ರೆಕ್ಟಿಫೈಡ್ ಸ್ಪಿರಿಟ್‌ನಿಂದಲೆ ಐಎಂಎಫ್‌ಎಲ್ ಮಾಡುವುದು, ಕಾಕಂಬಿಯನ್ನು ಮಾಡುವುದು. ಆ ಕಾಕಂಬಿಯನ್ನು ಎಲ್ಲಿಗೆ ತೆಗೆದುಕೊಂಡು ಹೋಗಿ ಮಾರುವುದು? ಇದೊಂದು ಕಡೆ ಆಯಿತು. ಹಿರಿಯ ಸದಸ್ಯರಾದ ಶ್ರೀ. ಕೆ.ಹೆಚ್.ರಂಗನಾಥ್‌ರವರು ಈ ಸದನದಲ್ಲಿದ್ದಾರೆ. ಹೆಂಡವನ್ನು ನಿಷೇಧಿಸಬೇಕೆಂದು ದಲಿತ ಸಂಘರ್ಷ ಸಮಿತಿಯವರು ವಿಶೇಷವಾದ ಹೋರಾಟ ಮಾಡಿದರು. ಸ್ವಾತಂತ್ರ್ಯದ ಹೋರಾಟದ ಸಂದರ್ಭದಲ್ಲಿಯೂ ಸಹ ಹೆಂಡವನ್ನು ನಿಷೇದಿಸಬೇಕೆಂದು ಬಹಳ ದೊಡ್ಡ ಹೋರಾಟವೇ ಆಯಿತು. ವಾಸ್ತವಾಂಶದಲ್ಲಿ, ನೀರಾವನ್ನು ಇಳಿಸಬೇಕೆಂಬುವ ಬಗೆಗಿನ ಚಳವಳಿಯನ್ನು ನಾವೇ ನೋಡುತ್ತಿದ್ದೇವೆ. ಇದು ಸಮಾಜದಲ್ಲಿನ ಪರಿಸ್ಥಿತಿ. ಏಕೆಂದರೆ, ತೆಂಗು ಬೆಳೆಗಾರರಿಗೆ ಬಹಳ ತೊಂದರೆಯಾಗುತ್ತದೆಂಬುದನ್ನು ನಾವು ಎಲ್ಲೋ ಒಂದು ಕಡೆ ಗಮನಿಸಬೇಕಾಗುತ್ತದೆ. ಅದೇ ರೀತಿ, ನಮ್ಮ ಅಡಿಕೆ ಬೆಳೆಗಾರರು ಗುಟ್ಕಾವನ್ನು ನೀವು ನಿಷೇದಿಸಿರುವುದರಿಂದಾಗಿ, ಇವತ್ತು ಅಡಿಕೆ ಬೆಳೆ ಸಂಪೂರ್ಣವಾಗಿ ನಾಶವಾಗಿದೆ, ನಾವೆಲ್ಲಾ ಆತ್ಮಹತ್ಯೆ ಮಾಡಿಕೊಳ್ಳುವ ಸ್ಥಿತಿಗೆ

ಹೋಗಿದ್ದೇವೆ ಎನ್ನುತ್ತಿದ್ದಾರೆ. ಇದು ವಾಸ್ತವಾಂಶ. ಅದೇ ರೀತಿ, ನಾವು ಸಂಪೂರ್ಣವಾಗಿ ನಿಷೇಧವನ್ನು ತರುತ್ತೇವೆಂಬ ಕಲ್ಪನೆ ನಮಗ್ಯಾರಿಗೂ ಇದರಿಂದ ಇರಬಾರದೆಂಬ ದೃಷ್ಟಿಯಿಂದಾಗಿ ನಾವು ಈ ವಿಚಾರವನ್ನು ಹೇಳುತ್ತಿದ್ದೇವೆ. ಏಕೆಂದರೆ, ಆಂಧ್ರ ಪ್ರದೇಶ ಸರ್ಕಾರದವರಿಗೆ ಟೊಬ್ಯಾಕೋ ಹಾಲಿಡೇ ಕೊಡುವಂಥ ಸನ್ನಿವೇಶ ಬಂದಿತ್ತು. ತಂಬಾಕು ಬೆಳೆಗಾರರ ಹಿತರಕ್ಷಣೆ ಮಾಡಬೇಕೆಂದು ಉದ್ದುದ್ದ ಭಾಷಣವನ್ನು ಮಾಡುತ್ತೇವೆ, ಮಾಡಿದ್ದೇವೆ, ಒಂದು ಕಡೆ, ತಂಬಾಕು ಬೆಳೆಗಾರರ ರಕ್ಷಣೆ ಮಾಡಬೇಕು, ಇನ್ನೊಂದು ಕಡೆ ಕಬ್ಬು ಬೆಳೆಗಾರರ ರಕ್ಷಣೆ ಮಾಡಬೇಕು, ಅಡಿಕೆ ಬೆಳೆಗಾರರ ರಕ್ಷಣೆ ಮಾಡಬೇಕು, ದ್ರಾಕ್ಷಿ ಬೆಳೆಗಾರರ ರಕ್ಷಣೆ ಮಾಡಬೇಕು ತೆಂಗು ಬೆಳೆಗಾರರ ರಕ್ಷಣೆ ಮಾಡಬೇಕು, ಇವೆಲ್ಲಾ ಮಾಡಿಕೊಂಡು, ಕಬ್ಬಿನಿಂದ ಸಾರಾಯಿ, ತಂಬಾಕಿನಿಂದ ಬೀಡಿ-ಸಿಗರೇಟು, ಅಡಿಕೆಯಿಂದ ಗುಟ್ಕಾ, ದ್ರಾಕ್ಷಿಯಿಂದ ವೈನು, ತೆಂಗಿನಿಂದ ಹೆಂಡ, ಇದನ್ನೆಲ್ಲಾ ನಾನ್ಯಾಕೆ ಹೇಳುತ್ತಿದ್ದೇನೆಂದರೆ, ಇದು ನಾವು ತಿಳಿದು ಕೊಂಡಿರುವಷ್ಟು ಸುಲಭ ಸಾಧ್ಯವಾದ ವಿಚಾರವಲ್ಲ. ಮುಂದುವರಿದಿರುವ ದೇಶಗಳಲ್ಲಿ ನಾವು ನೋಡಿದ್ದೇವೆ, ಅದರಲ್ಲಿಯೂ ವಿಶೇಷವಾಗಿ ಯೂರೋಪ್ ರಾಷ್ಟ್ರಗಳನ್ನು ನಾವು ಶ್ರೀಮಂತ ರಾಷ್ಟ್ರಗಳೆನ್ನುತ್ತೇವೆ, ಚೈನಾವನ್ನು ಶ್ರೀಮಂತ ರಾಷ್ಟ್ರವೆಂದು ಕರೆಯಲಾಗುವುದಿಲ್ಲ. ಈ ರಾಷ್ಟ್ರಗಳಲ್ಲಿ ಏನು ಮಾಡಿದ್ದಾರೆಂದರೆ, ಅಲ್ಲಿರುವ ವ್ಯವಸ್ಥೆಯನ್ನು ಅಧ್ಯಯನ ಮಾಡಲಿಕ್ಕೆ ನಾವು ಅಲ್ಲಿಗೆ ಹೋಗಿ ತಿಳಿದುಕೊಳ್ಳಬೇಕಾಗುತ್ತದೆ. ಉದಾಹರಣೆಗೆ, ಯಾವುದೇ ಶ್ರೀಮಂತ ಅಥವಾ ಮುಂದುವರಿದಿರುವ ರಾಷ್ಟ್ರವನ್ನು ನೀವು ನೋಡಿ, ಒಂದು ಟಾಯ್ಲೆಟ್ ಮಾಡಿದರೆ, ಇಲ್ಲಿರುವ ಟಾಯ್ಲೆಟ್‌ನಲ್ಲಿ ನಾವು ಹೋಗಲಿಕ್ಕೂ ಸಾಧ್ಯವಿಲ್ಲ, ಆ ಟಾಯ್ಲೆಟ್ ಮಾಡಿದರೆ, ಒಂದನ್ನು ಗಂಡಸರಿಗೆ, ಇನ್ನೊಂದನ್ನು ಹೆಂಗಸರಿಗೆ, ಮತ್ತೊಂದು ಹ್ಯಾಂಡಿಕ್ಯಾಪ್‌ಗೆಂದು ಹೇಳಿ ಎಲ್ಲಾ ಕಡೆಗಳಲ್ಲಿಯೂ ಇರುತ್ತವೆ. ಒಂದು ಬಸ್ಸಿನಲ್ಲಿ ಒಂದು ಸೀಟು ಮಾಡಿರಬೇಕಾದರೆ, ಹ್ಯಾಂಡಿಕ್ಯಾಪ್‌ಗೆಂದೂ ಮಾಡಿರುತ್ತಾರೆ. ನಾವು ಅನೇಕ ಇಂಟರ್‌ನ್ಯಾಷನಲ್ ಏರ್ ಪೋರ್ಟ್‌ಗಳಲ್ಲಿ ನೋಡಿದ್ದೇವೆ, ಸ್ಮೋಕರ್ಸ್‌ಗೇ ಒಂದು ಸೆಪರೇಟ್ ರೂಂ ಮಾಡಿರುತ್ತಾರೆ. ಸ್ಮೋಕರ್ಸ್ ಜೋನ್ ಅಲ್ಲಿ ಸ್ಮೋಕರ್ಸ್ ರೂಂ. ರೆಗ್ಯುಲರ್ ಆಗಿ ಒಂದು ರೂಂ ಇರುತ್ತದೆ, ಅಲ್ಲಿಗೆ ಹೋಗಿ ನೀವು ಸಿಗರೇಟ್, ಬೀಡಿಯನ್ನೋ, ತಂಬಾಕನ್ನೋ ಉಪಯೋಗಿಸಿ ಬರುವುದನ್ನು ನಾವು ನೋಡಿದ್ದೇವೆ. ಸಿಗರೇಟು, ಬೀಡಿಯಷ್ಟೇ ಚಟ ಇರುವುದು ತಂಬಾಕು. ನಾವು ಹಳ್ಳಿಗಳಲ್ಲಿ ನೋಡಿದ್ದೇವೆ. ಎಲೆ ಅಡಿಕೆ ಜೊತೆಯಲ್ಲಿ ತಂಬಾಕನ್ನು ಹಾಕುವುದು ಇವೆಲ್ಲಾ ಸತ್ಯಾಂಶ. ಇದರ ಜೊತೆಗೆ, ನಮ್ಮ ಬೆಂಗಳೂರಿನ ಕಿದ್ವಾಯಿ ಸಂಸ್ಥೆಯ ವೈದ್ಯರು ಕನಕಪುರ ತಾಲ್ಲೂಕನ್ನು ಮಾಡೆಲ್ ತಾಲ್ಲೂಕನ್ನಾಗಿ ಅಡಾಪ್ಟ್ ಮಾಡಿಕೊಂಡು ಸ್ಟಡಿ ಮಾಡಿದ್ದಾರೆ, ಅದರಂ ವೆರಿ ಇಂಟರೆಸ್ಟಿಂಗ್ ಸ್ಟಡಿ ಅದು. ಏನೆಂದರೆ, 12 ವರ್ಷದಿಂದ 18 ವರ್ಷದೊಳಗೆ ಇರುವ 6000 ವಿದ್ಯಾರ್ಥಿಗಳನ್ನು ಅಲ್ಲಿ ಅವರು ಸಂದರ್ಶನ ಮಾಡಿದಾಗ ಅವರಲ್ಲಿ, 5000 ಜನ ಗುಟ್ಕಾ ಸೇವನೆ ಮಾಡುತ್ತಾರೆ. ಇದು ಎಲ್ಲಾ ಕಡೆಗಳಲ್ಲಿಯೂ ಇರುವ ವಿಚಾರ, ಈ ದೃಷ್ಟಿಯಿಂದ ಈ ಸಮಾಜ ಯಾವ ದಿಕ್ಕಿನಲ್ಲಿ ಹೋಗಬೇಕು ಎನ್ನುವ ಬಗ್ಗೆ ನಾವು ಕಾನೂನನ್ನು ರಚಿಸುವ ಸನ್ನಿವೇಶದಲ್ಲಿ ಇದಕ್ಕೆ ಪರ ಮತ್ತು ವಿರುದ್ಧ ಮಾತನಾಡುವ ಸನ್ನಿವೇಶದಲ್ಲಿ, ರಾಷ್ಟ್ರದ ಆರ್ಥಿಕ ವಿಷಯಗಳನ್ನೂ ಗಮನದಲ್ಲಿಟ್ಟುಕೊಂಡು ಎಲ್ಲಿಯವರೆಗೆ ನಾವು ಹೋಗಬಹುದೆಂಬುದನ್ನು ವಿಚಾರ ಮಾಡಬೇಕಾಗುತ್ತದೆ. ಆ ದಿಕ್ಕಿನಲ್ಲಿ ಯಾವತ್ತೂ ಕರ್ನಾಟಕ, ಆರೋಗ್ಯದ ಇಲಾಖೆಯ ವಿಚಾರದಲ್ಲಿ ನಾವು ಮುಂದಿದ್ದೇವೆ. ಆರೋಗ್ಯ ಸೌಕರ್ಯಗಳನ್ನು ಕೊಡುವುದರಲ್ಲಿ, ವೈದ್ಯಕೀಯ ಶಿಕ್ಷಣವನ್ನು

ಕೊಡುವಂಥದ್ದರಲ್ಲಿ, ನಾವು ಅನೇಕ ವಿಚಾರಗಳಲ್ಲಿ ಮುಂದಿದ್ದೇವೆ. ಅದರಿಂದ, ಕೇಂದ್ರ ಸರ್ಕಾರದವರು ಇದಕ್ಕೂ ಸಹ ಹೆಚ್ಚಿಗೆ ಶಕ್ತಿ ಇರುವ ಒಂದು ಕಾನೂನನ್ನು ತರಬೇಕೆಂದು ಮಾಡಿದ್ದೇವೆ. ಅವರ ಮೇಲೆ ಬೀಡಿ ಕಾರ್ಮಿಕರೆಲ್ಲಾ ಡೆಲಿಗೇಷನ್ ರೂಪದಲ್ಲಿ ಹೋಗಿ, ನೀವು ಅದನ್ನು ಅಷ್ಟೊಂದು ಸ್ಟ್ರಾಂಟ್ ಆಗಿ ತೆಗೆದುಕೊಂಡು ಬಂದ ತಕ್ಷಣವೇ ಕೋಟ್ಯಾಂತರ ಜನರ ಬೇಡಿ ಕಾರ್ಮಿಕರೆಲ್ಲಾ ಕೇಂದ್ರಸರ್ಕಾರದ ಮೇಲೆ ಒತ್ತಾಯ ಹಾಕಿದರು. ಟೊಬ್ಯಾಕೋ ಗ್ರೋಯಿಂಗ್ ಸ್ಟೇಟ್ಸ್ ಫಾರ್ಮರ್ಸ್ ಯಾರಿದ್ದಾರೆ, ಅವರೆಲ್ಲಾ ಹೋಗಿ ಒತ್ತಡವನ್ನು ಹಾಕಲೇ ಬೇಕಾಗುತ್ತದೆ. ಇಲ್ಲದಿದ್ದರೆ, ತೊಂದರೆ ಆಗುತ್ತದೆ. ನಾನೇಕೆ ಇದನ್ನು ಹೇಳುತ್ತಿದ್ದೇನೆಂದರೆ, ಎಲ್ಲೋ ಒಂದು ಕಡೆ ಒಂದು ಸಮತೋಲನವನ್ನು ಕಾಯ್ದುಕೊಂಡು ಹೋಗಬೇಕಾಗುತ್ತದೆ. ಕೊಡುವುದು, ತೆಗೆದುಕೊಳ್ಳುವುದರಲ್ಲಿ ಒಂದು ಸಮತೋಲನವನ್ನು ನಾವು ಕಾಯ್ದುಕೊಂಡು ಹೋಗಬೇಕಾಗುತ್ತದೆ, ಇದರಿಂದ ಧೂಮಪಾನ ಸಂಪೂರ್ಣವಾಗಿ ಕಡಿಮೆಯಾಗಿ ಬಿಡುತ್ತದೆ ನಿಷೇಧ ಆಗಿಬಿಡುತ್ತದೆ, ಕ್ಯಾನ್ಸರ್ ಖಾಯಿಲೆ ಕಡಿಮೆಯಾಗಿಬಿಡುತ್ತದೆ, ಎಂದು ನಾನು ಹೇಳುವುದಿಲ್ಲ. ಆದರೆ, ಈ ದೃಷ್ಟಿಯಲ್ಲಿ ಒಂದು ಹೆಜ್ಜೆ ನಾವು ಮುಂದುವರಿದ ಹಾಗಾಗುತ್ತದೆಂದು ನಾನು ತಿಳಿದುಕೊಂಡಿದ್ದೇನೆ, ಈ ದಿಕ್ಕಿನಲ್ಲಿ ಇದಕ್ಕೆ ಬಹಳ ದೊಡ್ಡ ಶಕ್ತಿ ಇದೆ ಎಂದು ನನಗೆ ಅನ್ನಿಸುವುದಿಲ್ಲ, ಆದರೆ, ಇದರಿಂದ ಉಪಯೋಗವಾಗುತ್ತದೆ, ಸಾಮಾನ್ಯವಾದ ಜನರಿಗೆ ಇದರಿಂದ ತಿಳುವಳಿಕೆ ಹೆಚ್ಚಾಗುತ್ತದೆ, ಆ ದೃಷ್ಟಿಯಿಂದ ಈ ವಿಧೇಯಕವನ್ನು ತಾವೇನು ಮಂಡಿಸಿದ್ದೀರಿ, ಇದನ್ನು ಸಂಪೂರ್ಣವಾಗಿ, ಸರ್ವಾನುಮತದಿಂದ ನಾವೆಲ್ಲರೂ ಪಾಸ್ ಮಾಡೋಣ, ಇದನ್ನು ಮಾಡುವಾಗ, ಕೆಲವು ನಿಬಂಧನೆಗಳನ್ನು ನಾವೇ ಹಾಕಿಕೊಳ್ಳಬೇಕಾಗುತ್ತದೆ. ನನಗೆ 37-38 ವರ್ಷಗಳಾಗುವವರೆಗೆ ನಾನು ಕಂಟಿನ್ಯೂಯಸ್ ಆಗಿ ಸಿಗರೇಟ್ ಅನ್ನು 20 ವರ್ಷಗಳವರೆಗೆ ಸಿಗರೇಟ್ ಸೇದುತ್ತಿದ್ದೆ. ನನ್ನ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತದೆಂದು ಗೊತ್ತಾದ ತಕ್ಷಣವೇ ಆಗ ಎಸೆದವರು 1987ನೇ ಇಸವಿಯಲ್ಲಿ ನಾನು ಟ್ರಾನ್ಸ್‌ಪೋರ್ಟ್ ಮಿನಿಸ್ಟರ್ ಆಗಿದ್ದಾಗ ಮತ್ತೆ ಅದನ್ನು ಟಚ್ ಮಾಡುವುದಕ್ಕೆ ಹೋಗಲಿಲ್ಲ. It is a very bad habit ಅದನ್ನು ಕಂಟ್ರೋಲ್ ಮಾಡುವುದು ಬಹಳ ಕಷ್ಟವಿದೆ. ನಾವೆಲ್ಲರೂ ಇಲ್ಲಿ ಭಾಷಣ ಮಾಡುವುದೊಂದು, ಅಲ್ಲಿ ದುಶ್ಚಟ ಇಟ್ಟುಕೊಂಡಿರುವುದೊಂದು, ಇದೆಲ್ಲಾ ವಾಸ್ತವಾಂಶ. ಹಿಪೋಕ್ರಸಿ, ಅಷಾಡಭೂತತನ ಎನ್ನುವುದು ಇದರಲ್ಲಿದೆ. ಸುಮ್ಮನೆ ಏನೋ ಮಾತನಾಡುವುದಕ್ಕೆ ಹೋಗುವುದು, ಆಮೇಲೆ ಅದಕ್ಕೆ ಏನಾದರೊಂದು ಜಗಳ ಮಾಡಿಕೊಳ್ಳುವುದು. ಇವೆಲ್ಲಾ ಅರ್ಥವಿಲ್ಲದ ಮಾತುಗಳು ಇದನ್ನು ಮಾಡುವ ಸಂದರ್ಭದಲ್ಲಿ ಈಗ ನಾನೇನು ವಿಚಾರಗಳನ್ನು ಹೇಳಿದೆ, ಕಬ್ಬು, ತಂಬಾಕು, ಅಡಿಕೆ, ದ್ರಾಕ್ಷಿ, ತೆಂಗು ಬೆಳೆಗಾರರ ಗಮನವನ್ನು ನಾವು ದೃಷ್ಟಿಯಲ್ಲಿಟ್ಟುಕೊಳ್ಳಬೇಕಾಗುತ್ತದೆಂಬ ವಿಚಾರವನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಶ್ರೀ. ಕೆ.ಹೆಚ್.ರಂಗನಾಥ (ಅರಣ್ಯ ಸಚಿವರು): ನಿಮ್ಮ ಮಾತಿನಿಂದ ಎಸ್.ಎಸ್.ಪಾಟೀಲರಿಗೆ ನೋವಾಗಿದೆ.

ಶ್ರೀ. ಪಿ.ಜಿ.ಆರ್.ಸಿಂಧ್ಯ: ಇದನ್ನು ನಾನು ಗಮನದಲ್ಲಿಟ್ಟುಕೊಂಡಿದ್ದೇನೆ. ಎಸ್.ಎಸ್.ಪಾಟೀಲರು ಒಬ್ಬ ಆದರ್ಶವಾದಿಗಳು, ಗಾಂಧೀವಾದಿಗಳು, ಆ ಯುಗದಿಂದ ಬಂದಿರುವವರು, ಮಾನ್ಯ ಕೆ.ಹೆಚ್.ರಂಗನಾಥ್‌ರವರು ಅನೇಕ ಸಂದರ್ಶಗಳಲ್ಲಿ ನನ್ನ ಅಭಿಪ್ರಾಯಗಳನ್ನು ಒಪ್ಪುವುದಿಲ್ಲ ಅವರಿಗೆ ಅನುಭವವಿದೆ, ....

ಶ್ರೀ. ಕೆ.ಹೆಚ್.ರಂಗನಾಥ್ : ಆ ಮಾತು ರೆಕಾರ್ಡ್‌ಗೆ ಹೋದರೆ, ಹೌದು ಎಂದು ನನಗೆ ಸರ್ಟಿಫಿಕೇಟ್ ಕೊಟ್ಟ ಹಾಗಾಗುತ್ತದೆ. ದಯವಿಟ್ಟು ಅದನ್ನು ತೆಗೆದುಬಿಡಿ.. ಆ ಕಡೆ ಪದವನ್ನು ತೆಗೆದುಬಿಡಿ. ಒಪ್ಪುವುದಿಲ್ಲವೆನ್ನುವ ಮಾತು ಹೇಳಿ ಉಪಾಧ್ಯಕ್ಷರೆ, ಅದನ್ನು ತೆಗೆದುಬಿಡಿ. ಹೌದು ಎಂದಾಗಿಬಿಡುತ್ತದೆ. ಮುಂದಿನ ಪೀಳಿಗೆಯವರು ಯಾರಾದರೂ ರೀಸರ್ಚ್ ಮಾಡುವವರು...

ಉಪಾಧ್ಯಕ್ಷರು: ತಮ್ಮ ಮೇಲಿನ ವಿಶ್ವಾಸದಿಂದ ಹೇಳಿರಬೇಕು. ಆಯಿತು.

ಶ್ರೀ. ಪಿ.ಜಿ.ಆರ್. ಸಿಂಧ್ಯ: ಮಾನ್ಯ ಕೆ ಹೆಚ್ ರಂಗನಾಥರವರು ನನ್ನ ಅನೇಕ ಅಭಿಪ್ರಾಯಗಳನ್ನು ಒಪ್ಪುವುದಿಲ್ಲ. ಆದರೆ ಅವರ ಬಗ್ಗೆ ನನಗೆ ಅಪಾರ ಗೌರವ ಇದೆ.

ಶ್ರೀ. ಕೆ.ಹೆಚ್.ರಂಗನಾಥ : ನನ್ನ ಅಭಿಪ್ರಾಯ ಅವರು ಒಪ್ಪುವುದಿಲ್ಲ.

ಶ್ರೀ. ಪಿ.ಜಿ.ಆರ್. ಸಿಂಧ್ಯ: ನಾನು ಅದಕ್ಕೇ ಸಹೋದರ ವಿಶ್ವೇಶ್ವರ ಹೆಗಡೆಗೆ ಹೇಳುವುದು, ಕೆಸರಿನ ಜೊತೆಯಲ್ಲಿ ಜಗಳವಾಡುವುದಕ್ಕೆ ಹೋಗಬೇಡಪ್ಪ ಗಂಧದ ಜೊತೆಯಲ್ಲಿ ಜಗಳವಾಡು ಎನ್ನುವ ಮಾತನ್ನು ಹೇಳುತ್ತೇನೆ. ಸುಮ್ಮನೆ ಇವೆಲ್ಲಾ ಮಾಡುವುದಕ್ಕೆ ಹೋಗಬಾರದು. ಮಾನ್ಯ ರಂಗನಾಥ್‌ರವರು ಕೆಲವು ವಿಚಾರಗಳನ್ನು ಹೇಳಿದರು, ನಾವು ಈಗ ಹೆಂಡದ ಬಗ್ಗೆ ಮಾತನಾಡುತ್ತಿದ್ದೇವು, ಅದು ತಮಗೆ ಪ್ರಾಮಾಣೀಕವಾಗಿ ಅನಿಸಿರತಕ್ಕಂಥ ಅನಿಸಿಕೆ, ರಾಜ್ಯದಲ್ಲಿ ಸುಮಾರು ಎಂಟು ಕೋಟಿ ತೆಂಗಿನ ಮರಗಳಿವೆ. ಎಂಟು ಕೋಟಿ ತೆಂಗಿನ ಬೆಳಗಾರರೂ ಸಹ ನೀರಾ ಇಳಿಸಬೇಕೆಂದು ಚಳುವಳಿ ಮಾಡಿರತಕ್ಕಂಥದ್ದನ್ನು ನಾವು ನೋಡಿದ್ದೇವೆ. 20 ವರ್ಷಗಳ ಹಿಂದೆ ಹೆಂಡ ನಿಲ್ಲಿಸುವುದಕ್ಕೆ ಕ್ರಮ ತೆಗೆದುಕೊಳ್ಳಬೇಕೆಂದು ಒತ್ತಾಯ ಬರುತ್ತಿದ್ದಾಗ ಶ್ರೀಮಾನ್ ವಿರೇಂದ್ರ ಪಾಟೀಲರು ಮುಖ್ಯಮಂತ್ರಿಯಾಗಿದ್ದಾಗ ಇದನ್ನು ನಿಲ್ಲಿಸತಕ್ಕಂಥ ಕ್ರಮ ತೆಗೆದುಕೊಂಡರು. It is a process of evolution ಈ ಎವಲ್ಯೂಷನ್ ಈ ದೃಷ್ಟಿಯಿಂದಾಗಿ ಈ ಒಂದು ಬಿಲ್ ಸ್ವಲ್ಪ ಅನುಕೂಲವಾಗುತ್ತದೆಂದು ನಾನು ತಿಳಿದು ಕೊಂಡಿದ್ದೇನೆ. ಕೆಲವು precautions by experience ನಾವು ತೆಗೆದುಕೊಳ್ಳಬೇಕಾಗುತ್ತದೆ. ಇದರ ಬಗ್ಗೆ ತಮ್ಮ ಟಾಸ್ಕ್‌ಫೋರ್ಸ್‌ನವರು ಏನು ಹೇಳಿದ್ದಾರೆ ಎಂಬುದು ನನಗೆ ಗೊತ್ತಿಲ್ಲ. ಅದರಲ್ಲಿ ಕೆಲವು ಒಳ್ಳೆಯ ಸಜೇಷನ್ಸ್ ಇವೆ. ಡಾ:ಸುದರ್ಶನ್‌ರವರು ಏನು ವರದಿ ಕೊಟ್ಟಿದ್ದಾರೆ ಅದರಲ್ಲಿ ಏನು ರೆಕಮೆಂಡ್ ಮಾಡಿದ್ದಾರೋ ನನಗೆ ಗೊತ್ತಿಲ್ಲ. ಅದನ್ನು ಸಹ ಗಮನದಲ್ಲಿಟ್ಟುಕೊಂಡು ರೂಲ್ಸ್‌ನ್ನು ಫ್ರೇಮ್ ಮಾಡುವಾಗ, ಪೋಲೀಸ್‌ನವರಿಗೆ ಕೊಡುತ್ತೇವೆಂದು ಹೇಳಿದರೆ ನಾನು ಅದನ್ನು ಒಪ್ಪುವುದಿಲ್ಲ, ಏಕೆಂದರೆ, ಇದನ್ನು ಯಾರು ಹಿಡಿಯುವುದಕ್ಕೆ ಹೋಗುತ್ತಾನೆ ಅವನು ಮೊದಲು ಕಳ್ಳನಾಗಿರಬಾರದು. ಅಂದರೆ ಅವನು ಕುಡಿಯುವುದು, ಸಿಗರೇಟು ಸೇದುವ ಚಟ ಇಲ್ಲದವನಾಗಿರಬೇಕು. ಇದರ ಬಗ್ಗೆ ಏನು ಸಲಹೆ ಕೊಡುತ್ತೀರಿಂದು ಮಾನ್ಯ ತಿಮ್ಮಪ್ಪನವರು ನನನ್ನು ಕೇಳಬಹುದು, ನನಗೂ ಇದು ಹೊಳೆಯುತ್ತಿಲ್ಲ, ಇದರ ಬದಲಾಗಿ ಯಾರಿಗೆ ಅಧಿಕಾರ ಕೊಡಬೇಕು ಎನ್ನುವುದನ್ನು ಆಲೋಚನೆ ಮಾಡಿಲ್ಲ, ನಾವು ಯೋಚನೆ ಮಾಡೋಣ, ಶಿಕ್ಷಣ ಕೊಡುವ ವಿಚಾರ ಬಹಳ ಪ್ರಮುಖವಾಗಿರುವ ವಿಚಾರ, ಆ ದೃಷ್ಟಿಯಿಂದಾಗಿ ನನಗೇನಾದರೂ ಸಲಹೆಗಳು ಹೊಳೆದರೆ ಖಂಡಿತವಾಗಿ ಮುಂದಿನ ಅಧಿವೇಶನದಲ್ಲಿ ಇದಕ್ಕೆ ತಿದ್ದುಪಡಿಗಳನ್ನು ಸೂಚಿಸುತ್ತೇನೆ ಅಥವಾ ಖಾಸಗಿಯಾಗಿ ತಮಗೆ ಹೇಳುತ್ತೇನೆ. ಈ ಒಂದು ವಿಚಾರ ಈ ಸರ್ಕಾರ ಮಾಡಿರುವುದು ಒಳ್ಳೆಯದು ನಾನು ಇದನ್ನು ಸ್ವಾಗತಿಸುತ್ತೇನೆ.

+ಶ್ರೀ. ಸಿ.ಚನ್ನಿಗಪ್ಪ (ಕೊರಟಗೆರೆ): ಮಾನ್ಯ ಉಪಾಧ್ಯಕ್ಷರೆ, ತಾವು ತಂದಿರುವ ಕರ್ನಾಟಕ ಧೂಮಪಾನ ನಿಷೇದ ಮತ್ತು ಧೂಮಪಾನ ಮಾಡದವರ ಆರೋಗ್ಯ ರಕ್ಷಣೆ ವಿಧೇಯಕವನ್ನು ನಾನು ಸ್ವಾಗತಿಸುತ್ತೇನೆ. ಧೂಮಪಾನ ನಿಷೇದಿಸಬೇಕೆಂದು ಕಾನೂನು ಮಾಡಿ ಕ್ರಮ ತೆಗೆದುಕೊಳ್ಳಬೇಕೆಂದು ಹಿಂದಿನಿಂದಲೂ ಹೇಳುತ್ತಾ ಬಂದಿದ್ದೇವೆ, ಯಾವ ಸರ್ಕಾರವು ಈ ವಿಧೇಯಕವನ್ನು ಮಂಡನೆ ಮಾಡಿದರೂ ಕೂಡ ಇದನ್ನು ಸಂಪೂರ್ಣವಾಗಿ ನಿಲ್ಲಿಸುವುದಕ್ಕೆ ಸಾಧ್ಯವಾಗಿಲ್ಲ. ಕಾರಣ ಜನರ ಮನಸ್ಸಿನಲ್ಲಿ, ಸಾರ್ವಜನಿಕರ ಮನಸ್ಸಿನಲ್ಲಿ ಇದು ಬರಬೇಕಾಗಿದೆ, ನಾವು ಇವತ್ತು ಗುಟ್ಕಾ ಹಾಕುವುದರಿಂದ, ಪಾನ್‌ಪರಾಗ್ ಹಾಕುವುದರಿಂದ, ಬೀಡಿ ಸೀಗರೇಟು ಸೇದುವುದರಿಂದ ಕ್ಯಾನ್ಸರ್ ಬರುತ್ತದೆ. ಎನ್ನುವ ವಿಚಾರ ಎಲ್ಲರಿಗೂ ಗೊತ್ತಿದೆ. ಆದರೂ ಸಹ ಚಟ ಯಾರೂ ಬಿಡುವುದಿಲ್ಲ, ಸತ್ತರೂ ಪರವಾಗಿಲ್ಲ ನಾವು ಸಿಗರೇಟು ಸೇದುತ್ತೇವೆ ಎನ್ನುವ ಮಟ್ಟಕ್ಕೆ ಕೆಲವರ ತೀರ್ಮಾನ ಇದೆ, ಇನ್ನು ಕೆಲವರು ಇಲ್ಲಪ್ಪ ಏಕೆ ಮಾಡಬೇಕು, ನಾವು ಕಾಸು ಕೊಟ್ಟು ಸಿಗೇರೆಟು ಸೇದಿ ನಮ್ಮ ಆರೋಗ್ಯ ಏಕೆ ಹಾಳು ಮಾಡಿಕೊಳ್ಳಬೇಕು ಎನ್ನುವವರು ಇದ್ದಾರೆ. ಆದರೆ ಮಾನ್ಯ ಸಚಿವರು ಈ ವಿಧೇಯಕ ತರುವಂಥ ಸಂದರ್ಭದಲ್ಲಿ ಬಹಳ ಯೋಚನೆ ಮಾಡಿದ್ದಾರೆ. ಒಂದು ಸಾರಿ ಅಪರಾಧ ಮಾಡಿದವರಿಗೆ ನೂರು ರೂಪಾಯಿ ದಂಡ ಹಾಕುತ್ತೇವೆ, ನಂತರ ಇನ್ನೂರು ರೂಪಾಯಿ, ನಂತರ ಐದುನೂರೂಪಾಯಿ ನಂತರ ಒಂದು ವಾರ ಸಜೆ ಮಾಡುತ್ತೇವೆ ಎಂದು ಹೇಳಿದ್ದಾರೆ. ರೈಲ್ವೆ ಸ್ಟೇಷನ್ ಆಗಬಹುದು, ಆಸ್ಪತ್ರೆಗಳಾಗಬಹುದು, ಶಾಲಾ-ಕಟ್ಟಡಗಳಾಗಬಹುದು, ಸಂಘ ಸಂಸ್ಥೆಗಳಲ್ಲಿರಬಹುದು, ಅಲ್ಲೊಂದು ಬೋರ್ಡ್ ಹಾಕಿರುತ್ತಾರೆ ಏನೆಂದರೆ, ಧೂಮಪಾನ ನಿಷೇದಿಸಲಾಗಿದೆ ಎಂದು ಬೋರ್ಡ್ ಹಾಕಿರುತ್ತಾರೆ. ಅದರ ಅದೇ ಬೋರ್ಡಿನ ಮುಂದೆ ಕುಳಿತು ಸಿಗರೇಟು ಸೇದಿ ಹೊಗೆಯನ್ನು ಆ ಬೋರ್ಡಿಗೆ ಬಿಡುತ್ತಾರೆ. ಪರಿಸ್ಥಿತಿ ಹೀಗಿವಾರಾಗ ಕಾನೂನು ತರುವಂಥ ಸಮಯದಲ್ಲಿ ಇದನ್ನು ಎಷ್ಟರ ಮಟ್ಟಿಗೆ ನಾವು ಕಂಟ್ರೋಲ್ ಮಾಡಬೇಕು ಎನ್ನುವುದನ್ನು ಆಲೋಚನೆ ಮಾಡಬೇಕಾಗುತ್ತದೆ, ಅದನ್ನು ಅವರು ಮಾಡಿದ್ದಾರೆ. ಇದರಲ್ಲಿ ಮೊದಲನೇಯದಾಗಿ ಪೊಲೀಸ್ ಇಲಾಖೆಯನ್ನು ಬಳಸಿಕೊಂಡು ಅವರ ಮೇಲೆ ಆ್ಯಕ್ಷನ್ ತೆಗೆದುಕೊಳ್ಳುವುದು, ಎರಡನೆಯದು ಅವರಿಗೆ ಶಿಕ್ಷಣ ಕೊಡುವುದು, ಈ ಧೂಮಪಾನದ ಬಗ್ಗೆ ಅವರಿಗೆ ಹೆಚ್ಚಿಗೆ ಮಾಹಿತಿಕೊಟ್ಟು ಇದರಿಂದ ಹೆಚ್ಚಿನ ತೊಂದರೆಗಳಾಗುತ್ತವೆ, ಆರೋಗ್ಯಕ್ಕೆ ಹಾನಿಯಾಗುತ್ತದೆ ಎನ್ನುವ ವಿಷಯವನ್ನು ಪ್ರತಿಯೊಬ್ಬರಿಗೂ ತಿಳಿಸಲು ಟಿವಿ ಮಾಧ್ಯಮದ ಮೂಲಕವಾಗಲಿ ಅಥವಾ ಬೇರೆ ಬೇರೆ ಮಾಧ್ಯಮಗಳ ಮೂಲಕ ತಿಳಿಸಿದರೆ ಇದನ್ನು ಕಂಟ್ರೋಲ್ ಮಾಡಬಹುದು. ಆದರೆ ಇದರಲ್ಲಿ ಬಯಲು ಪ್ರದೇಶ ಹೊರತು ಪಡಿಸಿ ಎಂದು ಹೇಳಿದ್ದಾರೆ, ಉದಾಹರಣೆಗೆ ದೊಡ್ಡ ಕಾಂಪೌಂಡ್ ಇದ್ದು ಅಲ್ಲಿ ಬಯಲು ಪ್ರದೇಶ ಇದ್ದು ಅಲ್ಲಿ ಸೇದುತ್ತಾರೆ ಆಗ ಅವರಿಗೇನು ಮಾಡುತ್ತಾರೆ ಎನ್ನುವುದನ್ನು ಅವರು ಇಲ್ಲಿ ನಮೂದಿಸಿಲ್ಲ. ಅಂದರೆ ಎಲ್ಲೂ ಕೂಡ ಧೂಮಪಾನ ಮಾಡಬಾರದು ಎಂದು ಇರಬೇಕು, ಬಯಲು ಪ್ರದೇಶವಾಗಬಹುದು ಅಥವಾ ಕಾಂಪೌಂಡ್ ಆಗಬಹುದು, ಕೆಲವರು ಸುಮಾರು 10-20 ಎಕರೆಗೆ ಕಾಂಪೌಂಡ್ ಹಾಕಿರುತ್ತಾರೆ, ಅಲ್ಲಿ ಹೋಗಿ ಸೇದಿದರೂ ಕೂಡ ಬಯಲು ಪ್ರದೇಶದ ವ್ಯಾಪ್ತಿಯಲ್ಲಿ ಬರುತ್ತದೆ, ಆದ್ದರಿಂದ ಅದು ನಮೂದು ಆಗಿಲ್ಲ ಆದ್ದರಿಂದ ಅದನ್ನು ಮಾಡಬೇಕು, ಮತ್ತೆ ಇದರ ಬಗ್ಗೆ ಪೊಲೀಸ್ ಇಲಾಖೆಯಲ್ಲಿ ಕೇಸ್ ಹಾಕಿ ಕಠಿಣ ಶಿಕ್ಷೆ ಎಂದು

ಹೇಳಿದ್ದಾರೆ, ಅದನ್ನು ಕಟ್ಟುನಿಟ್ಟಾಗಿ ಜಾರಿಗೆ ತರುವಂಥ ಕಾರ್ಯಕ್ರಮವನ್ನು ಸರ್ಕಾರದ ಮುಖೇನ ಮಾಡಬೇಕು ಎನ್ನುವ ಅನಿಸಿಕೆಯನ್ನು ವ್ಯಕ್ತಪಡಿಸಿ, ಸದನದಲ್ಲಿ ಈ ಸರ್ಕಾರ ಮೂರು ವರ್ಷಗಳ ಅವಧಿಯಲ್ಲಿ ಆರೋಗ್ಯಕೋಸ್ಕರವಾಗಿ ಉತ್ತಮವಾದ ಒಂದು ವಿಧೇಯಕವನ್ನು ಮಂಡಿಸಿದ್ದಾರೆ, ಇದರಲ್ಲಿ ಕೆಲವು ಸಾಧಕ-ಬಾಧಕಗಳಿದ್ದರೂ ಕೂಡ ಮಾನ್ಯ ಆರೋಗ್ಯ ಸಚಿವರು ಇದರ ಬಗ್ಗೆ ಬಹಳ ಬುದ್ದಿವಂತರಿದ್ದಾರೆ, ಹಾಗೂ ಅದರ ಬಗ್ಗೆ ಯೋಚನೆ ಮಾಡುವಂಥ ಹಿರಿಯ ನಾಯಕರು ಆಗಿದ್ದಾರೆ, ಈ ಬಗ್ಗೆ ಅವರು ಚಿಂತನೆ ಮಾಡಿ, ಅಧಿಕಾರಿಗಳ ಮೂಲಕ ಇದರ ಬಗ್ಗೆ ಸಭೆಯನ್ನು ಮಾಡಿ ನಂತರ ಅದರಿಂದುಂಟಾಗುವ ಸಾಧಕ-ಬಾಧಕಗಳನ್ನು ಜಾರಿಗೆ ತಂದರೆ ಈ ವಿಧೇಯಕಕ್ಕೆ ಅರ್ಥವಿದೆ ಎನ್ನುವ ಮಾತನ್ನು ಹೇಳಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ. ಆರಗ ಜ್ಞಾನೇಂದ್ರ (ತೀರ್ಥಹಳ್ಳಿ): ಮಾನ್ಯ ಉಪಾಧ್ಯಕ್ಷರೆ, ಈ ವಿದೇಯಕ ತಂದಿರುವುದು ಚೆನ್ನಾಗಿದೆ, ಆದರೆ ಇದನ್ನು ಜಾರಿಗೊಳಿಸತಕ್ಕಂಥದ್ದು ತಂಬಾ ಕಷ್ಟದಾಯಕವಾದ ವಿಚಾರವೆಂದು ನನಗೆ ಅನ್ನಿಸುತ್ತದೆ. 18 ವರ್ಷಗಳಿಂಗಿಂತ ಕಡಿಮೆಯಿರುವ ಮಕ್ಕಳಿಗೆ ಮಾರಾಟ ಮಾಡಬಾರದು ಎಂದು ಹೇಳಿದ್ದಾರೆ, ನಮ್ಮ ಊರಿನಲ್ಲಿ ಪ್ರೈಮರಿ ಸ್ಕೂಲ್ ಮಕ್ಕಳ ಹತ್ತಿರವೇ ಬೀಡಿ ಕಟ್ಟುಗಳನ್ನು ತರಿಸುವುದು, ಬಹುಶಃ ತಮಗೆಲ್ಲರಿಗೂ ಗೊತ್ತಿದೆ, ಪರಿಸ್ಥಿತಿ ಹೀಗಿರುವಾಗ ಇದು ಎಷ್ಟರಮಟ್ಟಿಗೆ ಜಾರಿಗೆ ಬರುತ್ತದೆಂದು ಹೇಳುವುದಕ್ಕಾಗುವುದಿಲ್ಲ. ಆ ಹುಡುಗನನ್ನು ಹಿಡಿದು ಕೊಂಡ ತಕ್ಷಣವೇ ಅವನು ನನಗಲ್ಲ ನಮ್ಮ ಅಪ್ಪನಿಗೆ ಎಂದು ಹೇಳುತ್ತಾನೆ. ಅದ್ದರಿಂದ, ಇದು ಕಷ್ಟದಾಯಕ. ಮತ್ತೊಂದು ಯಾವ್ಯಾವ ಆವರಣದಲ್ಲಿ ಇದನ್ನು ಇಡಬಾರದು ಎಂದು ಹೇಳಿದ್ದಾರೆ. ಉದಾಹರಣೆಗೆ ಬ್ರಾಂದಿ ಷಾಪ್ ಷರಾಬ್ ಅಂಗಡಿಗಳನ್ನು ಸ್ಕೂಲಿನಿಂದ ನೂರು ಮೀಟರ್‌ಗಳ ಅಂತರದಲ್ಲಿ ಇರಬೇಕು ಎಂದು ಹೇಳುತ್ತಾರೆ, ದೇವಸ್ಥಾನದಿಂದ ನೂರು ಮೀಟರ್ ಅಂತರದಲ್ಲಿ ಇರಬಾರದು ಎಂದು ಹೇಳುತ್ತಾರೆ. ಇಂಥದ್ದೆಲ್ಲಾ ಜಾರಿಗೆ ಬಂದಿದೆ, ಇದಕ್ಕೆ ನಮ್ಮ ಊರಿನಲ್ಲಿ ಬಹಳ ಚೆನ್ನಾಗಿ ಮಾಡಿದರು, ಎದುರುಗಡೆ ಬಾಗಿಲನ್ನು ಮುಚ್ಚಿ ಹಿಂದುಗಡೆ ಬಾಗಿಲನ್ನು ಓಪನ್ ಮಾಡಿದರು ಏಕೆಂದರೆ ಅದು ನೂರು ಮೀಟರ್‌ನಿಂದ ಹೊರಗೆ ಬರುತ್ತದೆಂದು ಆ ರೀತಿ ಮಾಡಿದರು, ಒಟ್ಟಾರೆಯಾಗಿ ಇದು ಜಾರಿಗೆ ಬರುವಂಥದ್ದು ತುಂಬಾ ಕಷ್ಟವಾಗುತ್ತದೆ. ಇದರ ಜೊತೆಗೆ ಈಗಾಗಲೇ ಮತ್ತೊಂದು ಪ್ರಾಡೆಕ್ಟ್ ಬಂದಿದೆ, ಮಾನ್ಯ ತಿಮ್ಮಪ್ಪನವರಿಗೆ ಗೊತ್ತಿದೆಯೋ ಇಲ್ಲವೋ ಗೊತ್ತಿಲ್ಲ. ಎಲ್ಲಾ ಕಡೆ ಬಾಲೀ ಜಾಹೀರಾತು ನೀಡಿ ಸ್ವೀಡಿಷ್ ಕಂಪನಿ ತಯಾರು ಮಾಡಿರುವಂಥ ಸ್ವೀಡಿಷ್ ಕಂಪನಿ ತಯಾರು ಮಾಡಿರತಕ್ಕಂಥ ಕ್ಲಿಕ್ ಎನ್ನುವ ಪ್ರಾಡೆಕ್ಟ್ ಇದು ನೇರ ಹೊಗೆಸೊಪ್ಪು ನಾಲಗೆ ಕೆಳಗಡೆ ಇಟ್ಟುಕೊಳ್ಳಿ ಎಂದು ಹೇಳುತ್ತಾರೆ. ಮೊನ್ನೆ ಹದಿನೈದು ದಿವಸಗಳಿಂದ ಮಾರುಕಟ್ಟೆಗೆ ಬಿಟ್ಟಿದ್ದಾರೆ, ಮೂರು ಗ್ರಾಂಗೆ ಒಂದು ಪ್ಯಾಕೆಟ್ ಬೆಲೆ 25 ರೂಪಾಯಿ, ಇದು ಯಾವುದೇ ಅಂಗಡಿಯಲ್ಲೂ ದೊರೆಯುತ್ತದೆ, ನಮ್ಮ ಶಾಸಕರ ಭವನದ ಗೂಡಾ ಅಂಗಡಿಗಳಲ್ಲೂ ಸಿಗುತ್ತದೆ. ಸ್ವೀಡಿಷ್ ಕಂಪನಿ ವಿದೇಶದಿಂದ ಬಂದು ಇಲ್ಲಿ ಭಾರೀ ದೊಡ್ಡ ಪ್ರಮಾಣದಲ್ಲಿ ಮಾರಾಟ-ವಾಗುತ್ತದೆ, ಮೊನ್ನೆ ಅದನ್ನು 8-10 ದಿವಸ ಏರೋಡ್ರಮ್ ಎದುರುಗಡೆ ಮತ್ತಿತ್ತರ ಕಡೆ ಫ್ರೀಯಾಗಿ ಹಂಚಿದರು. ಅದ್ದರಿಂದ ಅದನ್ನು ಕೂಡ ಗಮನದಲ್ಲಿಟ್ಟುಕೊಳ್ಳುವುದು ಒಳ್ಳೆಯದೆಂದು ನನಗೆ ಅನ್ನಿಸುತ್ತದೆ. ಈಗಾಗಲೇ, ಅನೇಕ ವಿಚಾರಗಳ ಹಿನ್ನೆಲೆಯಲ್ಲಿ ಇದನ್ನು ಬ್ಯಾನ್ ಮಾಡುವುದು ಕಷ್ಟವಾಗುತ್ತದೆಂದು ಹೇಳಿದರು. ಬ್ಯಾನ್ ಮಾಡುವುದು ಎಲ್ಲದಕ್ಕೂ ಸಿದ್ಧ ಔಷಧ ಅಲ್ಲ. ಜನರ ಹೃದಯುವನ್ನು ಪರಿವರ್ತನೆ ಮಾಡಿ ಇದು ಕೆಟ್ಟದ್ದು ಎನ್ನುವುದನ್ನು ಜನರ

ಮನಸ್ಸಿನಲ್ಲಿ ಮೂಡಿಸಬೇಕಾಗಿದೆ, ಮೊನ್ನೆ ದಿವಸ ನಾವು ಕೇಂದ್ರ ಆರೋಗ್ಯ ಸಚಿವರಾದ ಮಾನ್ಯ ಶತುಘ್ನಸಿನ್ಹಾ ರವರು ಜೊತೆಯಲ್ಲಿ ನಮ್ಮ ಅಡಿಕೆ ಬೆಳೆಗೆ ಬಂದಿರುವ ಕುತ್ತಿನ ಬಗ್ಗೆ ಚರ್ಚಿಸುತ್ತಿದ್ದೆವು. ಅವರು ಬಹಳ ಒಳ್ಳೆಯ ಮಾತನ್ನು ಹೇಳಿದರು, ಅವರು ಹೇಳಿದ ಹಾಗೆ ಮುಂಬೈನಲ್ಲಿ ಒಂದು ಸಲ ಪಾನ ನಿಷೇಧವನ್ನು ಜಾರಿಗೆ ತಂದಿದ್ದರು, ಹಣದ ರಾಶಿ ಬಿತ್ತು ಎಂದು ಹೇಳಿದರು, ಅಂದರೆ ಕಳ್ಳಭಟ್ಟಿ ಮಾಡಿ ಅದರಲ್ಲಿ ಸೇರಿಸಬಾರದ್ದೆಲ್ಲವನ್ನೂ ಸೇರಿಸಿ ಕೊಟ್ಟಿದ್ದರ ಪರಿಣಾಮವಾಗಿ ಸಾಕಷ್ಟು ಜನರು ಸತ್ತು ಹೋದರು ಎಂದು ಹೇಳಿದರು. ನಿಷೇಧಿಸುವುದಕ್ಕಿಂತ ಜನ ಅದನ್ನು ಉಪಯೋಗಿಸದಿದ್ದ ಹಾಗೆ ಹೃದಯ ಪರಿವರ್ತನೆ ಮಾಡಿ ಅವರ ಮನಸ್ಸಿನಲ್ಲಿ ಪರಿವರ್ತನೆ ಮಾಡುವ ಶಿಕ್ಷಣವನ್ನು ಕೊಡತಕ್ಕಂಥದ್ದು ಒಳ್ಳೆಯದು, ತಮ್ಮ ಇಲಾಖೆಯಿಂದ ಈ ಶಿಕ್ಷಣ ಬಹಳ ದೊಡ್ಡ ಪ್ರಮಾಣದಲ್ಲಿ ಆಗಬೇಕು, ಈ ಶಿಕ್ಷಣಕ್ಕೆ ವಿಶೇಷವಾಗಿರುವ ಅನುದಾನವನ್ನು ಒದಗಿಸುವಂಥದ್ದು ಅವಶ್ಯಕತೆ ಇದೆ. ಹಾಗೆಯೇ ಮಾನ್ಯ ಸಿಂಧ್ಯಾರವರು ಗುಟ್ಕಾ ಬಗ್ಗೆ ಹೇಳಿದರು, ನಮ್ಮದು ಗುಟ್ಕಾ ತಿಂದು ಸಾಯಿಲಿ ಎನ್ನುವುದು ಅಡಿಕೆ ಬೆಳೆಗಾರರಬಯಕೆ ಅಲ್ಲ. ಗುಟ್ಕಾದಲ್ಲಿರುವ ವಿಷವಸ್ತು ಯಾವುದು ಇದೆ. ಮಾದಕ ವಸ್ತುಗಳು ಯಾವುದು ಇದೆ ಅದನ್ನು ತೆಗೆದು ಹಾಕಲಿ ಎಂದು ಇದೆ. ಇದೇ ಸದನದಲ್ಲಿ ಒಂದು ಸಲ ಪ್ರಸ್ತಾವ ಬಂದಿತ್ತು, ಅದರಲ್ಲಿ ಏನೇನು ಇದೆ ಅದನ್ನು ಕಂಡು ಹಿಡಿಯಿರಿ ಎಂದು ಹೇಳಿದ್ದೇವೆ. ನರಸಿಂಹಯ್ಯ ಕಮಿಟಿ ರಿಪೋರ್ಟ್‌ನ್ನು ಮಾಡುವಾಗ ಸಮಾರು 45 ಸ್ಯಾಂಪಲ್ಸ್‌ಗಳನ್ನು ಡ್ರಾ ಮಾಡಿದರು, ಅದರಲ್ಲಿ ಯಾವುದೇ ಒಂದು ವಿಷವಸ್ತು ಕೂಡಿ ಇಲ್ಲ, ಕ್ಯಾಲ್ಸಿಯಂ ಕಾರ್ಬೋಹೈಡ್ರೇಟ್ ಮತ್ತು ಮ್ಯಾಗ್ನೀಷಿಯಂ ಕಾರ್ಬೋಹೈಡ್ರೇಟ್ ಅಗತ್ಯಕ್ಕಿಂತ ಜಾಸ್ತಿ ಮಿಕ್ಸ್ ಮಾಡುತ್ತಿದ್ದಾರೆ ಎನ್ನುವ ಅಂಶ ಅದರಲ್ಲಿ ಬಂದಿತ್ತು. ಅದನ್ನು ನಿಯಂತ್ರಣ ಮಾಡಬಹುದು ಎಂದು ನಾವು ಹೇಳಿದೆವು. ಅಂಥದನೆಲ್ಲಾ ನಿಯಂತ್ರಣ ಮಾಡಿ. ಒಬ್ಬ ಮನುಷ್ಯನ ದೇಹಕ್ಕೆ ಒಗ್ಗದೆ ಇರುವಂತಹ ವಿಷವಸ್ತುಗಳು ಯಾವುದಾದರೂ ಇದ್ದರೆ ತೆಗೆದು ಹಾಕಿ ಎಂದು ಹೇಳಿದ್ದೇವೆಯೇ ವಿನಹ ಗುಟ್ಕಾದಲ್ಲಿ ಇರತಕ್ಕಂಥಹ 90 ಬಾಗ ಅಡಿಕೆ ಪರ ನಾವು. ಅಡಿಕೆ ಮಂಡಿ ಇವತ್ತು 20 ದಿವಸದಿಂದ ಬಾಗಿಲು ಹಾಕಿದ್ದಾರೆ. ಇಡೀ ರಾಜ್ಯದಲ್ಲಿ ಅಡಿಕೆಯ ಮಾರಾಟ ಇಲ್ಲ. ಹಾಗಾಗಿ ಅಡಿಕೆ ಬೆಳಗಾರರ ಸುಮಾರು ಒಂದು ಒಂದೂವರೆ ಲಕ್ಷ ಕುಟುಂಬಗಳು ಇವತ್ತು ನರಲಾಡುತ್ತಿವೆ. ಇಂತಹ ಒಂದು ಪರಿಸ್ಥಿತಿ ನಿರ್ಮಾಣ ಆಗಬಾರದು. ಇದೇ ಸದನದಲ್ಲಿ ಹಿಂದೆ ಮಾನ್ಯ ಕಾಗೋಡು ತಿಮ್ಮಪ್ಪನವರು ಈ ಕಡೆಗೆ ಇದ್ದಾಗ ಒಂದು ಬಿಲ್ ಪಾಸ್ ಆಯಿತು. ಅವತ್ತು ನಾವು ಹೇಳಿದೆವು. ಕಬ್ಬನ್ ಪಾರ್ಕ್‌ನೊಳಗಡೆ ಮಾತ್ರ ವಿಸರ್ಜನೆ ಮಾಡಿದರೆ ಫೆನಾಲ್ಟಿ ಹಾಕುತ್ತೇವೆ ಮೂತ್ರ ವಿಸರ್ಜನೆ ಮಾಡಬಾರದು ಎಂದು ಹೇಳಿದ್ದರು. ಅದು ಎಷ್ಟರಮಟ್ಟಿಗೆ ಜಾರಿಗೆ ಬಂದಿದೆ ನಮಗೆ ಗೊತ್ತಿಲ್ಲ. ನಾವೆಲ್ಲಾ ದಿನಾ ಬೆಳಿಗ್ಗೆ ಅಲ್ಲಿ ಹೋಗುತ್ತಿರುತ್ತೇವೆ, ಅದು ಜಾರಿಗೆ ಬರಲಿಲ್ಲ. ಯಾರ್‍ಯಾರು ಎಲ್ಲೆಲ್ಲಿ ಬೇಕಾದರೂ ನಿಂತುಕೊಳ್ಳುತ್ತಿದ್ದಾರೆ. ಹೀಗಾಗಿ ಅದೊಂದು ತರಹ ನಗೆಪಾಟಲಿಕೆ ಒಳಗಾಗಿ ಬಿಟ್ಟಿತು. ಹಾಗಾಗಿ ಆ ಶಾಸನ, ಆ ಬಿಲ್ ನಗೆಪಾಟಲಿಗೆ ಒಳಗಾಗಿ ಬಿಟ್ಟಿತು. ಆದ್ದರಿಂದ ಆ ರೀತಿ ಆಗಬಾರದು. ಒಂದು ಶಾಸನ ಇದೆ. ಅದು ಜಾರಿಗೆ ಬಂದಿದೆ ಎಂದರೆ ಕಟ್ಟುನಿಟ್ಟಿನಿಂದ ಎಲ್ಲರೂ ಅನುಸರಿಸುವ ಹಾಗೆ ಆಗಬೇಕು. ಸರ್ಕಾರ ಈ ಸದನ ಮಾಡಿರತಕ್ಕಂಥಹ ಶಾಸನಕ್ಕೆ ಬಹಳ ದೊಡ್ಡ ಬೆಲೆ ಬರಬೇಕಾಗುತ್ತದೆ. ಗೌರವ ಬರಬೇಕಾಗುತ್ತದೆ. ಈ ನಿಟ್ಟಿನಲ್ಲಿ ತಾವು ಆಲೋಚನೆ ಮಾಡಿ ರೂಲ್ಸ್‌ನ್ನು ಫ್ರೇಂ ಮಾಡಬೇಕು ಎನ್ನುವ ವಿನಂತಿಯೊಂದಿಗೆ ಈ ವಿಧೇಯಕವನ್ನು ಸ್ವಾಗತ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

+ಶ್ರೀ. ಬಿ.ಸೋಮಶೇಖರ್ (ಮಳವಳ್ಳಿ): ಮಾನ್ಯ ಉಪಾಧ್ಯಕ್ಷರೆ, ಕರ್ನಾಟಕ ಧೂಮಪಾನ ನಿಷೇದ ಮತ್ತು ಧೂಮಪಾನ ಮಾಡದವರ ಆರೋಗ್ಯ ರಕ್ಷಣೆ ವಿಧೇಯಕ, 2001 ಇದು ಹೋದ ವರ್ಷ ತಯಾರು ಮಾಡಿದಂತಹ ಒಂದು ಮಸೂದೆ. ಬಹಳ ತಡವಾಗಿ ಇದನ್ನು ತರುತ್ತಿದ್ದಾರೆ. ಇದನ್ನು ನಾವು ನಮ್ಮಪಕ್ಷದ ವತಿಯಿಂದಲೂ ಸ್ವಾಗತ ಮಾಡಿದ್ದೇವೆ. ಇದರಲ್ಲಿ ನನ್ನ ಒಂದು ಅನಿಸಿಕೆ ಏನು ಎಂದರೆ ನಮ್ಮ ದೇಶದಲ್ಲಿ ಯಾವುದೇ ಒಂದು ದುಶ್ಚಟಗಳನ್ನು ಅಥವಾ ಕಾನೂನು ಬಾಹಿರ ಕೃತ್ಯಗಳನ್ನು ತಡೆಗಟ್ಟುವುದಕ್ಕೆ ಅನೇಕ ಕಾನೂನುಗಳನ್ನು ಜಾರಿಗೆ ತಂದಿದ್ದೇವೆ. ಅದಕ್ಕೇಲನೂ ಕೊರತೆ ಇಲ್ಲ. ಆದರೆ ಕೊರತೆ ಇರತಕ್ಕಂಥದ್ದು ಎರಡು ರೀತಿ. ಒಂದು ಈ ಒಂದು ದುಶ್ಚಟಗಳ್ನು ಅಥವಾ ಕಾನೂನು ಬಾಹಿರ ಕೃತ್ಯಗಳನ್ನು ತಡೆಗಟ್ಟುವುದಕ್ಕೆ ಯಾವ ಒಂದು ವಾತಾವರಣ ಸೃಷ್ಟಿಮಾಡಬೇಕು. ಯಾವ ಒಂದು ಸಮಾಜವನ್ನು ಸೃಷ್ಟಿ ಮಾಡಬೇಕು? ಅದರಲ್ಲಿ ನಾವು ಎಡವಿದ್ದೇವೆ ಅಥವಾ ಮಾಡುವಂಥವರಿಗೆ ಕ್ರಮ ತೆಗೆದುಕೊಳ್ಳತಕ್ಕದ್ದರಲ್ಲಿ ನಾವು ಹಿಂದೆ ಬಿದ್ದಿದ್ದೇವೆ. ಈ ಎರಡು ಕಾರಣಗಳಿಂದ ಯಾವುದೇ ಕಾನೂನು ತಂದರೂ ಅದು ಯಶಸ್ವಿಯಾಗಿ ಜಾರಿಗೆ ತರಲು ಆಗುತ್ತಿಲ್ಲ. ನಮ್ಮ ಸಾಮಾಜಿಕ, ರಾಜಕೀಯ ವ್ಯವಸ್ಥೆಯೊಳಗೆ ಯಶಸ್ವಿಯಾಗಿ ಜಾರಿಗೆ ಆಗುತ್ತಿಲ್ಲ. ನಮ್ಮ ದೃಷ್ಟಿಯಲ್ಲಿ ನಾವು ಮೊದಲು ಈ ಎಲ್ಲಾ ಕೆಟ್ಟ ಕೃತ್ಯಗಳನ್ನು ಮಾಡತಕ್ಕಂಥ ವ್ಯವಸ್ಥೆಯನ್ನು ಸೃಷ್ಟಿ ಮಾಡಿ ಅದಕ್ಕೆ ಪ್ರೋತ್ಸಾಹ ಕೊಟತಕ್ಕಂಥ ವಾತಾವರಣವನ್ನು ಸೃಷ್ಟಿ ಮಾಡಿ ನಂತರ ಕಾನೂನು ತರುತ್ತೇವೆ. ಅದಕ್ಕೆ ನಾವು ಬೇರೆ ಬೇರೆ ದೇಶಗಳಲ್ಲಿ ನೋಡಿದಾಗ ಮೊದಲು ನಮ್ಮ ಮನೆಯಲ್ಲಿ ಒಂದು ವಾತಾವರಣ ಸೃಷ್ಟಿ ಆಗಬೇಕು. ಮನೆಯಲ್ಲಿ ಅದು ನಂತರ ಸಮಾಜದಲ್ಲಿ ಸೃಷ್ಟಿ ಆಗಬೇಕು. ಅದಕ್ಕೆ ಶಿಕ್ಷಣ ಒಂದೇ ಒಂದು ದಾರಿ. ನಾವು ಎಷ್ಟೋ ಮನೆಗಳಲ್ಲಿ ನೋಡಿದ್ದೇವೆ. ತಂದೆ ತಾಯಿಗಳು ಯಾವ ಒಂದು ಕೃತ್ಯ ಮಾಡುತ್ತಾರೆ. ಮಕ್ಕಳು ಅದನ್ನು ಮಾಡುತ್ತಾರೆ ಒಬ್ಬ ತಂದೆ ಕುಡಿದು ರಾತ್ರಿ 12 ಗಂಟೆಗೆ ಅಥವಾ ಒಂದು ಗಂಟೆಗೆ ಬಂದರೆ ಆ ಮಗನ ಮೇಲೆ ಯಾವ ಪರಿಣಾಮ ಬೀಳುತ್ತದೆ ಅಥವಾ ತಾಯಿ ಯಾವ ರೀತಿ ಮಾಡುತ್ತಾಳೋ ಅದು ಮಕ್ಕಳ ಮೇಲೆ ಪರಿಣಾಮಬಿಳುತ್ತದೆ. ಮೊದಲು ನಾವು ನಮ್ಮ ನಮ್ಮ ಮನೆಗಳಲ್ಲಿ ತಂದೆ ತಾಯಿಗಳು ಅದನ್ನು ನಿಯಂತ್ರಣ ಮಾಡತಕ್ಕದ್ದನ್ನು ಮೊದಲು ಕಲಿಯಬೇಕು. ನಂತರ ಮಕ್ಕಳು ಶಾಲೆಗಳಲ್ಲಿ ಇದನ್ನು ಕಲಿಯಬೇಕು. ಶಾಲೆಗಳಲ್ಲಿ ಪಠ್ಯ ಕ್ರಮದಲ್ಲಿ ಇದನ್ನು ಅಳವಡಿಸಬೇಕು. ಕೆನಡಾದಲ್ಲಿ ನೋಡಿ, ಬೇರೆ ಬೇರೆ ದೇಶಗಳಲ್ಲಿ ನೋಡಿ. ಮೊದಲು ಪ್ರತಿ ಒಂದು ಮಕ್ಕಳ ಮನಸ್ಸಿನಲ್ಲಿ ಇಂತಹ ಒಂದು ಕೆಲಸವನ್ನು ಏಕೆ ಮಾಡಬಾರದು? ಸಮಾಜಘಾತಕ ಶಕ್ತಿಯ ಕೆಲಸಗಳನ್ನು ಮಾಡಬಾರದು? ಇದರಿಂದ ಸಮಾಜಕ್ಕೆ ಕೆಟ್ಟದು ಆಗುತ್ತದೆ. ಇದರಿಂದ ಸಮಾಜದ ಮೇಲೆ ದುಷ್ಪರಿಣಾಮ ಬೀಳುತ್ತದೆ ಎನ್ನತಕ್ಕ ಭಾವನೆ ಸಣ್ಣ ಮಕ್ಕಳಲ್ಲಿ ಬರಬೇಕು. ಅದು ಬರಬೇಕಾದರೆ ಶಿಕ್ಷಣದಿಂದ ಮಾತ್ರ ಸಾಧ್ಯ. ಆದ್ದರಿಂದ ಇವುಗಳನ್ನು ಪಠ್ಯ ಕ್ರಮದಲ್ಲಿಯೇ ತಾವು ತರಬೇಕು. ಯಾವುದೇ ಒಂದು ಕೃತ್ಯ ಮಾಡಿದರೂ ತಾವೂ ಪಠ್ಯ ಕ್ರಮದಲ್ಲಿ ತರಬೇಕು. ಆರೋಗ್ಯ ಇಲಾಖೆಯವರು ಅದನ್ನು ಶಿಕ್ಷಣ ಇಲಾಖೆಯ ಜೊತೆ ಸಂಪರ್ಕ ಮಾಡಿ, ಧೂಮಪಾನ ಮಾಡತಕ್ಕದ್ದು ಇರಬಹುದು ಅಥವಾ ಮಧ್ಯಪಾನ ಮಾಡತಕ್ಕದ್ದು ಇರಬಹುದು, ಮತ್ತೆ ಬೇರೆ ಇನ್ಯಾವುದೇ ಒಂದು ದುಷ್ಪರಿಣಾಮಗಳು ಬೀರತಕ್ಕ ಕೃತ್ಯಗಳೂ ಇರಬಹುದು. ಅದನ್ನು ತಡೆಗಟ್ಟತಕ್ಕಂಥ ಕೆಲಸ ಮೊದಲು ಶಿಕ್ಷಣದಲ್ಲಿ ಆಗಬೇಕು ಎನ್ನುತಕ್ಕದ್ದು ನನ್ನ ಒಂದು ಅನಿಸಿಕೆ. ಮತ್ತೆ ಇದನ್ನು ಮಾಡಿದಂತಹವರು ಕ್ರಮ ತೆಗೆದುಕೊಳ್ಳುವುದಕ್ಕೆ ಹಿಂದೆ ಮುಂದೆಬೀಳಬಾರದು. ಈ ನಮ್ಮ

ಪೋಲೀಸ್‌ನವರಿಗೆ ತಾವು ಅಧಿಕಾರ ಕೊಟ್ಟಿದ್ದೀರಿ. ನನ್ನ ಒಂದು ಅನುಮಾನ ಏನು ಅಂದರೆ ಪೋಲಿಸ್‌ನವರಿಗೆ ಕೊಟ್ಟರೆ ಏನಾಗಬಹುದು? ನಾವು ಎಷ್ಟೋ ಕಡೆ ನೋಡಿದ್ದೇವೆ. ಕ್ಲಬ್‌ಗಳಲ್ಲಿ ಇಸ್ಪೀಟ್ ಆಡಿಸಬಾರದು ಎಂದು ಇರುತ್ತದೆ. ಪೋಲಿಸ್‌ನವರು ತಾವೇ ಇಸ್ಪೀಟ್ ಆಡಿ ದುಡ್ಡನ್ನು ಹಂಚಿಕೊಳ್ಳುತ್ತಾರೆ. ಈಗ ಸಿಗರೇಟ್ ಸೇದಬಾರದು ಎಂಬ ಕಾನೂನು ಇದ್ದರೆ ಒಬ್ಬ ವ್ಯಕ್ತಿ ಸಿಗರೇಟ್ ಸೇದುತ್ತಿದ್ದರೆ, ಆ ಪ್ಯಾಕೆಟ್‌ಅನ್ನು ಪೋಲೀಸ್‌ನವರು ತಾವೇ ತೆಗೆದುಕೊಳ್ಳುತ್ತಾರೆ ಆದ್ದರಿಂದ ಏನೂ ತಡೆಗಟ್ಟಲು ಆಗುವುದಿಲ್ಲ. ಆದ್ದರಿಂದ ಬೇರೆ ಯಾವುದಾದರೂ ಒಂದು ರೂಲ್ಸ್‌ನಲ್ಲಿ ಮಾಡತಕ್ಕದ್ದು ಸೂಕ್ತ. ಅದರಲ್ಲೂ ವಿಶೇಷವಾಗಿ ಶಿಕ್ಷಣದಲ್ಲಿ ಈ ವಿಷಯವನ್ನು ತರತಕ್ಕದ್ದು ಬಹಳ ಅವಶ್ಯಕತೆ ಇದೆ. ಅದರಿಂದಲೇ ಮಾತ್ರ ಇದು ಸಾಧ್ಯ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

+ಶ್ರೀ. ಕೆ. ಶ್ರೀನಿವಾಸ ಗೌಡ ಕುಡುವನ ಹಳ್ಳಿ (ಕೋಲಾರ): ಮಾನ್ಯ ಉಪಾಧ್ಯಕ್ಷರೆ, ಇವತ್ತೇನು ಈ ಬಿಲ್ ಅನ್ನು ತಂದಿದ್ದಾರೆ, ನಮ್ಮ ಪಾರ್ಟಿಯವರು ಅದನ್ನು ಸ್ವಾಗತ ಮಾಡಿದ್ದಾರೆ, ನಾನೂ ಕೂಡ ಸ್ವಾಗತ ಮಾಡುತ್ತೇನೆ. ಇವತ್ತು ಈ ಬಿಲ್ ತಂದಿರುವ ಉದ್ದೇಶ ಕುಡಿಯುವವನು ಒಬ್ಬ,ಆ ಹೊಗೆ ಹತ್ತುಜನಕ್ಕೆ ಹೋಗುತ್ತದೆ.. ಈ ಬಿಲ್ ತಂದಿರುವುದಕ್ಕೆ ಇದೇ ಮುಖ್ಯ ಕಾರಣ ಎಂದು ನಾನಂತೂ ಭಾವಿಸುತ್ತೇನೆ. ಸಿಗರೇಟ್ ಒಬ್ಬ ಕುಡಿದು ಸಾರ್ವಜನಿಕ ಸ್ಥಳಗಳಲ್ಲಿ ಓಡಾಡುವಾಗಲೀ ಅಥವಾ ಒಂದು ಜಾಗದಲ್ಲಿ ಕುಳಿತಾಗಲೀ ಒಬ್ಬರು ಸಿಗರೇಟ್ ಕುಡಿದು ಹೊಗೆ ಬಿಟ್ಟಾಗ ಅದನ್ನು ಹತ್ತಾರು ಜನ ಸೇವಿಸುವಂತಹ ಪರಿಸ್ಥಿತಿ ಬರುತ್ತದೆ. ಅದನ್ನು ನಿಯಂತ್ರಿಸಬೇಕು ಎನ್ನುವಂತಹ ಹಿನ್ನೆಲೆಯಿಂದ ಈ ಬಿಲ್ಲನ್ನು ತಂದಿದ್ದಾರೆ ಎನ್ನುವ ಭ್ಯಾವನೆ ನನಗೆ ಇದೆ, ಆದರೆ ಇದನ್ನು ಕಂಟ್ರೋಲ್ ಮಾಡುವುದಕ್ಕೆ ಸಾಧ್ಯವೇ ಎನ್ನುವ ಬಗ್ಗೆ ಕೆಲವರು ಮಾತನಾಡಿದ್ದಾರೆ. ನಾನು ಒಂದು ಉದಾಹರಣೆ ಕೊಡಲು ಬಯಸುತ್ತೇನೆ. ನಾನು ಹಾಗೂ ನಮ್ಮ ಸ್ನೇಹಿತರು 15 ವರ್ಷಗಳ ಹಿಂದೆ ಒಂದು ಮೀಟಿಂಗ್‌ಗೆ ಅಹಮದಾಬಾದಿಗೆ ಹೋದೆವು. ಅಹಮದಾಬಾದಿನಲ್ಲಿ ಪ್ರಾಹಿಬಿಷನ್ ಇದೆ. ಅಲ್ಲಿ ವಿಸ್ಕಿ ಮಾರುವುದಿಲ್ಲ. ನಮ್ಮ ಸ್ನೇಹಿತರು ವಿಸ್ಕಿ ಬೇಕು ಎಂದರೆ. ಪ್ರಾಹಿಬಿಷನ್ ಇದೆ. ಆಗಲ್ಲ ಎಂದು ಎಂದು ಹೇಳಿದರೆ ಕಡೆಗೆನಾವಿಬ್ಬರೂ ಹೋಗಿ ಒಬ್ಬ ಡ್ರೈವರ್‌ನನ್ನು ಕೇಳಿದೆವು. ಏನಪ್ಪ ಇಲ್ಲಿ ಒಳಗೆ ವಿಸ್ಕಿ ಮಾರುತ್ತಾರಂತೆ, ಎಲ್ಲಾದರೂ ಸಿಗುತ್ತದಾ ಎಂದು ಕೇಳಿದೆವು. ಅವನು ಕುಳಿತುಕೊಳ್ಳಿ ಎಂದು ಹೇಳಿ ನಮ್ಮನ್ನು ಕರೆದುಕೊಂಡು ಹೋದ. ಎಲ್ಲಿ ಮಹಾತ್ಮಾ ಗಾಂಧಿಯವರು ಪಾನ ನಿರೋಧ ಎಂದು ಸಾರಿದರು, ಆ ಊರಿನಲ್ಲಿ ಫುಟ್‌ಪಾತಿನಲ್ಲಿ ಮಾರುತ್ತಿದ್ದಾರೆ. ಅದೂ ಏನು ಗೋಣಿಚೀಲಗಳಲ್ಲಿ ಇಟ್ಟು ಬರೇ ಒಂದು ಎರಡು ಬಾಟಲುಗಳು ಅಲ್ಲ, ಸಾವಿರಾರು ಬಾಟಲುಗಳನ್ನು ಮಾರುತ್ತಿದ್ದಾರೆ. ಅಂತಹ ಪರಸ್ಥಿತಿಯ ಹಿನ್ನೆಲೆಯಲ್ಲಿ ಈ ಸಿಗರೇಟನ್ನು, ಈ ಧೂಮಪಾನವನ್ನು ನಿಷೇಧಿಸಲಿಕ್ಕೆ ಸಾಧ್ಯನೇ? ಏಕೆಂದರೆ ನಾನು ಅಲ್ಲಿ ನೋಡಿದ್ದೇನೆ. ನೋಡಿರುವುದರಿಂದ ಇದು ಸಾಧ್ಯನೇ ಎನ್ನುವಂತಹ ಚಿಂತನೆ ನನಗೆ ಇದೆ. ಮತ್ತು ರೈತರಿಗೆ ಆಗುವಂತಹ ಆಗುಹೋಗುಗಳ ಬಗ್ಗೆ ಮಾನ್ಯ ಸಿಂಧ್ಯ ಅವರು ಬಹಳ ವಿಷಾದವಾಗಿ ಹೇಳಿದರು. ಅದರಿಂದ ಅದನ್ನು ನಾನು ಹೇಳಲು ಇಚ್ಚಿಪಡುವುದಿಲ್ಲ. ಇವತ್ತು ಇದರ ಜೊತೆಗೆ ಬೀಡಿ ಕಾರ್ಮಿಕರ ವಿಚಾರ ಕೋಲಾರದಲ್ಲಿ ಹೆಚ್ಚು ಕಡಿಮೆ ಮೈನಾರಿಟೀಸ್‌ನ ಬಹಳಷ್ಟು ಜನ ಬೀಡಿ ಕಟ್ಟಿ ಜೀವನ ಮಾಡುತ್ತಾರೆ. ಒಂದು ದಿವಸಕ್ಕೆ 50 ರೂಪಾಯಿನಿಂದ 60 ರೂಪಾಯಿ ಸಂಪಾದನೆ ಮಾಡುತ್ತಾರೆ. ಇದು ಯಾವ ತರಹ ಆರ್ಥಿಕವಾಗಿ ಇದರ ಮೇಲೆ

ಪ್ರಭಾವ ಬೀರುತ್ತದೆ ಎನ್ನುವುದನ್ನೂ ಕೂಡ ನಾವು ಯೋಚನೆ ಮಾಡಬೇಕು. ಇವತ್ತು ಆ ಬೀಡಿ ಕಾರ್ಮಿಕರು ನೂರಾರು ಅಲ್ಲ, ಲಕ್ಷಾಂತರ ಜನ ನಮ್ಮ ರಾಜ್ಯದಲ್ಲಿಯೇ ಇದ್ದಾರೆ. ಬರೇ ಲಕ್ಷಾಂತರ ಜನ, ಅದರಲ್ಲೂ ಬಡಬಗ್ಗರು ಬೀಡಿ ಕಟ್ಟುವುದರಿಂದ ಜೀವನ ಮಾಡುವವರು. ಈ ಹಿನ್ನೆಲೆ ಇರುವುದರಿಂದ ನೀವು ಇವತ್ತು ಇದನ್ನೆಲ್ಲಾ ಬಹಳಷ್ಟು ಕಂಟ್ರೋಲ್ ಮಾಡಿದರೆ ಆರ್ಥಿಕವಾಗಿ ಅವರು ಜೀವನ ಮಟ್ಟ ಅವರ ಜೀವನ ಕಷ್ಟ ಆದರೂ ಹೆಚ್ಚಲ್ಲ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಏಕೆಂದರೆ ಕೋಲಾರದಲ್ಲಿ ಬಹಳಷ್ಟು ಜನ ಬೀಡಿ ಕಟ್ಟುವವರೇ ಇರುವುದರಿಂದ, ಅದರಲ್ಲೂ ನಾವು ಮೇನಾರಿಟೀಸ್ ಏರಿಯಾದಲ್ಲಿ ಹೋದರೆ ಪ್ರತಿ ಮನೆಯಲ್ಲೂ, ಬಡವರು ಬೀಡಿ ಕಟ್ಟುತ್ತಿರುತ್ತಾರೆ. ನೂರಕ್ಕೆ 85, 90 ಭಾಗದಷ್ಟು ಜನ ಇವತ್ತು ಅಲ್ಲಿ ಬೀಡಿ ಕಟ್ಟಿ ಜೀವನ ಮಾಡುತ್ತಾರೆ. ಇದನ್ನು ಯಾವ ರೀತಿ ಸರಿದೂಗಿಸುತ್ತೀರಿ ಎನ್ನುವುದನ್ನು ಕೂಡ ಯೋಚನೆ ಮಾಡಬೇಕು. ಇವತ್ತು ನಿಜವಾಗಲೂ ಈ ಬಿಲ್ ಅನ್ನು ಸ್ವಾಗತ ಮಾಡಬೇಕು. ಈ ಬಿಲ್ ಅನ್ನು ಇವತ್ತೇನು ವಿಧಾನಸಭೆಯಲ್ಲಿ ತರುತ್ತಿದ್ದೇವೆ, ನಾವು ಕನಿಷ್ಟ ಒಂದು ಕೆಲಸ ಮಾಡಬೇಕು. ಸಾಮಾನ್ಯವಾಗಿ ಕೆಲವರು ನಮ್ಮ ಹಿಂದೂ ಸಂಪ್ರದಾಯಸ್ಥರು ಬಹಳಷ್ಟು ಜನ ಅವರ ತಂದೆಯವರೂ ಅಥವಾ ತಾಯಿಯವರೋ ತೀರಿಕೊಂಡಾಗ ಆ ತಂದೆ ತಾಯಿಗೆ ಬಹಳ ಇಷ್ಟವಾದಂತಹ ಪದಾರ್ಥವನ್ನು ಬಿಟ್ಟು ಬಿಡುತ್ತಾರೆ. ಅಂದರೆ ತಂದೆ ಬಹಳ ಮಾಂಸ ತಿನ್ನುತ್ತಿದ್ದರೆ ಮಗನೂ ಮಾಂಸ ತಿನ್ನುವುದನ್ನು ಬಿಟ್ಟು ಬಿಡುವುದು, ತಂದೆ ಸಿಗರೇಟು ಕುಡಿಯುತ್ತಿದ್ದರೆ ಮಗ ಬಿಟ್ಟು ಬಿಡುವುದು, ಈ ತರಹ ವಾಡಿಕೆಗಳು ಇದ್ದಾವೆ. ಆ ತರಹ ಇಲ್ಲೂ ಸಹ ನಾವು 224 ಜನ ಇದನ್ನು ಬಿಡಬೇಕು. ನಾವು ಪೂರ್ತಿಯಾಗಿ ಬಿಟ್ಟಿದ್ದೇವೆ. ಮೊನ್ನೆ ಒಬ್ಬ ಅಧಿಕಾರಿಯ ಮನೆಗೆ ನಾನು ಹಾಗೂ ಮಾನ್ಯ ಬಚ್ಚೇಗೌಡರು ಹೋಗಿದ್ದೆವು. ಆರೂವರೆ ವರ್ಷ ಆಯಿತು ನಾನು ಮಾಂಸ ತಿನ್ನದೆ ಎಂದು ಹೇಳಿದರು. ಏಕೆ ತಿನ್ನದೇ ಬಿಟ್ಟಿದ್ದು ಎಂದು ಕೇಳಿದರೆ ನಮ್ಮ ತಂದೆಯವರಿಗೆ ಬಹಳ ಇಷ್ಟ ಇತ್ತು. ಅವರ ಜ್ಞಾಪಕಾರ್ಥವಾಗಿ ನಾನೂ ಸಹ ಮಾಂಹ ತಿನ್ನುವುದನ್ನು ಬಿಟ್ಟು ಬಿಟ್ಟಿದ್ದೇನೆ ಎಂಬು ಒಬ್ಬ ಐಎಎಸ್ ಆಫೀಸರ್ ಅವರು ಹೇಳಿದರು. ನನಗೆ ಆವಾಗ ಅನ್ನಿಸತು. ಹಾಗೆ ನಾವೂ ಕೂಡ ಇವತ್ತು ಬಿಲ್ ಅನ್ನು ಏನು ಪಾಸ್ ಮಾಡುತ್ತೇವೆ, ಇಲ್ಲಿಂದ ರಾಜ್ಯಕ್ಕೆ ಕನಿಷ್ಟ ಒಂದು ಮೆಸೇಜ್ ಹೋಗಲಿ. 224 ಜನರೂ ಸಹ ಸಿಗರೇಟ್, ಬೀಡಿ ಕುಡಿಯುವುದನ್ನಾದರೂ ಬಿಡಬೇಕು. ಮೇಲ್ಮನೆ ಸದಸ್ಯರೂ ಸೇರಿ ಒಟ್ಟು 300 ಸದಸ್ಯರು ಬಿಟ್ಟರೆ ಒಳ್ಳೆಯದು.

ಶ್ರೀ. ಬಿ.ಆರ್. ಯಾವಗಲ್:- ಬರೇ ಸಿಗರೇಟೋ ಅಥವಾ ಇತ್ಯಾದಿಯೋ?

ಶ್ರೀ. ಕೆ. ಶ್ರೀನಿವಾಸ ಗೌಡ ಕುಡುವನಹಳ್ಳಿ : ನಾನು ಹೇಳುತ್ತಿರುವುದು ಬರೇ ಸಿಗರೇಟು. ಸಿಗರೇಟು ಮತ್ತು ಬೀಡಿ ವಿಚಾರ. ಉಳಿದದ್ದು ಆಮೇಲೆ. ಬೀಡಿ, ಸಿಗರೇಟು ಬಿಟ್ಟರೆ ಒಳ್ಳೆಯದು. ಪ್ರಯತ್ನ ಮಾಡಿ ನೋಡಿ. ನಾವು ಈ ಬಿಲ್‌ಅನ್ನು ಸರ್ವಾನುಮತವಾಗಿ ತರಬೇಕು ಎಂದು ಹೇಳುತ್ತೇನೆ.

ಶ್ರೀ. ಬಿ. ಆರ್ ಯಾವಗಲ್: - ಮಧ್ಯಪಾನವನ್ನು ಬಿಡಬೇಕು

ಶ್ರೀ. ಎಸ್. ಎಸ್ ಪಾಟೀಲ್:- ಮೊದಲೂ ಅದನ್ನು ಬಿಟ್‌ಬಿಡಿ, ಆಮೇಲೆ ಬಿಲ್ ತರೋಣ

ಶ್ರೀ. ಕೆ. ಶ್ರೀನಿವಾಸ ಗೌಡ ಕುಡುವನಹಳ್ಳಿ:- ಮಧ್ಯಪಾನದ ಬಗ್ಗೆ ಬಿಲ್ ತರಲಿ, ಬಿಲ್ ತಂದ ಮೇಲೆ ಯೋಚನೆ ಮಾಡೋಣ. ನಮ್ಮ ಮಾನ್ಯ ಎಸ್.ಎಸ್.ಪಾಟೀಲ್ ಅವರು

ಧೂಮಪಾನ ಮಾಡಿಲ್ಲ, ಏನೂ ಮಾಡಿಲ್ಲ, ಅದರಿಂದ ಅವರಿಗೆ ಏನೂ ಗೊತ್ತಾಗಲಿಲ್ಲ. ಸಿಗರೇಟು ಕುಡಿದಿಲ್ಲ, ಏನೂ ಮಾಡಿಲ್ಲ, ಕಾಲೇಜಿಗೆ ಹೋಗಿಲ್ಲ, ಅದರಿಂದ ಅವರಿಗೆ ಹೆಚ್ಚಿನ ಪರಿಣಾಮ ಆಗುವುದಿಲ್ಲ.

7.10 ಪಿಎಂ

ಪಾನ ನಿರೋಧ ಸಂಯಮ ಮಂಡಳಿ ಎಂದು ಮಾಡಿದ್ದೀರಿ ಅದಕ್ಕೆ ಒಬ್ಬರು ಅಧ್ಯಕ್ಷರನ್ನು ನೇಮಕ ಮಾಡಿದ್ದೀರಿ, ಅದರಿಂದ ಕುಡಿಯುವುದು ನಿಂತುಹೋಗಿದೆಯೇನು?

ಶ್ರೀ. ಎಸ್. ಎಸ್. ಪಾಟೀಲ್: ಅದಕ್ಕೆ ಇವರು ಕುಡಿಯುವವರನ್ನು ಅಧ್ಯಕ್ಷರನ್ನಾಗಿ ನೇಮಕ ಮಾಡಿದ್ದಾರೆ.

ಶ್ರೀ. ಕೆ. ಶ್ರೀನಿವಾಸ ಗೌಡ ಕುಡುವನಹಳ್ಳಿ : ಇದು ಪರಿಸ್ಥಿತಿ ಇದೆ ನಾವೇನು ಈ ಮನೆಯಲ್ಲಿರುವ 224ಜನ ಕುಡಿಯುವುದಿಲ್ಲ ಸೇದುವುದಿಲ್ಲವೆಂದು ಪ್ರತಿಜ್ಞೆ ಮಾಡಿ ಇವೊತ್ತು ಈ ಬಿಲ್ ಅನ್ನು ಸ್ವಾಗತ ಮಾಡಬಹುದು ನನ್ನ ಮನಸ್ಸಿನಲ್ಲಿದೆ. ಈ ಬಿಲ್ಲನ್ನು ತಂದಿರತಕ್ಕ ಮಾನ್ಯ ಆರೋಗ್ಯಮಂತ್ರಿಗಳನ್ನು ತಮ್ಮ ಮೂಲಕ ವಂದಿಸುತ್ತೇನೆ. ಈ ಬಿಲ್‌ನಿಂದ ಯಾವುದೇ ರೀತಿಯಲ್ಲಿ ರೈತರ ಮೇಲೆ ಪರಿಣಾಮ ಬೀರದಹಾಗೆ ನೋಡಿಕೊಳ್ಳುವುದು ನಿಮ್ಮ ಜವಾಬ್ದಾರಿ. ಯಾವುದೇ ಪರಿಸ್ಥಿತಿಯಲ್ಲೂ ರೈತರ ಮೇಲೆ ಪ್ರಭಾವ ಬೀರಬಾರದು.ರೈತರ ಆರ್ಥಿಕ ದೃಷ್ಟಿಯಿಂದ ಇದನ್ನು ನೋಡಬೇಕು. ಈ ಮಸೂದೆಯನ್ನು ಸ್ವಾಗತ ಮಾಡಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ. ಬಿ.ಆರ್.ಯಾವಗಲ್: ನಮ್ಮ ಕಡೆ ಒಂದು ಗಾದೆ ಮಾತಿದೆ. ಮಾಡುವುದೆಲ್ಲಾ ಮಾಡಿ ಜೋಗತಿ ಆದಳು ಎಂದು.

ಶ್ರೀ. ಪಾಟೀಲ್ ಶಿವಾನಂದ ಅದ್ದನಗೌಡ : ಮಾನ್ಯ ಉಪಾಧ್ಯಕ್ಷರೆ, ನೀವು ಐದು ನಿಮಿಷ ಎಂದು ಹೇಳಿ ಒಂದೂವರೆ ತಾಸು ತೆಗೆದುಕೊಂಡರೆ ಹೇಗೆ? ಮಾನ್ಯ ಸದಸ್ಯರಾದ ಎಸ್.ಎಸ್. ಪಾಟೀಲರಿಗೆ ಹೇಳದೆ ಇದೇನು ಅಂತಹ ಮುಖ್ಯವಾದ ಬಿಲ್ ಅಲ್ಲ ಬೇಡವೆಂದರೂ ತಾವು ಕೇಳಲಿಲ್ಲ. ನಮ್ಮ ಭಾಗದಲ್ಲಿ ನೀರಿಲ್ಲ.

ಉಪಾಧ್ಯಕ್ಷರು: ಇನ್ನೇನು ಮುಗಿಸುಹೋಯಿತು. ಇದು ಕೊನೆ.

+ಶ್ರೀ. ಎಸ್. ಸುರೇಶ್‌ಕುಮಾರ್: ಮಾನ್ಯ ಉಪಾಧ್ಯಕ್ಷರೆ, ಇವತ್ತೇನು ಮಾನ್ಯ ಆರೋಗ್ಯಮಂತ್ರಿಗಳು ಬಿಲ್ಲನ್ನು ತಂದಿದ್ದಾರೆ ಬಹುಶಃ ಅದನ್ನು ಎಲ್ಲರೂ ಕೂಡ ಸ್ವಾಗತಿಸುತ್ತಿದ್ದೇವೆ. ಪ್ರಶ್ನೆ ಎರಡು - ಮೂರು ಅಷ್ಟೇ ಇದನ್ನು ನಿಜವಾಗಿಯೂ ಕೂಡ ಇಂಪ್ಲಿಮೆಂಟ್ ಮಾಡುವುದಕ್ಕಾಗುವುದಿಲ್ಲ. ಉದ್ದೇಶ ಸರಿಯಿದೆ, ಅಗತ್ಯತೆ ಕೂಡ ಸರಿಯಿದೆ. ತಾವು ಹೇಳಿದಹಾಗೆ "The Karnataka Prohibition of Smoking in Show houses and Public halls Act, 1963"- ಒಂದು ಇದೆ. ಅದರಲ್ಲಿ ಕೂಡ ಶೋಹೌಸ್‌ಗೆ ಡೆಫನಿಷನ್ ಕೊಟ್ಟಿದ್ದಾರೆ ಪಬ್ಲಿಕ್‌ಹಾಲ್‌ಗೆ ಡೆಫನಿಷನ್ ಕೊಟ್ಟಿದ್ದಾರೆ. ಜೊತೆಗೆ ಕರ್ನಾಟಕ ಪೊಲೀಸ್ ಆಕ್ಟ್‌ನಲ್ಲಿ ಕೂಡ ಇದೆ. ಈ ಎರಡು ಆಕ್ಟ್‌ಗಳಲ್ಲಿ ಪ್ರಾವಿಜನ್ ಇದ್ದರೂ ಕೂಡ ಇದುವರೆಗೆ ಮಾಡಲಿಕ್ಕೆ ಆಗಲಿಲ್ಲ. ಪ್ರಾಯಶಃ ಆಡಳಿತದ ವೈಫಲ್ಯವೆನ್ನಬಹುದು ಅನೇಕ ಕಾರಣಗಳಿರಬಹುದು. ಕಾನೂನಿನಲ್ಲಿ ಲೂಪ್‌ಸ್ಸ ಪೋಲ್ಸ್ ಇದೆಯೆಂದು ಹೇಳಬಹುದು. ಇದು ಒಂದು ತರಹ ಸಿಗರೇಟ್ ಸೇದುವುದು ಅಥವಾ ಕುಡಿಯುವುದು more a fashions ಮಾನ್ಯ ರಂಗನಾಥ್‌ರವರೇ, ಸಿಗರೇಟ್ ಸೇದುವುದು ಅಥಾವ ಕುಡಿಯುವುದು more a fashions ಆಗುತ್ತಿದೆ; ಮನೆಗಳಲ್ಲಿ

ಶ್ರೀ. ಕೆ.ಹೆಚ್.ರಂಗನಾಥ್ (ಅರಣ್ಯ ಸಚಿವರು): ಸಿಗರೇಟ್ ಸೇದುವುದು ಗೊತ್ತಿದೆ. ನಾನೂ ಕೂಡ ಸೇದುತ್ತಿದ್ದೆ. ಅದು ನನಗೆ ಗೊತ್ತಿದೆ.

ಶ್ರೀ. ಎಸ್ ಸುರೇಶ್‌ಕುಮಾರ್ : ನಾನು ನಿಮ್ಮನ್ನು ಕೆಣಕಲಿಲ್ಲ, ಹೇಳಿದೆ ಅಷ್ಟೆ.

ಶ್ರೀ. ಕೆ.ಹೆಚ್. ರಂಗನಾಥ್: ನಿಮಗೆ ಯಾವುದು ಗೊತ್ತಿದೆ?

ಶ್ರೀ. ಎಸ್ ಸುರೇಶ್‌ಕುಮಾರ್ : ಸ್ವಾಮಿ, ನಾನು ಹೇಳುತ್ತೇನೆ ಕೇಳಿ. ವಿಷಯ ಗೊತ್ತಾಗಲಿಲ್ಲ. ಒಂದು ಶಾಲೆಯಲ್ಲಿ ಮಗುವನ್ನು ಒಬ್ಬ ಮೇಷ್ಟ್ರು ಕೇಳಿದರಂತೆ ಸ್ಟ್ರೈಟ್ ಸ್ಪೆಲಿಂಗ್ ಏನು ಎಂದು. ಬುದ್ಧಿವಂತ ಮಗು ಎಸ್‌ಟಿಆರ್‌ಐಜಿಹೆಚ್‌ಟಿ ಎಂದು ಹೇಳಿತು. What is the meaning of straight? ಕೇಳಿದ್ದಕ್ಕೆ "without soda" ಎಂದು ಹೇಳಿತು. ಅಂದರೆ ಇದು ಯಾವ್ಯಾವ ಪ್ರಶ್ನೆಯನ್ನು ಯಾವ್ಯಾವ ಹಂತದಲ್ಲಿ ಮುಟ್ಟಿಸುತ್ತಾ ಹೇಗುತ್ತಿದ್ದೇವೆನ್ನುವುದಕ್ಕೆ ಇದೊಂದು ಸಾಕ್ಷಿ ಅಷ್ಟೆ. ಈಗಿರುವ ಎರಡೂ ಆಕ್ಟ್‌ನಲ್ಲಿ ಅವಕಾಶ ಇದ್ದಾಗ ನಾವು ಮಾಡಲಿಕ್ಕೆ ಆಗಲಿಲ್ಲ. ಈಗ ಬಿಲ್ಲನ್ನು ತಂದಿದ್ದೀರಿ ಬಹಳ ಸ್ವಾಗತ. ಬಿಲ್ಲನ್ನು ತರುವಾಗಲೇ ಎರಡು ವಿಷಯ ನನಗೆ ನಗು ಬಂತು. ಮೊದಲನೆಯದು, ಕಾಂಡೌಂಡಿಂಗ್ ಆಫ್ ಅಫೆನ್ಸಸ್. ಇನ್ನೂ ಬಿಲ್ ಬಂದಿಲ್ಲ. ಆಗಲೇ ಕಾಂಪೌಂಡಿಂಗ್ ಆಫ್ ಅಫೆನ್ಸಸ್.

> "The State Government or any person authorised by the State Government in this behalf by general or Special order, may either before or after the institution of the proceedings compound any of the offences made punishable under this Act"

ನೀವು ಮಾಡಿರುವುದೇ ಅಪರಾಧವೆಂದು ಮಾಡಿದ ಮೇಲೆ ಈ ಕಾಂಪೌಂಡಿಂಗ್ ಕ್ಲಾಸಸ್ ಏಕೆ ಬೇಕಿತ್ತು?

> When an offence is compounded under sub-section (1), the offender if in custody shall be discharged and no further proceedings shall be take against him in respect of the offence compounded. Is it necessary?"

ನೀವು ಹಿಡಿಯುತ್ತೀರಿ. ಯಾರೋ ಬಂದು ಕಾಪೌಂಡ್ ಮಾಡಿದ ತಕ್ಷಣ ಡಿಸ್ ಚಾರ್ಜ್ ಮಾಡಿಸಿ ಆತನ ಮೇಲೆ ಕೇಸು ಕೂಡ ನಡೆಸುವುದಿಲ್ಲ. ಇದರ ಉದ್ದೇಶವೇನು ಎಂದು ನನಗೆ ತಿಳಿಸುತ್ತೀರಾ? ಎರಡನೆಯದು ಪೆನಾಲ್ಟೀಸ್ ಮಾನ್ಯ ಚನ್ನಿಗಪ್ಪನವರು ಹೇಳಿದಾಗ ನನಗೆ ನಗು ಬಂದು. ಮೊದಲನೆಯ ಸಲ ಆದರೆ 100 ರೂಪಾಯಿ. ಎರಡನೆಯ ಸಲ ಆದರೆ 200 ರೂಪಾಯಿ. ಇನ್ನೊಂದು ಉದಾಹರಣೆ ಕೊಡುತ್ತೇನೆ. ಒಂದು ಶಾಲೆಯಲ್ಲಿ ಒಬ್ಬ ಹುಡುಗ ಬೀಡಿ ಸೇದುತ್ತಿದ್ದನಂತೆ. ಕರೆದು ಮೇಷ್ಟ್ರು ಏನಯ್ಯಾ ಬೀಡಿ ಸೇದುತ್ತಿದ್ದುದ್ದು ನಿಜನಾ ಅಂದರು. ಹೌದು ಎಂದ. ಹಾಗಾದರೆ 25 ರೂಪಾಯಿ ಫೈನ್ ಕೊಡು ಅಂದರು. ಆಯಿತು ಅಂದ. ಎರಡನೆಯ ಸಲ ಸೇದಿದರೆ 50 ರೂಪಾಯಿ ಫೈನ್ ಅಂದರು ಆಯಿತು ಅಂದ. ಮೂರನೆಯ ಸಲ ಫೈನ್ 75ರೂಪಾಯಿ, ಆಯಿತು ಸಾರ್ ಅಂದ. ಆ ಹುಡುಗ ಸುಮ್ಮನೆ ನಿಂತಿದ್ದ, ಮೇಷ್ಟ್ರು ಏಕೆ ಅಂದರು. ಒಂದು ಕ್ಲಾರಿಫಿಕೇಶನ್ ಅಂದ. ಸೀಸನ್ ಟಿಕೆಟ್ ಇದೆಯಾ ಸಾರ್ ಅಂದ. ಹಾಗೆ ಈ ಮಂಥಲಿ ಪಾಸ್ ಇದ್ದಹಾಗೆ ಸೀಸನ್ ಟಿಕೆಟ್ ಇದೆಯಾ ಅಂದ. ಹಾಗೆ ನೀವು

ಫೆನಾಲ್ಟಿಯಲ್ಲಿ ಮೊದಲನೆಯ ಅಫೆನ್ಸ್ ಆದರೆ ನೂರು ರೂಪಾಯಿ, ಎರಡನೆಯ ಅಫೆನ್ಸ್ ಆದರೆ ಇನ್ನೂರು ರೂಪಾಯಿ, ಹಾಗಾದರೆ ಮಂಥಲಿ ಪಾಸ್ ಕೊಟ್ಟುಬಿಡಿ. ಫೆನಾಲ್ಟಿಯದು ಮಂಥಲಿ ಪಾಸ್ ಕೊಟ್ಟುಬಿಡಿ. ದಕ್ಕೋಸ್ಕರ ನಿಜವಾಗಲೂ ಕೂಡ ಇಚ್ಛಾಶಕ್ತಿ ಇದ್ದರೆ ಕಾಂಪೌಂಡಿಂಗ್ ಮತ್ತು ಫೆನಾಲ್ಟೀಸ್‌ದೂ ಕೂಡ ಗಂಭೀರವಾಗಿ ಪರಿಗಣಿಸಬೇಕೆಂದು ಹೇಳುತ್ತೇನೆ. ಈಗಾಗಲೇ ಅನೇಕ ಆಕ್ಟ್‌ಗಳಿವೆ. ಗೆಸ್ಟ್ ಕಂಟ್ರೋಲ್ ಆಕ್ಟ್ ಎಂದು ಇದೆಯಲ್ಲಾ ಸ್ವಾಮಿ. ಗೆಸ್ಟ್ ಕಂಟ್ರೋಲ್ ಆಕ್ಟ್ ಎಂದು ಇದೆ. ಅದನ್ನು ಜಾರಿಗೊಳಿಸಿದ್ದೀರಾ? ಸುಮಾರು 50 ಜನರಿಗಿಂತ ಜಾಸ್ತಿ ಊಟ ಹಾಕುವುದಕ್ಕೆ ಸಾಧ್ಯವಿಲ್ಲ ಎಂದು ಇದೆ. ಕಳೆದ ನಾಲ್ಕೈದು ವರ್ಷಗಳಿಂದ ಮುಂಚೆ ಈ ಪಕ್ಷ ಅಧಿಕಾರದಲ್ಲಿತ್ತು, ಈಗ ಆ ಪಕ್ಷ ಅಧಿಕಾರದಲ್ಲಿದೆ. ಅನೇಕ ಮಹನೀಯರುಗಳ ಮದುವೆಗೆ ನಾನು ಹೋದೆ. ಗೆಸ್ಟ್ ಕಂಟ್ರೋಲ್ ಆಕ್ಟ್ ಎನ್ನುವುದು ಏತಕ್ಕಾಗಿ ರಸ್ಟ್ ಹಿಡಿಯುತ್ತಿದೆ? ಅದನ್ನು ಪಾಲನೆ ಮಾಡದಿದ್ದರೆ ಆ ಆಕ್ಟ್‌ನ್ನಾದರೂ ತೆಗೆದು ಬಿಡಿ. ಈಗ ಪೊಲೀಸ್‌ನವರಿಗೆ ದನ ಹಿಡಿಯುವ ಆಕ್ಟ್ ಕೊಟ್ಟಿದ್ದೀರಿ. ಪೊಲೀಸ್‌ನವರು ಬಹಳಷ್ಟು ಫ್ರಿ ಇದ್ದರು ಅವರಿಗೆ ದನ ಹಿಡಿಯುವ ಕೆಲಸ ಕೊಟ್ಟಿದ್ದೀರಿ. ಈಗ ಸಿಗರೇಟ್ ಸೇದುವವರನ್ನು ಹಿಡಿಯುವ ಕೆಲಸ ಅವರಿಗೆ ಕೊಡುತ್ತಿದ್ದೀರಿ, ನಾಯಿ ಹಿಡಿಯುವ ಕೆಲಸವನ್ನು ಅವರು ಮಾಡುತ್ತಿದ್ದಾರೆ. ಸಾಂಗ್ಲಿಯಾನರವರೇ he has offered ನಾವು ನಾಯಿಯನ್ನು ಚೆನ್ನಾಗಿ ಹಿಡಿಯುತ್ತೇವೆಂದು. ಅದನ್ನು ಮಾಡುತ್ತಿದ್ದಾರೆ. ಈಗಾಗಲೇ ಅನೇಕ ಸ್ನೇಹಿತರು ಹೇಳಿದಹಾಗೆ, ಏನೊಂದು ಭ್ರಮೆಯಿದೆ ನಾವು ಸಿಗರೇಟ್ ಸೇದಿದರೆ ಬಹಳ ದೊಡ್ಡವರು ಆಗುತ್ತೇವೆ. ಸಲ್ಮಾನ್ ಖಾನ್ ಆಗಿ ಬಿಡುತ್ತೇವೆ ಆಮೀರ್ ಖಾನ್ ಆಗಿಬಿಡುತ್ತೇವೆ ಆದೊಂದು ಭ್ರಮೆ ಚಿಕ್ಕವಯಸ್ಸಿನಿಂದ. ಆ ಭ್ರಮೆಯನ್ನು ತೆಗೆದು ಹಾಕುವುದಕ್ಕೆ ನಾವು ಯಶಸ್ವಿಯಾಗದಿದ್ದರೆ ಥ್ರೂ ಎಜುಕೇಷನ್, ಥ್ರೂ ಪ್ರಾಪ್‌ಗೌಂಡ್ ಮುಖಾಂತರ ಆ ಭ್ರಮೆಯನ್ನು ನಾವು ತೆಗೆದುಹಾಕದಿದ್ದರೆ. ಕ್ರಿಕೆಟ್ ಮ್ಯಾಚ್ ನಡೆಸುವವರೆಲ್ಲಾ ಅವರೇ ಸ್ವಾಮಿ ದೊಡ್ಡ ದೊಡ್ಡ ಹೋರ್ಡಿಂಗ್, ಅವರ ಶರ್ಟ್‌ಮೇಲೆ ಪ್ಯಾಂಟ್ ಮೇಲೆ ಸಿಗರೇಟ್ ಕಂಪನಿನೇವಿಲ್ಸ್. ಯಾವರೀತಿ ಇನ್‌ಫ್ಲುಯೆನ್ಸ್ ಆಗುತ್ತಾ ಹೋಗುತ್ತಾರೆಂದರೆ ಅದನ್ನು ಹಾಕಿಕೊಂಡರೆ, ಅದನ್ನು ಸೇದಿದರೆ ನಾವು ಒಳ್ಳೆಯ ಬ್ಯಾಟ್ಸ್‌ಮೆನ್ ಆಗಬಹುದು ಎಂದು ಅನ್ನಿಸಬಹುದು. ಸರ್ಕಾರ ಈ ನಿಟ್ಟಿನಲ್ಲಿ ಈವೊಂದು ಖಾಯಿಲೆಯನ್ನು ತೆಗೆಯುವುದಕ್ಕೆ ಬಹಳ ಗಂಭೀರವಾಗಿ ಯೋಚನೆ ಮಾಡಬೇಕು. ಮಾನ್ಯ ಶ್ರೀನಿವಾಸಗೌಡರು ಹೇಳಿದರು, ತಂಬಾಕು ಬೆಳೆಗಾರರಿಗೆ ತೊಂದರೆಯಾಗುತ್ತದೆಂದು. ಒಂದು ಈ ಸಮಯದಲ್ಲಿ ಜ್ಞಾಪಕಕ್ಕೆ ಬರುವುದು ಗೋಪಾಲಕೃಷ್ಣ ಗೋಖಲೆ ವೈಸ್‌ರಾಯ್ ಕಮಿಷನ್‌ನಲ್ಲಿ ಇದ್ದಾಗ, ಆ ಕಮಿಷನ್‌ಗೆ ಒಂದು ಸಬ್ಜೆಕ್ಟ್ ಬಂತು. ಅಫೀಮನು ಚೈನಾಗೆ ರಫ್ತು ಮಾಡಿತರೆ ಭಾರತಕ್ಕೆ ಸಾಕಷ್ಟು ದುಡ್ಡು ಸಿಗುತ್ತದೆನ್ನುವ ವಿಷಯ ಬಂತು. ಗೋಪಾಲ ಕೃಷ್ಣ ಗೋಖಲೆಯವರು ಆವೊತ್ತು ಹೇಳಿದ್ದು, ಆಡಳಿತ ನಡೆಸಿದವರಿಗೆ ಎಲ್ಲರಿಗೂ ಕೂಡ ಜ್ಞಾಪಕವಿರಬೇಕು. ಬೇರೆ ದೇಶದ ಪ್ರಜೆಗಳನ್ನು ಅಮಲಿನಲಿಟ್ಟು ನಾವು ದುಡ್ಡು ಸಂಪಾದಿಸುವುದು ದೊಡ್ಡ ಅಪರಾಧ ಎಂದು ಹೇಳಿದರು. ಆದೇ ರೀತಿ ಯಾವುದೋ ಖಾಯಿಲೆಯಲ್ಲಿ ಪೀಡಿಸುವಂತಹ ಈ ಚಟಗಳಿಂದ ಯಾರಿಕೋ ತೊಂದರೆಯಾಗುತ್ತದೆಂದು ಉದಾಸೀನತೆಯನ್ನು ಅಲ್ಲಿ ತಳೆದು ಕಿದ್ವಾಯಿಗೆ ಹೋದಾಗಲೆಲ್ಲಾ ಲೊಚಗುಟ್ಟಿಕೊಂಡು ಬಂದು ಇದು ಆಗದಿರುವುದಕ್ಕೆ ಸರ್ಕಾರ ತನ್ನ ಪ್ರಾಮಾಣಿಕತೆ ಮತ್ತು ಇಚ್ಛಾಶಕ್ತಿಯನ್ನು ತೋರಿಸಬೇಕೆಂದು ಹೇಳಿ, ನಾವು ಆ ದೃಷ್ಟಿಯಲ್ಲಿ ಮೊದಲನೆಯ ಹೆಜ್ಜೆಯಿಡಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ. ಕೆ.ಎಂ.ಇಬ್ರಾಹಿಂ (ವಿಶ್ವ): ಮಾನ್ಯ ಉಪಾಧ್ಯಕ್ಷರೆ, ನನ್ನ ಕ್ಷೇತ್ರದಲ್ಲಿ ಬಹಳ ಜನ ಬೀಡಿ ಕಟ್ಟುವವರು ಇದ್ದಾರೆ. ನಾನು ಮಾತನಾಡದಿದ್ದರೆ ಊರಿಗೆ ಹೋಗುವುದು ಬೇಡವೆ? ಕರ್ನಾಟಕದಲ್ಲಿ ನನ್ನ ಕ್ಷೇತ್ರದಲ್ಲಿ ಬೀಡಿ ಕಟ್ಟುವವರು ಹೆಚ್ಚು ಜನ ಮತದಾರರು. ಲಕ್ಷಾಂತರ ಜನ ಬೀಡಿ ಕಟ್ಟುವವರಿದ್ದಾರೆ ಅವರ ಬಗ್ಗೆ ಮಾತನಾಡಲಿಕ್ಕೆ ನನಗೆ ಅವಕಾಶವನ್ನು ತಾವು ಕೊಡಬೇಕು. ಮಾನ್ಯ ಆರೋಗ್ಯಸಚಿವರು ಏನು ಧೂಮಪಾನ ನಿಷೇಧ ಕಾನೂನು ತಂದಿದ್ದಾರೆ ಅದರ ಬಗ್ಗೆ ಎರಡೂ ಮಾತಿಲ್ಲ. ಆದರೆ ಸಿಗರೇಟ್ ಮತ್ತು ಬೀಡಿಗಳಲ್ಲಿ ವ್ಯತ್ಯಾಸವಿದೆ. ಸಿಗರೇಟ್ ಆರೋಗ್ಯಕ್ಕೆ ಹೆಚ್ಚು ಹಾನಿಕರ. ಬೀಡಿ ಹೆಚ್ಚು ಹಾನಿಕರವಲ್ಲ. ನನ್ನ ಕ್ಷೇತ್ರದಲ್ಲಿ ಅದರಲ್ಲೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಡಿಮೆಯಿಲ್ಲವೆಂದರೆ ಆರೇಳು ಲಕ್ಷ ಜನ ಬೀಡಿ ಕೈಗಾರಿಗೆಯಿಂದ ಬದುಕುತ್ತಿದ್ದಾರೆ. ಅವರುಗಳೆಲ್ಲಾ ಇವತ್ತು ಬೀದಿಗೆ ಬರಬೇಕಾಗುತ್ತದೆ. ಮಕ್ಕಳು ಯಾರೂ ಬೀಡಿ ಸೇದುತ್ತಿಲ್ಲ ಈಗ. ಮಕ್ಕಳಿಗೆ ಸಿಗರೇಟ್ ಸೇದುವಂತಹದ್ದು ಫ್ಯಾಶನ್ ಆಗಿಬಿಟ್ಟಿದೆ. ಮಕ್ಕಳು ಯಾರು ಬೀಡಿ ಸೇದುವುದಿಲ್ಲ ವಯಸ್ಸಾದವರು ಮಾತ್ರ ಬೀಡಿ ಸೇದುತ್ತಾರೆ. ಈ ವಿಧೇಯಕದಲ್ಲಿ ಬೀಡಿಯನ್ನು ಬಿಟ್ಟು ಪಾಸ್ ಮಾಡಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

+ಶ್ರೀ. ಎಸ್. ಯೋಗಿಶ್ ಭಟ್(ಮಂಗಳೂರು): ಮಾನ್ಯ ಉಪಾಧ್ಯಕ್ಷರೆ, ಕಳೆದ ಅಧಿವೇಶನ ಸಂದರ್ಭದಲ್ಲಿ ವಿಧಾನ ಪರಿಷತ್ತಿನಲ್ಲಿ ಈ ಮಸೂದೆ ಅವಿರೋಧವಾಗಿ ಪಾಸ್ ಆಗಿದೆ ಎನ್ನುವಂಥ ಮಾಹಿತಿ ಸಿಕ್ಕಿದ ತಕ್ಷಣ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹತ್ತು ಸಾವಿರಕ್ಕಿಂತ ಮಿಗಿಲಾಗಿ ಬೀಡಿ ಕಾರ್ಮಿಕರು ಒಟ್ಟಾಗಿ ಸೇರಿಕೊಂಡು ತಮ್ಮ ನೋವನ್ನು ಹೇಳುವಂಥ ಒಂದು ಪ್ರಯತ್ನವನ್ನು ಮಾಡಿದರು. ಶಾಸಕರು ಮತ್ತು ಬೇರೆಬೇರೆ ಪ್ರಮುಖರನ್ನು ಭೇಟಿಮಾಡಿ ತಮ್ಮ ಅಳಲನ್ನು ಹೇಳುವಂಥ ಪ್ರಯತ್ನವನ್ನು ಅವರು ಮಾಡಿದರು. ಒಟ್ಟು ಸುಮಾರು 10 ಲಕ್ಷ ಬೀಡಿ ಕಾರ್ಮಿಕರು ಇದ್ದು 40ಲಕ್ಷ ಜನರು ಇವತ್ತು ಅದರಮೇಲೆ ಬದುಕಲಿಕ್ಕೆ ಅವಲಂಬಿತರಾಗಿದ್ದಾರೆ. ನಮಗೆ ಪ್ರಥಮವಾಗಿ ಬದಲಿ ಉದ್ಯೋಗವನ್ನು ಕೊಡುವಂಥ ವ್ಯವಸ್ಥೆಯನ್ನು ಮಾಡಿ ಅದರ ನಂತರ ಈ ಕಾನೂನನ್ನು ಪಾಸ್ ಮಾಡಿ ಎಂದು ಅವರು ನೋವಿನಿಂದ ಹೇಳುತ್ತಿದ್ದಾರೆ. ಅತ್ಯಂತ ಬಡತನದಲ್ಲಿರುವವರು, ಬಹುಶಃ ದಿವಸಕ್ಕೆ ಒಂದು ಸಾವಿರ ಬೀಡಿಯನ್ನು ಕಟ್ಟಿದರೆ ಬರುವಂಥ ಸಂಪಾದನೆಯಿಂದ ಗಂಜಿ ಊಟ ಮಾತ್ರ ಮಾಡಬಹುದು. ಅದಕ್ಕಿಂತ ಹೆಚ್ಚಿಗೆ ಏನೂ ಮಾಡುವಹಾಗಿಲ್ಲ. ಇನ್ನು ಮಕ್ಕಳಿಗೆ ವಿದ್ಯಾಭ್ಯಾಸ ಕೊಡುವುದು ಇತ್ಯಾದಿ ಯಾವುದೂ ಅವರಿಗೆ ಸಾಧ್ಯವಿಲ್ಲ. ಇಂತಹ ಕಷ್ಟಕರ ಸ್ಥಿತಿಯಲ್ಲಿ ನನ್ನ ಜಿಲ್ಲೆಯಲ್ಲಿ ಇರುವಂಥ ಬಡಜನರು ಇವತ್ತು ತೊಂದರೆ ಪಡುತ್ತಿದ್ದಾರೆ. ಅವರು ಹೇಳುವಂಥಾದ್ದು ಇಷ್ಟೇನೆ. ನಮಗೆ ಬದಲಿ ವ್ಯವಸ್ಥೆಯನ್ನು ಮಾಡಿಕೊಟ್ಟು ನಂತರ ತಾವು ಕಾನೂನನ್ನು ಪಾಸ್ ಮಾಡಿ ಎನ್ನುವಂಥ ನೋವನ್ನು ಅವರು ವ್ಯಕ್ತಪಡಿಸುತ್ತಿರುವುದನ್ನು ದಾಖಲುಮಾಡಿ, ತಮಗೆ ಒಂದೇಒಂದು ವಿಷಯವನ್ನು ಮನವರಿಕೆ ಮಾಡಬೇಕೆಂದು ಬಯಸುತ್ತೇನೆ. ಸಿಗರೇಟು ತಯಾರಿಕೆ ಏನಿದೆ ಇರು ಮೆಘಾಇಂಡಸ್ಟ್ರೀಸ್ ಅಥವಾ ದೊಡ್ಡದೊಡ್ಡ ಉದ್ಯಮಗಳಲ್ಲಿ ಬರುತ್ತದೆ. ಸಿಗರೇಟಿನ ಮೇಲೆ ಕಟ್ಟು ನಿಟ್ಟಿನ ಕ್ರಮ ತೆಗೆದುಕೊಳ್ಳಿ. ಈ ಕಾನೂನಿನ ಬಗ್ಗೆ ಆರೋಗ್ಯ ದೃಷ್ಟಿಯಿಂದ ಇದರ ಬಗ್ಗೆ ಎರಡನೇ ಮಾತಿಲ್ಲ. ಇದರ ಬಗ್ಗೆ ತಿಳುವಳಿಕೆ ಕೊಡುವಂಥಾದ್ದು, ಜನರಲ್ಲಿ ಪ್ರಜ್ಞೆಯನ್ನು ಮೂಡಿಸುವಂಥ ನಿಟ್ಟಿನಲ್ಲಿ ಯಾವರೀತಿ ಅವರನ್ನು ನಾವು ಎಜ್ಯುಕೇಟ್ ಮಾಡಬೇಕು, ಆ ರೀತಿ ಮಾಡೋಣ. ಆದರೆ ಕಟ್ಟುನಿಟ್ಟಾಗಿ ಇದನ್ನು ಅನುಷ್ಠಾನಕ್ಕೆ ತಂದರೆ ಖಂಡಿತವಾಗಿ ಅನೇಕ ಸಮಸ್ಯೆಗಳು ಉದ್ಭವವಾಗಬಹುದು. ಈ

ಸಂದರ್ಭದಲ್ಲಿ ನಾನು ರಾಜ್ಯಸರ್ಕಾರವನ್ನು ಇಷ್ಟೇ ಬೇಡುವಂಥಾದ್ದು. ತಮ್ಮಲ್ಲಿ ಬಹುಮತ ಇದೆ. ತಾವು ಇದನ್ನು ಪಾಸ್ ಮಾಡುತ್ತೀರಿ. ಆದರೆ ಪಾಸ್ ಮಾಡುವ ಮುಂಚೆ, ಹತ್ತು ಲಕ್ಷ ಕಾರ್ಮಿಕರಿಗೆ ಬದಲಿ ಉದ್ಯೋಗ ವ್ಯವಸ್ಥೆಯನ್ನು ಮಾಡಿಕೊಡುವ ಜವಾಬ್ದಾರಿ ತಮಗೆ ಇದೆ ಎನ್ನುವಂಥ ವಿನಂತಿಯನ್ನು ಈ ಸಂದರ್ಭದಲ್ಲಿ ಮಾಡುವುದಕ್ಕೆ ಬಯಸುತ್ತೇನೆ. ಎಲ್ಲಿಯತನಕ ಈ ಉದ್ಯೋಗ ಬದಲಿ ವ್ಯವಸ್ಥೆಯನ್ನು ಮಾಡುವುದಕ್ಕೆ ಆಗುವುದಿಲ್ಲವೋ ಅಲ್ಲಿಯತನಕ ತಮಗೆ ನೈತಿಕವಾಗಿ ಈ ಬಿಲ್‌ನ್ನು ಪಾಸ್ ಮಾಡುವಂಥ ಯಾವ ಅಧಿಕಾರವೂ ಇಲ್ಲ ಎನ್ನುವಂಥ ಮಾತನ್ನು ಹೇಳಿ ಈ ನಿಟ್ಟಿನಲ್ಲಿ ಇದು ತಕ್ಷಣಕ್ಕೆ ಅವಶ್ಯಕವೇ ಎಂದು ಹೇಳುವಂಥ ಪ್ರಶ್ನೆ ಉದ್ಭವವಾಗುತ್ತದೆ. ಈಗ ಯಾವುದೇ ಆರಾಧನಾ ಕ್ಷೇತ್ರದಲ್ಲಿ ಯಾರೂ ಬೀಡಿ ಸೇದುವುದಿಲ್ಲ. ಆಸ್ಪತ್ರೆಗಳಲ್ಲಿ ಯಾರೂ ಇದನ್ನು ಮಾಡುವುದಿಲ್ಲ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಯಾರೂ ಮಾಡುತ್ತಿಲ್ಲ. ಪುನರಪಿ ಇದನ್ನು ತಂದು ಒಂದು ರೀತಿಯಲ್ಲಿ ನೋವು ಇರುವಂಥ ಅವರ ಭಾವನೆಗಳಿಗೆ ಇನ್ನೂ ನೋವು ಜಾಸ್ತಿಮಾಡುವುದಕ್ಕೆ ಹೋಗುವಂಥ ವಿಚಾರ ಇದಾಗಿದೆ. ಆದ್ದರಿಂದ ದಯವಿಟ್ಟು ಹತ್ತು ಲಕ್ಷ ಕಾರ್ಮಿಕರಿಗೆ ಬದಲಿ ಉದ್ಯೋಗ ವ್ಯವಸ್ಥೆಯನ್ನು ಮಾಡಿಬೇಕೆಂದು ಈ ಸಂದರ್ಭದಲ್ಲಿ ಮತ್ತೊಮ್ಮೆ ಹೇಳುವುದಕ್ಕೆ ಇಚ್ಛಿಪಡುತ್ತೇನೆ.

+ಶ್ರೀ. ಕೆ.ಎನ್.ಸುಬ್ಬಾರೆಡ್ಡಿ (ಬಸವನಗುಡಿ): ಮಾನ್ಯ ಉಪಾಧ್ಯಕ್ಷರೆ, I was the first man to file a public interest litigation in the High Court. ಏಕೆಂದರೆ ಇದನ್ನು ಸುಪ್ರೀಂ ಕೋರ್ಟ್ ತೀರ್ಮಾನ ಮಾಡಿದಮೇಲೆ ಹೈಕೋರ್ಟಿನವರು ಡಿಸ್‌ಪೋಸ್ ಮಾಡಿದರು. ಇದು ಬಹಳ ಮುಖ್ಯವಾದ ವಿಷಯ. ಏಕೆಂದರೆ ಇದನ್ನು ತಂದಿರುವುದು ನಿಜವಾಗಿಯೂ ಶ್ಲಾಘನೀಯವಾದದ್ದು. ಇಲ್ಲಿ ಏನಾಗಿದೆ ಎಂದರೆ - Karnataka Prohibition of smoking & Protection of Health of non-smokers ಇದು ಬಹಳ ಮುಖ್ಯವಾದದ್ದು. ಏಕೆಂದರೆ ಯಾವ ರೆಸ್ಟೋರೆಂಟ್‌ನ್ನು ನೋಡಿ, ಅಲ್ಲಿ ಧೂಮಪಾನ ಮಾಡುತ್ತಾರೆ. ಮಾನ್ಯ ಮುಖ್ಯಮಂತ್ರಿಗಳು ಕೋಶೀಸ್‌ಗೆ ಹೋದಾಗ ನೋಡಿದ್ದರಂತೆ. ಅಲ್ಲಿ ಬರೇ ಹೊಗೆ ಇರುತ್ತದೆ ಎಂದು ಅವರು ಹೇಳಿದರು. ಇಂತಹ ಒಂದು ಪರಿಸ್ಥಿಯಲ್ಲಿ ಏನು ಮಾಡಬೇಕು ಎಂದರೆ ಇದನ್ನು ನಿಜವಾಗಿಯೂ ಪ್ರೊಹಿಬಿಟ್ ಮಾಡಬೇಕು. ಈಗ ವಕೀಲರ ಸಂಘದಲ್ಲಿ ಪ್ರೊಹಿಬಿಟ್ ಮಾಡಿದ್ದೇವೆ. ಅಲ್ಲಿ ಯಾರೂ ಒಳಗಡೆ ಸ್ಮೋಕ್ ಮಾಡುವುದಿಲ್ಲ ಮಾಡುವುದಿದ್ದರೆ ಹೊರಗಡೆ ಮಾಡಬೇಕು ಮತ್ತು ಅಲ್ಲಿ. 'ಸ್ಮೋಕಿಂಗ್ ಜೋನ್ ಅಂತಾನೇ ಮಾಡಿದ್ದೇವೆ. ಆದ್ದರಿಂದ ಇದು ಬಹಳ ಮುಖ್ಯವಾದದ್ದು. ಇನ್ನೊಂದು ಏನೆಂದರೆ ಇಲ್ಲಿ ಶಬ್ದವನ್ನು ಉಪಯೋಗಿಸುವಾಗ' ಕೋರ್ಟ್ ಬಿಲ್ಡಿಂಗ್ ಎಂದು ಹಾಕಿಬಿಟ್ಟಿದ್ದಾರೆ. ಸೆಕ್ಷನ್-2 (ಎ)(ಬಿ)(ಸಿ) ಯಲ್ಲಿ 'ಪಬ್ಲಿಕ್ ಆಫೀಸ್‌ಸ್, ಕೋರ್ಟ್‌ಬಿಲ್ಡಿಂಗ್ಸ್' ಎಂದು ಇದೆ. ಇದನ್ನು 'ಕೋರ್ಟ್ ಪ್ರಿಮಿಸಸ್' ಎಂದು ಸ್ವಲ್ಪ ಬದಲಾವಣೆ ಮಾಡಿಕೊಂಡರೆ ಒಳ್ಳೆಯದು. ಆಮೇಲೆ ಸೆಕ್ಷನ್ 7 ರಲ್ಲಿ ಏನು ಹೇಳಿದ್ದೀರಿ ಎಂದರೆ ಪೊಲೀಸಿನವರು ಅವನು ಸ್ಮೋಕ್ ಮಾಡಲೇಬೇಕೆಂದಾಗ ಅವನನ್ನು ಪೊಲೀಸರು ಬಂದು ಕರೆದುಕೊಂಡು ಹೋಗಬೇಕು ಎಂದು ಮಾಡಿದ್ದೀರಿ. ಇದನ್ನು ಮಿಸ್‌ಯೂಸ್ ಆಗದಹಾಗೆ ಮಾಡಬೇಕಾಗುತ್ತದೆ. ಇದು ಬಹಳ ಮುಖ್ಯವಾದದ್ದು. ಮತ್ತು ಸುಪ್ರೀಂ ಕೋರ್ಟ್ ಡೈರೆಕ್ಷನ್ ಕೊಟ್ಟು ರಾಜ್ಯಸರ್ಕಾರಗಳು ಇದನ್ನು ಮಾಡಿರುವಂಥಾದ್ದು ನಿಜವಾಗಿಯು ಕೂಡ ಇದು ಶ್ಲಾಘನೀಯವಾದ ಒಂದು ಮಸೂದೆ. ಇದಕ್ಕೆ ಎಲ್ಲರ ಹೃತ್ಪೂರ್ವಕ ಸ್ವಾಗತ ಇದೆ.

ಶ್ರೀ. ಕೆ.ಪ್ರಭಾಕರ ಬಂಗೇರ (ಬೆಳ್ತಂಗಡಿ): ಮಾನ್ಯ ಅಧ್ಯಕ್ಷರೇ, ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ಬೀಡಿ ಉದ್ಯಮದಿಂದ ಜೀವನ ಸಾಗಿಸುವಂಥ ಲಕ್ಷಾಂತರ ಕುಟುಂಬಗಳು ಇವೆ. ಈ ಮಸೂದೆಯನ್ನು ತಂದರೆ ಅವರಿಗೆ ಬಹಳ ತೊಂದರೆಯಾಗುತ್ತದೆ. ಎನ್ನುವ ಗಾಬರಿ ಹಟ್ಟಿಕೊಂಡಿದೆ. ಇಂತಹ ಗಾಬರಿಗೆ ದಯವಿಟ್ಟು ಅವಕಾಶ ಮಾಡಿಕೊಡಬಾರದು. ಆದ್ದರಿಂದ ಅವರಿಗೆ ಬದಲಿ ವ್ಯವಸ್ಥೆ ಆಗುವವರೆಗೆ ಈ ಒಂದು 'ಬಿಲ್‌ನ್ನು ಪೆಂಡಿಂಗ್ ಇಟ್ಟು, ಆ ಮೂಲಕ ಈ ಜನರಿಗೆ ಉಪಕಾರ ಮಾಡಬೇಕೆಂದು ಕೋರಿಕೆ. ಇದರ ಜತೆಯಲ್ಲಿ' ಇದರ ಜತೆಗೆ ಸರ್ಕಾರ ಬದಲಿ ಉದ್ಯೋಗ ವ್ಯವಸ್ಥೆ ಬಗ್ಗೆ ಯೋಚನೆ ಮಾಡಬೇಕು. ಇದರ ಬಗ್ಗೆ ಸರ್ಕಾರ ಯೋಚನೆ ಮಾಡಿದಾಗ ಮಾತ್ರ ಇದು ಸಾಧ್ಯವೆಂದು ಈ ಸಂದರ್ಭದಲ್ಲಿ ಹೇಳುತ್ತೇವೆ. ಈ ಎರಡು ವಿಚಾರಗಳನ್ನು ನಾನು ಸಭೆಯ ಗಮನಕ್ಕೆ ತರುತ್ತಿದ್ದೇನೆ.

+ಶ್ರೀ. ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು): ಮಾನ್ಯ ಅಧ್ಯಕ್ಷರೇ, ಸದನದ ಎಲ್ಲಾ ಸದಸ್ಯರುಗಳಿಂದ ಈ ಒಂದು ಮಸೂದೆಗೆ ಅಪೂರ್ವವಾದಂಥ ಸ್ವಾಗತ ಸಿಕ್ಕಿದೆ. ಅದಕ್ಕೆ ಎಲ್ಲಾ ಸದಸ್ಯರುಗಳಿಗೆ ಕೃತಜ್ಞತೆಯನ್ನು ಸಲ್ಲಿಸುತ್ತೇನೆ. ಚರ್ಚೆ ಮಾಡಿದಂಥ ಸಂದರ್ಭದಲ್ಲಿ ಅನೇಕ ಸಲಹೆಗಳನ್ನು ಅವರು ನೀಡಿದ್ದಾರೆ. ಅದನ್ನು ನಾವು ಗಮನದಲ್ಲಿಟ್ಟು ಕೊಂಡ ನಿಯಮಾವಳಿಗಳನ್ನು ಮಾಡತಕ್ಕಂಥ ಸಂದರ್ಭದಲ್ಲಿ ಎಲ್ಲೆಲ್ಲಿ ಸಾಧ್ಯವೋ ಅದನ್ನು ಅಳವಡಿಸಿಕೊಳ್ಳತಕ್ಕಂಥ ಪ್ರಯತ್ನ ಮಾಡುತ್ತೇವೆ. ಒಟ್ಟಾರೆ ಜನರ ಹಿತ, ಜನರ ಆರೋಗ್ಯ ಹಿತ ನಮ್ಮ ಮುಖ್ಯವಾದಂಥ ಗುರಿ. ಇದನ್ನು ಸಾಧಿಸಬೇಕಾದರೆ ಇಂತಹ ಕಾನೂನುಗಳ ಅವಶ್ಯಕತೆ ಇದೆ. ನಮ್ಮ ವಿಶ್ವೇಶ್ವರ ಹೆಗಡೆಯವರು ಭಾಷಣ ಮಾಡುತ್ತಾ ಹಲವಾರು ವಿಷಯಗಳನ್ನು ಹೇಳಿದರು. ಅವರು ತುಂಬಾ ನಿರಾಶೆಯಲ್ಲಿದ್ದಾರೆ ಎಂದು ಕಾಣುತ್ತದೆ. ಯಾವಾಗಲೂ ನಿರಾಶರಾಗ ಬಾರದು, ಆಶಾವಾದಿಗಳಾಗಬೇಕು. ಸುಧಾರಣೆ ತರುತ್ತೇವೆ, ಬದಲಾವಣೆ ಮಾಡುತ್ತೇವೆ, ಸಮಾಜದಲ್ಲಿ ಪರಿವರ್ತನೆ ನಡೆಯುತ್ತದೆ ಎನ್ನುತಕ್ಕಂಥ ಇಚ್ಛಾಶಕ್ತಿ ಮನುಷ್ಯನಲ್ಲಿ ಇದ್ದರೆ ಬದಲಾವಣೆ ಸಾಧ್ಯ. ಮನುಷ್ಯ ಎಂದರೆ ಸಮಾಜ. ಈ ಸಮಾಜದ ಗರ್ಭದಲ್ಲಿ ಒಳ್ಳೆಯದು ಅಡಗಿದೆ, ಕೆಟ್ಟದ್ದೂ ಅಡಗಿದೆ. ಅದು ಬೆಳವಣಿಗೆ ಕಾಲಕ್ಕೆ ಒಳ್ಳೆಯದ್ದನ್ನೇ ದೊಡ್ಡದಾಗಿ ಮಾಡಿಕೊಂಡು ಕೆಟ್ಟದ್ದನ್ನು ಗೌಣವಾಗಿ ಇಟ್ಟುಕೊಂಡಿರಬಹುದು. ಒಂದೊಂದುಸಾರಿ ಕೆಟ್ಟದ್ದಿರುವುದರಿಂದ ಸಾಮಾಜಿಕ ವ್ಯವಸ್ಥೆಗೆ, ತನ್ನ ಜೀವನಕ್ಕೆ ಅಪಾಯಕಾರಿ ಎಂದು ಕಂಡಾಗ ಅದನ್ನು ಪರಿವರ್ತನೆ ಮಾಡತಕ್ಕಂಥ ಕೆಲಸವನ್ನು ಅದೇ ಮನುಷ್ಯ ಮಾಡುತ್ತಾನೆ, ಅದೇ ಸಮಾಜವೇ ಮಾಡುತ್ತದೆ. ಇದೇ ಪರಿವರ್ತನೆಯ ದಾರಿಯಲ್ಲಿ ಹೋಗತಕ್ಕಂಥ ವಿಚಾರಗಳು. ಆದ್ದರಿಂದ ಇದೆಲ್ಲ ಬದಲಾವಣೆಗಳು ಆಗುತ್ತದೆ. ಮಾನ್ಯ ಸುರೇಶ್‌ಕುಮಾರ್ ಅವರು ಗೋಪಾಲಕೃಷ್ಣ ಗೋಖಲೆಯವರು ಹೇಳಿದ ಮಾತನ್ನು ಹೇಳಿದರು. ಹೀಗೆ ಆಯಾಯ ಕಾಲಕ್ಕೆ, ಆಯಾಯ ಸಂದರ್ಭದಲ್ಲಿ ವಿಚಾರವಂತರು ಇಂತಹ ವಿಚಾರಗಳನ್ನು ಹೇಳಿದ್ದನ್ನು ಪರಿವರ್ತನೆಗೆ, ಬದಲಾವಣೆಗೆ ಬೇಕಾದಂಥ ಪೂರಕವಾದಂಥ ಕಾನೂನು, ಇತ್ಯಾದಿಗಳನ್ನು ಮಾಡಿಕೊಂಡು ಬಂದಿದ್ದಾರೆ. ಸಮಾಜ ಎಂದರೆ ಯಾವುದು? ಹಿಂದೆ ಯಾರೋ ಒಂದು ರಾಜ್ಯವನ್ನು ಕಟ್ಟಿಕೊಳ್ಳುವುದು, ಅದನ್ನು ಒಬ್ಬ ಆಳುವುದು. ಆಳುವವನು ತನ್ನದೇ ಆದ ಕಾನೂನನ್ನು ತರುವುದು, ಅದನ್ನು ಬೇರೆಯವರು ಬದಲಾವಣೆ ಮಾಡುವಂಥಾದ್ದು ನಡೆದುಕೊಂಡೇ ಬಂದಿದೆ. ಸಾಮಾಜಿಕವಾದಂಥ ಒಂದು ವ್ಯವಸ್ಥೆಯಲ್ಲಿ ನಾವು ಬದುಕಿದ್ದೇವೆ. ಆದ್ದರಿಂದಲೇ ಇಂತಹ ಕಾನೂನುಗಳ ಅವಶ್ಯಕತೆ ಇವತ್ತು ನಮಗೆ ಇದೆ. ಇಲ್ಲಿ ಈ ಕಾನೂನು ಬಹಳ ಸೀಮಿತವಾಗಿದೆ.

ಬೀಡಿ ಕಾರ್ಮಿಕರ ದೃಷ್ಟಿಯಿಂದ ಮಂಗಳೂರಿನ ಎಲ್ಲಾ ಸ್ನೇಹಿತರು ಹೇಳಿದ್ದಾರೆ. ನಿಮಗೆ ಆ ಭಯ ಇರಬೇಕು. ಆದರೆ ಇದರಲ್ಲಿ ಸೀಮಿತವಾಂದಂಥ ವಿಚಾರ ಇದೆ. ಇಡೀ ಬೀಡಿ ಸೇದುವವರನ್ನು ಅಥವಾ ಸಿಗರೇಟು ಸೇದುವವರನ್ನು ನಾವು ಪ್ರತಿಬಂಧಿಸುವುದಕ್ಕೆ ಹೋಗಿಲ್ಲ. ನಾವು ಇಲ್ಲಿ ಏನು ಮಾಡಿದ್ದೇವೆ ಎಂದರೆ ಒಂದು 'ಸಾರ್ವಜನಿಕ ಕೆಲಸದ ಅಥವಾ ಬಳಕೆಯ ಸ್ಥಳ' ಎರಡನೇಯದು 'ಸಾರ್ವಜನಿಕ ಸೇವಾ ವಾಹನ' ಇದು ಇರತಕ್ಕಂಥಾದ್ದು. ಅದೂ ಕೂಡ ಅಲ್ಲಿ ಬೋರ್ಡುಗಳನ್ನು ಹಾಕಿರಬೇಕು ಎಂದು ಇದೆ. ಅಂತಹ ಕಡೆ ಇದು ಇರುತ್ತದೆ. ಹಿಂದೆ ಈ ನಿರ್ಬಂಧಗಳು ಇದ್ದವು ಎಂದು ಕೆಲವರು ಹೇಳಿದರು. ಅದು ಸಿನಿಮಾ ಥಿಯೇಟರ್‌ಗೆ ಸೀಮಿತವಾದದ್ದು ಇತ್ತು. ಇವತ್ತು ಸಿನಿಮಾ ಥಿಯೇಟರ್‌ನಲ್ಲಿ ಬೀಡಿ, ಸಿಗರೇಟು ಸೇದಿದರೆ ತಕ್ಷಣವೇ ಹಿಡಿಯುತ್ತಾರೆ ಮತ್ತು ಅವರ ಮೇಲೆ ಕೇಸು ಹಾಕುತ್ತಾರೆ. ಹೀಗೆ ಇವತ್ತು ಪೊಲೀಸ್ ಆಕ್ಟ್‌ನಲ್ಲಿ ಅದು ಇದೆ. ಅದು ಸೀಮಿತವಾಗಿದೆ. ಆದ್ದರಿಂದ ಇದು ಕಾಂಪ್ರಹೆನ್ಸಿವ್ ಆಗಿ ಇರುವುದರಿಂದ ಇದರ ಅಗತ್ಯ ಇದೆ. ಕೆಲವು ಬದಲಾವಣೆಗಳನ್ನು ಹೇಳಿದ್ದಾರೆ. ಒಂದು ಕೋರ್ಟ್‌ಬಿಲ್ಡಿಂಗ್ ಎಂದರೆ ಅದು ಪ್ರಿಮಿಸಸ್ ಎಂದು ಇರುತ್ತದೆ. ವಿಧಾನಸೌಧ ಎಂದರೆ, ಅಸೆಂಬ್ಲಿಹಾಲ್ ಎಂದರೆ ಪ್ರೀಸಿಂಕ್ಟ್ ಎಲ್ಲಾ ಸೇರುತ್ತದೆ. ತಾವು ಹೇಳಿದಂತೆ ಬಿಲ್ಡಿಂಗ್ ಶಾಲೆ ಇವುಗಳ ಏರಿಯಾಗಳನ್ನು ನಾವು ಹೇಳಬೇಕಾಗುತ್ತದೆ. ಟೆರಿಟೋರಿಯಲ್ ಜುರಿಸಿಡಿಷನ್ ಬಗ್ಗೆ ಹೇಳಬೇಕಾಗುತ್ತದೆ. ಆದ್ದರಿಂದ ಆ ರೀತಿ ನಿಯಮಾವಳಿಗಳನ್ನು ಮಾಡುವಾಗ ಅವುಗಳನ್ನು ಅಳವಡಿಸಿಕೊಳ್ಳತಕ್ಕಂಥಾದ್ದು ಮಾಡುತ್ತೇವೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ ಇಲ್ಲಿ ಒಂದು 'ಕಾಂಪೌಂಡ್' ಮಾಡುವ ವಿಚಾರದಲ್ಲಿ ಮಾನ್ಯ ಸುರೇಶ್‌ಕುಮಾರ್ ಅವರು ಹೇಳಿದರು. ಈಗ ಫಾರೆಸ್ಟ್ ಆಕ್ಟ್‌ನಲ್ಲಿ ಕಾಂಪೌಂಡ್ ಮಾಡುವುದು ಇದೆ. ಈಗ ಒಬ್ಬರು ಬೀಡಿ ಅಥವಾ ಸಿಗರೇಟು ಸೇದುತ್ತಾ ಇರುತ್ತಾನೆ. ಅವನನ್ನು ಹಿಡಿದು ಪೊಲೀಸ್‌ಸ್ಟೇಷನ್‌ಗೆ ಕರೆದುಕೊಂಡುಹೋಗುತ್ತಾರೆ. ಅವನು ತನ್ನ ತಪ್ಪನ್ನು ಒಪ್ಪಿಕೊಂಡರೆ ಮತ್ತು ದಂಡ ಕೊಟ್ಟರೆ, ಅದನ್ನು ತೆಗೆದುಕೊಂಡು ಆತನನ್ನು ಕಳುಹಿಸುವುದು, ಅಷ್ಟೆ ತಪ್ಪನ್ನು ಒಪ್ಪಿಕೊಂಡು ದಂಡಕೊಟ್ಟರೆ, ಕೋರ್ಟಿಗೆ ಹೋಗುವ ಬದಲು ಅಲ್ಲೇ ಇತ್ಯರ್ಥ ಮಾಡುವುದಕ್ಕೆ ಫಾರೆಸ್ಟ್ ಆಕ್ಟ್‌ನಲ್ಲಿ ಇವತ್ತು ಅವಕಾಶ ಇದೆ. ಏಕೆಂದರೆ ಈ ಸುಧಾರಣೆಯನ್ನು ತರತಕ್ಕಂಥಾದ್ದರ ಬಗ್ಗೆ ನಾವು ಎಲ್ಲರೂ ಸಾಕಷ್ಟು ತಿಳಿದುಕೊಂಡಿದ್ದೇವೆ. ಇವತ್ತು ಪಾನನಿರೋಧ ಜಾರಿಮಾಡುವ ಬಗ್ಗೆ ಅನೇಕ ಪ್ರಯೋಗಗಳು ಆದವು. ಇವೆಲ್ಲಾ ಇದ್ದರೂ ಅದು ಬಹಳಷ್ಟು ಯಶಸ್ವಿಯಾಗುವುದಿಲ್ಲ. ಇಲ್ಲಿ ಬೀಡಿ ಕಾರ್ಮಿಕರ ದೃಷ್ಟಿಯಿಂದ ಇದರಲ್ಲಿ ಕೆಲವನ್ನು ನಾವು ಬಿಟ್ಟಿದ್ದೇವೆ. ಬೀಡಿ ಪ್ಯಾಕಿಂಗ್ ಮಾಡತಕ್ಕದ್ದನ್ನು, ಜಾಹೀರಾತು ಇದ್ದರೆ ಇದು ಅದಕ್ಕೆ ಅನ್ವಯಿಸುವುದಿಲ್ಲ. ಸಿಗರೇಟು ಪ್ಯಾಕಿಂಗ್, ಜಾಹೀರಾತು ಇದ್ದರೆ ಅದನ್ನು ನಾವು ಇಲ್ಲಿ ಎಕ್ಸಂಪ್ಟ್ ಮಾಡಿದ್ದೇವೆ. ಕಾರಣ ಏನೆಂದರೆ ಈ ಬೀಡಿ ಕಾರ್ಮಿಕರು, ಈ ಬೀಡಿ ಕೆಲಸಗಾರರು ಇದ್ದಾರಲ್ಲಾ ಅವರ ರಕ್ಷಣೆಯಾಗಬೇಕು, ಅವರ ಕಸುಬಿಗೆ, ಅವರ ದಂಧೆಗೆ ಇದು ಮಾರಕವಾಗಬಾರದು ಎನ್ನುವ ಕಾರಣಕ್ಕಾಗಿ ಅಲ್ಲಿ ವಿನಾಯಿತಿಯನ್ನು ನಾವು ನೀಡಿದ್ದೇವೆ. ಆದರಿಂದ ಆ ಒಂದು ಭಯ ನಮ್ಮ ಮಂಗಳೂರು ಮತ್ತು ಆ ಭಾಗದ ಜನರಿಗೆ ಇರಬಾರದು, ಸಮಾಧಾನದಿಂದ ಊರಿಗೆ ಬೀಡಿ ಕಟ್ಟುವವರಿಗೆ ಏನೂ ತೊಂದರೆಯಾಗುವುದಿಲ್ಲ ಬೀಡಿ ವ್ಯಾಪಾರ ಮಾಡುವವರಿಗೆ ಏನೂ ತೊಂದರೆ ಇಲ್ಲ ಇದು

ಏನಿದ್ದರೂ ಶಾಲಾ ಕಾಲೇಜುಗಳಲ್ಲಿ ಕೋರ್ಟ್‌ಗಳಲ್ಲಿ ಕಛೇರಿಗಳಲ್ಲಿ ಹೋಟೇಲ್‌ಗಳಲ್ಲಿ ಇರತಕ್ಕಂಥಾದ್ದಕ್ಕೆ ಅಲ್ಲಿ ಸೇದುವವರಿಗೆ ಪ್ರತಿಬಂಧಕವಾಗುತ್ತದೆ.

ಶ್ರೀ. ಎನ್ ಯೋಗಿಶ್ ಭಟ್: ಮಾನ್ಯ ಅಧ್ಯಕ್ಷರೇ,ಇಡೀ ಕಾರ್ಮಿಕರ ಕಲ್ಯಾಣದ ಬಗ್ಗೆ ಒಂದು ಮಸೂದೆ ತಂದು ಅದರ ನಂತರ ಇಂಥಾದ್ದು ಮಸೂದೆ ತಂದರೆ ತುಂಬಾ ಸ್ವಾಗತ ಇತ್ತು

ಶ್ರೀ. ಕಾಗೋಡು ತಿಮ್ಮಪ್ಪ : ಅದನ್ನು ಮಾಡಬೇಕಾದ ಅಗತ್ಯ ಇದೆ. ನಾನು ಒಪ್ಪುತ್ತೇನೆ. ಒಟ್ಟಿನಲ್ಲಿ ಇದರ ಉದ್ದೇಶವನ್ನು ಎಲ್ಲರೂ ಸ್ವಾಗತಿಸಿದ್ದಾರೆ. ಅದನ್ನು ಕಾರ್ಯಗತ ಮಾಡುವ ನಿಟ್ಟಿನಲ್ಲಿ ನಾವು ಮಾಡೋಣ.

ಶ್ರೀ. ಕೆ. ಜಯಪ್ರಕಾಶ್ ಹೆಗಡೆ : ಇಲ್ಲಿ ಒಂದು ಸ್ಮೋಕಿಂಗ್ ರೂಮ್ ಮಾಡಿಸಬೇಕಾಗುತ್ತದೆ.

ಶ್ರೀ. ಕಾಗೋಡು ತಿಮ್ಮಪ್ಪ : ತಾವು ಏನು ಹೇಳಿದಿರಲ್ಲಾ ಅದು ಅವಶ್ಯಕ. ನಾವು ಇದನ್ನು ತರುವುದಕ್ಕೆ ಹೊರಟಾಗ ನಾವು ಇದನ್ನು ಸಂಪೂರ್ಣವಾಗಿ ನಿಲ್ಲಿಸುವುದಕ್ಕೆ ಆಗುವುದಿಲ್ಲ. ಈ ಚಟಗಳು ಅಂದರೆ ಮನುಷ್ಯನಿಗೆ ಹೇಗೆ ಅಂಟಿಕೊಂಡು ಬಂದಿದ್ದಾವೋ ಏನೋ ಗೊತ್ತಿಲ್ಲ. ನಮ್ಮಂತಹ ಸಮಾಜದಲ್ಲಿ ವಿದ್ಯಾವಂತರ ಸಂಖ್ಯೆ ಕಡಿಮೆ ಇದೆ. ಇದು ಮೂಢನಂಬಿಕೆಯ ಸಮಾಜ ಇಲ್ಲಿ ಬದಲಾವಣೆಯಾಗುವುದು ಸ್ವಲ್ಪನಿಧಾನವಾಗುತ್ತದೆ ಎಂದು ತಿಳಿದುಕೊಂಡಿದ್ದೆ. ಆದರೆ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ನೂರಕ್ಕೆ ನೂರರಷ್ಟು ಜನ ವಿದ್ಯಾವಂತರಿದ್ದಾರೆ. ಐಶ್ವರ್ಯವಂತರಾಗಿದ್ದಾರೆ. ಇಡೀ ಸಮಾಜವೇ ಬದಲಾವಣೆಯಾಗಿದೆ. ಅಂತಹ ಸಮಾಜದಲ್ಲಿಯೇ ಸಂಪೂರ್ಣವಾಗಿ ನಿಷೇಧ ಮಾಡಲಿಕ್ಕೆ ಆಗಲಿಲ್ಲ. ಅದರಿಂದ ನಿರಂತರವಾಗಿ ನಡೆಯುವಂತಹ ಈ ಪ್ರಯೋಗಗಳು ಈ ಪ್ರಯೋಗವನ್ನು ನಾವು ಮಾಡೋಣ. ಎಲ್ಲಿ ಈ ಮೂಢನಂಬಿಕೆಗಳಿಂದ ಬಳಲುತ್ತಿದೆ ಇದನ್ನು ಪಾರು ಮಾಡಬೇಕಾದರೆ ನಾವು ಬದಲಾವಣೆ ತರತಕ್ಕಂಥ ಸಂದರ್ಭದಲ್ಲಿ ಇಚ್ಛಾಶಕ್ತಿ ಬಹಳವಾಗಿ ಬೇಕಾಗುತ್ತದೆ. ಈಗ ಕೆಲವರು ಕಾಫಿ ಕುಡಿಯುತ್ತಾರೆ. ಕೆಲವರು ಒಪ್ಪುತ್ತಾರೆ, ಕೆಲವರು ಒಪ್ಪುವುದಿಲ್ಲ. ಒಟ್ಟಿನಲ್ಲಿ ಈ ಶಾಸನ ಸ್ವಾಗತ ಪಡೆದಿದೆ. ಅವರು ಹೇಳಿದ ಹಾಗೆ ಕೋರ್ಟ್ ಪ್ರಿಮಿಸಿಸ್ ಎಂದು ಮಾಡಬೇಕು. ಇಲ್ಲದಿದ್ದರೆ ಕೋರ್ಟ್‌ಬಿಲ್ಡಿಂಗ್ ಎಂದು ಆಗುತ್ತದೆ. ಇಂಥಾದ್ದನ್ನು ನಾವು ನಮ್ಮ ರೂಲ್ಸ್‌ನಲ್ಲಿ ಅಳವಡಿಸಿಕೊಳ್ಳುತ್ತೇವೆ. ಆ ದೃಷ್ಟಿಯಿಂದ ನಾನು ಎಲ್ಲರಿಗೂ ಅಭಿನಂದನೆಗಳನ್ನು ಹೇಳಿ, ಈ ಮಸೂದೆಯನ್ನು ಮಂಜೂರು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ. ಎಸ್ ಎಸ್ ಪಾಟೀಲ್: ಅಪರಾಧ ರಾಜಿ ಬಗ್ಗೆ ಹೇಳಲಿಲ್ಲ.

ಶ್ರೀ. ಕಾಗೋಡು ತಿಮ್ಮಪ್ಪ: ಅಪರಾಧ ರಾಜಿ ಏಕೆ ಎಂದು ಹೇಳಿದರೆ ಒಬ್ಬನನ್ನು ಹಿಡಿಯುತ್ತಾರೆ, ಹಿಡಿದ ಮೇಲೆ ಅವನು ದಂಡ ಕೊಟ್ಟು ಒಪ್ಪಿಕೊಂಡರೆ ದಂಡ ಕಟ್ಟಿಸಿಕೊಂಡು ಬಿಟ್ಟು ಕಳುಹಿಸಿಕೊಡುತ್ತಾರೆ. ಚಾರ್ಜ್‌ಶೀಟ್ ಹಾಕಬೇಕಾಗುವುದು ಕೋರ್ಟ್‌ಗೆ ಕರೆದುಕೊಂಡು ಹೋಗತಕ್ಕದ್ದು ಇರುವುದಿಲ್ಲ ಈಗ ನಮ್ಮ ಮೋಟಾರ್ ವಾಹನಗಳ ಕಾಯ್ದೆಯಲ್ಲಿ ಅಲ್ಲೇ ದಂಡ ಕೊಟ್ಟು ಹೋಗತಕ್ಕಂಥಾದ್ದು ಇದೆ.

ಶ್ರೀ. ಕೆ ಎನ್ ಸುಬ್ಬಾರೆಡ್ಡಿ: ಮಾನ್ಯ ಅಧ್ಯಕ್ಷರೇ, ಇದು ಶ್ಲಾಘನೀಯವಾದ ಮಸೂದೆ. ಅಪರಾಧಗಳ ಬಗ್ಗೆ ಹೇಳುತ್ತಿದ್ದರು ಪಾಟೀಲರು ಅದು ಕರೆಕ್ಟ್. ಈಗ ಡ್ರಂಕ್ ಅಂಡ್ ಡ್ರೈವಿಂಗ್ ಎಂದು ನನಗೆ ಒಬ್ಬರು 11.00 ಗಂಟೆ ರಾತ್ರಿಯಲ್ಲಿ ಫೋನ್ ಮಾಡಿದರು. ಅವರು ಒಬ್ಬ

ವಕೀಲರು. ಅವರಿಗೆ ಕುಡಿಯುವ ಅಭ್ಯಾಸ ಇಲ್ಲ. ಆದರೆ ಪೋಲಿಸಿನವರು ಇಷ್ಟು ಕೇಸ್‌ಗಳು ತಿಂಗಳಲ್ಲಿ ಹಾಕಲೇಬೇಕು ಎಂದು ಹೇಳಿ ಅವರನ್ನು ಹಿಡಿದಿದ್ದಾರೆ. ಆಮೇಲೆ ರಾತ್ರಿ 11.30 ಗಂಟೆಯಲ್ಲಿ ಕರೆದುಕೊಂಡು ಹೋಗಿ ಚೆಕ್ ಮಾಡಿಸಿದರೆ ಅವನು ಕುಡಿದಿಲ್ಲ. ಆದ್ದರಿಂದ ಕಾನೂನನ್ನು ಇಲ್ಲಿ ಮಿಸ್‌ಯೂಸ್ ಆಗದಂತೆ ನೋಡಬೇಕಾಗುತ್ತದೆ.

ಶ್ರೀ. ಕಾಗೋಡು ತಿಮ್ಮಪ್ಪ: ಆಯಿತು.

ಉಪಾಧ್ಯಕ್ಷರು: ಪ್ರಸ್ತಾವ ಎನೆಂದರೆ 'ಕರ್ನಾಟಕ ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 2001ನೇ ಸಾಲಿನ ಕರ್ನಾಟಕ ಧೂಮಪಾನನಿಷೇಧ ಮತ್ತು ಧೂಮಪಾನ ಮಾಡದವರ ಆರೋಗ್ಯ ರಕ್ಷಣೆ ವಿಧೇಯಕವನ್ನು ಪರ್ಯಾಲೋಚಿಸುದು'.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು)

ಖಂಡ 2ರಿಂದ 15 ರವರೆಗೆ, ಎರಡೂ ಸೇರಿದಂತೆ,

ಉಪಾಧ್ಯಕ್ಷರು: ಪ್ರಸ್ತಾವ ಏನೆಂದರೆ "ಖಂಡ 2ರಿಂದ 15ರವರೆಗೆ ಎರಡೂ ಸೇರಿದಂತೆ, ಈ ವಿಧೇಯಕದ ಅಂಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ರಿಂದ 15ರವರೆಗೆ, ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು).

ಖಂಡ 1 ಇತ್ಯಾದಿ:

ಉಪಾಧ್ಯಕ್ಷರು: ಪ್ರಸ್ತಾವ ಏನೆಂದರೆ "ಮೊದಲನೇ ಖಂಡ ಶೀರ್ಷಿಕೆ ಪಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೇ ಖಂಡ ಧೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರದ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು).

ಪ್ರಸ್ತಾವ ಅಂಗೀಕಾರ

ಶ್ರೀ. ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು): ಮಾನ್ಯ ಅಧ್ಯಕ್ಷರೇ, "ಕರ್ನಾಟಕ ವಿಧಾನ ಪರಿಷತ್ತಿನಿಂದ ಅಂಗೀಕೃತ ರೂಪದಲ್ಲಿರುವ 2001ನೇ ಸಾಲಿನ ಕರ್ನಾಟಕ ಧೂಮಪಾನ ನಿಷೇಧ ಮತ್ತು ಧೂಮಪಾನ ಮಾಡದವರ ಆರೋಗ್ಯ ರಕ್ಷಣೆ ವಿದೇಯಕವನ್ನು ಈ ಸಭೆಯ ಅಂಗೀಕರಿಸಬೇಕೆಂದು ಕೋರುತ್ತೇನೆ."

ಉಪಾಧ್ಯಕ್ಷರು: ಪ್ರಸ್ತಾವ ಏನೆಂದರೆ "ಕರ್ನಾಟಕ ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 2001ನೇ ಸಾಲಿನ ಕರ್ನಾಟಕ ಧೂಮಪಾನ ನಿಷೇಧ ಮತ್ತು ಧೂಮಪಾನ ಮಾಡದವರ ಆರೋಗ್ಯ ರಕ್ಷಣೆ ವಿದೇಯಕವನ್ನು ಈ ಸಭೆಯ ಅಂಗೀಕರಿಸುವುದು"

ಪ್ರಸ್ತಾವ ಅಂಗೀಕಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

ಉಪಾಧ್ಯಕ್ಷರು: ಈಗ ಒಂದು ಪ್ರಕಟಣೆ ಇದೆ.

16. ಪ್ರಕಟಣೆ

ವಿಷಯ: ಮ್ಯಾಂಚೆಸ್ಟರ್‌ನಲ್ಲಿ ನಡೆದ 17ನೇ ಕಾಮನ್‌ವೆಲ್ತ್ ಕ್ರೀಡಾ ಕೂಟದಲ್ಲಿ ಶ್ರೇಷ್ಠ ಮಟ್ಟದ ಪ್ರದರ್ಶನ ನೀಡಿದ ಭಾರತಿಯ ಕ್ರೀಡಾಪಟುಗಳಿಗೆ ಅಭಿನಂದನೆ ಸಲ್ಲಿಸುವುದು.